


# ಕರ್ನಾಟಕ ರಾಜ್ಯದ ವಿಶಿಷ್ಠ ಸಹಕಾರ ಸಂಸ್ಥೆಗಳು


**ಪ್ರಕಟಣೆ:**

**ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ, ಬೆಂಗಳೂರು**


ನಿರ್ಮಾಣ ಭವನ, ಡಾ.ರಾಜಕುಮಾರ್ ರಸ್ತೆ, 1ನೇ ಬ್ಲಾಕ್, ರಾಜಾಜಿ ನಗರ, ಬೆಂಗಳೂರು – 560 010
ದೂರವಾಣಿ:080 23378375–80
ಇ ಮೇಲ್ : souharda@souharda.coop
ವೆಬ್ ತಾಣ: www.souharda.coop

**ಕರ್ನಾಟಕ ರಾಜ್ಯದ ವಿಶಿಷ್ಠ ಸಹಕಾರ ಸಂಸ್ಥೆಗಳು**

ಪುಟ : 64

ಮೊದಲ ಮುದ್ರಣ : 2012

ಬೆಲೆ : ರೂ. .....................

ಪ್ರಕಾಶಕರು
ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ, ಬೆಂಗಳೂರು
ನಿರ್ಮಾಣ ಭವನ, ಡಾ.ರಾಜಕುಮಾರ್ ರಸ್ತೆ, 1ನೇ ಬ್ಲಾಕ್
ರಾಜಾಜಿ ನಗರ, ಬೆಂಗಳೂರು – 560 010
ದೂರವಾಣಿ:080 23378375–80
ಇ ಮೇಲ್ : souharda@souharda.coop
ವೆಬ್ ತಾಣ: www.souharda.coop

ಮುದ್ರಕರು :
**ವರ್ಣ ಕಮ್ಯೂನಿಕೇಷನ್ಸ್**
ಬೆಂಗಳೂರು

# ಮೊದಲ ಮಾತು

ಆತ್ಮೀಯ ಸಹಕಾರಿ ಬಂಧುಗಳೆ,

ದೇಶದ ಮೊದಲ ಸಹಕಾರ ಸಂಘವನ್ನು 1904ರಲ್ಲಿ ಕರ್ನಾಟಕದ ಗದಗಿನ ಕಣಗಿನಹಾಳದಲ್ಲಿ ಪ್ರಾರಂಭಿಸುವುದರ ಮೂಲಕ ಭಾರತದ ಸಹಕಾರ ಕ್ಷೇತ್ರದಲ್ಲಿ ಮೊದಲ ಹೆಜ್ಜೆಯ ಗುರುತನ್ನು ಮೂಡಿಸಿದ್ದು ಕರ್ನಾಟಕ ರಾಜ್ಯವೆನ್ನುವುದು ನಮಗೆಲ್ಲ ಹೆಮ್ಮೆಯ ಹಾಗೂ ಸಂತೋಷದ ವಿಷಯ. ಸಹಕಾರ ಕ್ಷೇತ್ರದಲ್ಲಿನ ಬದಲಾವಣೆಗೆ ತೆರೆದುಕೊಳ್ಳುತ್ತ ಹೊಸ ಬಗೆಯ ಹಾಗೂ ವೈಶಿಷ್ಟ್ಯಪೂರ್ಣ ಸಹಕಾರ ಸಂಸ್ಥೆಗಳನ್ನು ಹುಟ್ಟುಹಾಕುತ್ತ ಕರ್ನಾಟಕದ ಸಹಕಾರ ಕ್ಷೇತ್ರ ಬಲಯುತವಾಗಿ ಬೆಳೆದು ಬಂದಿದೆ. ಪ್ರಸ್ತುತ ಕರ್ನಾಟಕದಲ್ಲಿ 1959ರ ಸಹಕಾರ ಸಂಘಗಳ ಕಾಯ್ದೆ ಹಾಗೂ ಸ್ವತಂತ್ರ ಕಾಯ್ದೆಯಾಗಿ ಜಾರಿಗೆ ಬಂದ 1997ರ ಕರ್ನಾಟಕ ಸೌಹಾರ್ದ ಸಹಕಾರ ಕಾಯ್ದೆಗಳು ಜಾರಿಯಲ್ಲಿವೆ. ಕೇವಲ ಪತ್ತಿನ ಹಾಗೂ ವಿವಿದೋದ್ದೇಶ ಸಹಕಾರ ಸಂಸ್ಥೆಗಳಲ್ಲದೆ, ವಿವಿಧ ರೀತಿಯ ವೈಶಿಷ್ಟ್ಯಪೂರ್ಣ ಉದ್ದೇಶಗಳನ್ನು ಹೊಂದಿರುವ ಪ್ರವಾಸೋದ್ಯಮ, ಮಾರುಕಟ್ಟೆ ಕೇಂದ್ರಿತ, ನೌಕರರ, ಮಹಿಳಾ ಪ್ರಧಾನ, ಸ್ವ ಸಹಾಯ, ಗ್ರಾಹಕ ಕೇಂದ್ರಿತ, ವ್ಯವಸಾಯಾಧಾರಿತ, ಶೈಕ್ಷಣಿಕ, ಕಾರ್ಮಿಕರ, ಕೈಗಾರಿಕಾ ಹಾಗೂ ವಿವಿಧ ಉದ್ದೇಶಗಳ ಹೊಸತನಗಳನ್ನು ಹೊಂದಿರುವ ಸಹಕಾರ ಸಂಸ್ಥೆಗಳು ಕರ್ನಾಟಕದ ಸಹಕಾರ ಕ್ಷೇತ್ರವನ್ನು ಬೆಳೆಸುವಲ್ಲಿ ಕಾರ್ಯೋನ್ಮುಖವಾಗಿವೆ.

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ ಬೆಂಗಳೂರು ಇದು ಕರ್ನಾಟಕ ರಾಜ್ಯ ಸೌಹಾರ್ದ ಸಹಕಾರಿ ಅಧಿನಿಯಮ 1997ರಡಿ ಶಾಸನಬದ್ಧವಾಗಿ ರಚಿತವಾದ ಸಂಸ್ಥೆಯಾಗಿದ್ದು ರಾಜ್ಯದ ಸೌಹಾರ್ದ ಸಹಕಾರಿಗಳ ಮಾತೃಸಂಸ್ಥೆಯಾಗಿ ಕಾರ್ಯನಿರ್ವಹಿಸುತ್ತಿದೆ. ರಾಜ್ಯದ ಸೌಹಾರ್ದ ಸಹಕಾರಿಗಳ ಬೆಳವಣಿಗೆಗೆ ಪೂರಕವಾಗಿ ಅನೇಕ ಪ್ರಕಟಣೆಗಳನ್ನು ಹೊರತರುವುದರ ಮೂಲಕ ಸೌಹಾರ್ದ ಸಹಕಾರ ಕ್ಷೇತ್ರದ ಹಾಗೂ ರಾಜ್ಯದ ಸಹಕಾರ ಚಳುವಳಿಯ ಪ್ರಚಾರವನ್ನು ಮಾಡುವ ಕಾರ್ಯವನ್ನು ಕೂಡ ನಿರಂತರವಾಗಿ ಮಾಡಲಾಗುತ್ತಿದೆ.

ಕರ್ನಾಟಕ ರಾಜ್ಯದಲ್ಲಿ ಜಾರಿಯಲ್ಲಿರುವ ಸಹಕಾರ ಕಾಯ್ದೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ವಿಶಿಷ್ಠ ಕಾರ್ಯಚಟುವಟಿಕೆಗಳನ್ನು ಹೊಂದಿರುವ ಸಹಕಾರ ಸಂಸ್ಥೆಗಳನ್ನು ಗುರುತಿಸಿ ಅವುಗಳ ಅಧ್ಯಯನವನ್ನು ಮಾಡುವುದರ ಮೂಲಕ ಕರ್ನಾಟಕ ರಾಜ್ಯದ ಸಹಕಾರ ಕ್ಷೇತ್ರದ ಹೊಸತನಗಳನ್ನು ಪರಿಚಯಿಸಿಕೊಳ್ಳುವುದರ ಜೊತೆಗೆ, ವೈಶಿಷ್ಟ್ಯಪೂರ್ಣ ಸಹಕಾರ ಸಂಸ್ಥೆಗಳ ಸಂಖ್ಯಾತ್ಮಕ ಹಾಗೂ ಗುಣಾತ್ಮಕ ಬೆಳವಣಿಗೆಗೆ ಪೂರಕವಾಗುವಂತೆ ಈ ಮಾಹಿತಿ ಪುಸ್ತಕವನ್ನು ಹೊರತರಲಾಗುತ್ತಿದೆ. ಸಹಕಾರ ಕ್ಷೇತ್ರದಲ್ಲಿನ ಅನೇಕ ವಿಶಿಷ್ಠ ಸಂಸ್ಥೆಗಳಲ್ಲಿ ಆಯ್ದ ಕೆಲವನ್ನು ಮಾತ್ರ ಇಲ್ಲಿ ಪರಿಚಯಿಸಲಾಗುತ್ತಿದೆ. ಹೊಸತನಗಳೆಡೆ ಸಹಕಾರಿ ಬಂಧುಗಳ ಗಮನಸೆಳೆಯುವ ಕಿರು ಪ್ರಯತ್ನ ನಮ್ಮದು. ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಈ ಪ್ರಯತ್ನ ಸಹಕಾರಿ ಬಂಧುಗಳಿಗೆ ಉಪಯುಕ್ತವಾಗುವುದೆಂದು ಭಾವಿಸುತ್ತೇನೆ.

**– ಎಸ್ ಆರ್ ಸತೀಶ್ಚಂದ್ರ**
ಅಧ್ಯಕ್ಷರು
ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು

# ಪರಿವಿಡಿ


| ಅ. 1959ರ ಸಹಕಾರ ಸಂಘಗಳ ಕಾಯ್ದೆಯಲ್ಲಿನ ವಿಶಿಷ್ಟ ಸಹಕಾರ ಸಂಘಗಳು | |
|---|---|
| 1. ದಕ್ಷಿಣ ಕನ್ನಡ ಜೇನು ವ್ಯವಸಾಯಗಾರರ ಸಹಕಾರಿ ಸಂಘ ನಿಯಮಿತ, ಪುತ್ತೂರು. | 5 |
| 2. ಕುಂಬಾರರ ಗುಡಿ ಕೈಗಾರಿಕಾ ಸಹಕಾರ ಸಂಘ ನಿಯಮಿತ, ಪುತ್ತೂರು. | 10 |
| 3. ಚರಕ – ಗ್ರಾಮೀಣಾಭಿವೃದ್ಧಿಯ ಹೊಸ ಸಾಧ್ಯತೆ | 13 |
| 4. ಟ್ರಾನ್ಸ್‌ಪೋರ್ಟ್ ಕೋ–ಆಪರೇಟಿವ್ ಸೊಸೈಟಿ ಲಿ., ಕೊಪ್ಪ (ಸಹಕಾರ ಸಾರಿಗೆ) | 17 |
| 5. ಬೆಳ್ತಂಗಡಿ ತಾಲೂಕು ರಬ್ಬರು ಬೆಳೆಗಾರರ ಮಾರಾಟ ಮತ್ತು ಸಂಸ್ಕರಣ ಸಹಕಾರಿ ಸಂಘ (ನಿ), ಉಜಿರೆ | 22 |
| 6. ಕೊಡಗಿನ ಸಹಕಾರ ದವಸ ಭಂಡಾರಗಳು | 27 |
| 7. ಶ್ರೀ ಜಗದ್ಗುರು ಗುರುಸಿದ್ದೇಶ್ವರ ಸಹಕಾರಿ ಆಸ್ಪತ್ರೆ ಸೊಸಾಯಿಟಿ ನಿ, ಘಟಪ್ರಭಾ ಬೆಳಗಾವಿ ಜಿಲ್ಲೆ | 31 |
| 8. ಕ್ರೀಡಾ ಉತ್ತೇಜನ ಹಾಗೂ ಅಭಿವೃದ್ದಿ ಸಹಕಾರ ನಿ., ಚಂದರಗಿ ಬೆಳಗಾವಿ ಜಿಲ್ಲೆ | 33 |
| 9. ಹುಕ್ಕೇರಿ ಗ್ರಾಮೀಣ ವಿದ್ಯುತ್ ಸಹಕಾರಿ ಸಂಘ ನಿ., ಹುಕ್ಕೇರಿ | 35 |
| 10. ಶ್ರೀ ಗಾಡಗೇಬಾಬಾ(ವಾ) ಕೊ–ಆಪ್ ಕ್ರೇಡಿಟ್ ಸೊಸಾಯಿಟಿ ಲಿ, ಬೆಳಗಾವಿ. | 39 |
| 11. ದಿ. ಗರೀಬಿ ಹಠಾವೋ ಸಹಕಾರಿ ಸಂಘ ನಿಯಮಿತ, ರಬಕವಿ., | 41 |
| 12. ದಿ ತೋಟಗಾರ್ಸ್ ಕೋಪರೇಟಿವ್ ಸೇಲ್ಸ್ ಸೋಸ್ಯಾಟಿ ಲಿ., ಶಿರಸಿ | 42 |
| 13. ದಿ ನಾಗರಬೈಲ್ ಉಪ್ಪಿನ ಮಾಲೀಕರ ಸಹಕಾರಿ ಸಂಘ ನಿ., ಸಾಣಿಕಟ್ಟಾ | 44 |
| | |
| ಆ. 1997ರ ಸೌಹಾರ್ದ ಸಹಕಾರ ಕಾಯ್ದೆಯಲ್ಲಿನ ವಿಶಿಷ್ಟ ಸೌಹಾರ್ದ ಸಹಕಾರ ಸಂಸ್ಥೆಗಳು. | 45 |
| 1. ಸ್ಪೈಸ್ ರೂಟ್ ಸೌಹಾರ್ದ ಸಹಕಾರಿ ನಿ., ಶಿರಸಿ | 47 |
| 2. ಸುವಿಧಾ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ., ಸಾಗರ | 50 |
| 3. ಹಿರೇಕೆರೂರ ತಾಲೂಕಾ ವಿದ್ಯಾವರ್ಧಕ ಸೌಹಾರ್ದ ಸಹಕಾರಿ ನಿಯಮಿತ ಹಿರೇಕೆರೂರ | 52 |
| 4. ಕದಂಬ ಮಾರ್ಕೆಟಿಂಗ್ ಸೌಹಾರ್ದ ಸಹಕಾರಿ ನಿ., ಶಿರಸಿ | 56 |
| 5. ಶ್ರೀ ಸಿದ್ದಗಂಗಾ ವಿದ್ಯಾಸಂಸ್ಥೆ ನೌಕರರ ಪತ್ತಿನ ಸೌಹಾರ್ದ ಸಹಕಾರಿ ನಿ., ತುಮಕೂರು | 58 |
| 6. ವಿಜ್ಞಾನೇಶ್ವರ ಸೌಹಾರ್ದ ಸಹಕಾರಿ ನಿ., ಗುಲ್ಬರ್ಗಾ | 59 |
| 7. ಶ್ರೀ ಜ್ಯೋತಿ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ಎಕ್ಸಾಂಬಾ | 60 |
| 8. ಮೈಸೂರು ಹಾಗೂ ಚಾಮರಾಜನಗರ ಜಿಲ್ಲಾ ವಾಹನ ಮಾಲೀಕರ ಸೌಹಾರ್ದ ಸಹಕಾರಿ ನಿ., ಮೈಸೂರು | 62 |
| 9. ಬಿಜಾಪುರ ತೋಟಗಾರಿಕಾ ಸೌಹಾರ್ದ ಸಹಕಾರಿ ನಿ., ಬಿಜಾಪುರ | 63 |




## ದಕ್ಷಿಣ ಕನ್ನಡ ಜೇನು ವ್ಯವಸಾಯಗಾರರ ಸಹಕಾರಿ ಸಂಘ ನಿಯಮಿತ, ಪುತ್ತೂರು

ಪ್ರಪಂಚದಲ್ಲಿ ನಾನಾ ರೀತಿಯ ಪ್ರಾಣಿಗಳು, ಕ್ರೀಮಿಕೀಟಗಳಿದ್ದು, ಅವುಗಳಲ್ಲಿ ಮನುಷ್ಯರಿಗೆ ಉಪಯೋಗವಾಗುವ ಕ್ರಿಮಿಕೀಟಗಳಲ್ಲಿ ಜೇನು ನೊಣಗಳು ಪ್ರಾಮುಖ ಸ್ಥಾನವನ್ನು ಪಡೆದಿದೆ.ಜೇನು ಅನ್ನುವುದು ಎಲ್ಲರಿಗೂ ಅಚ್ಚುಮೆಚ್ಚಾಗಿರುವ ಒಂದು ವಸ್ತುವಾಗಿದ್ದು, ಹಲವಾರು ಖಾಯಿಲೆಗಳಿಗೆ, ಪೌಷ್ಠಿಕ ಆಹಾರಗಳಿಗೆ, ಧಾರ್ಮಿಕ ಕ್ರಿಯೆಗಳಿಗೆ ಉಪಯೋಗವಾಗುವಂತಹ ವಸ್ತು. ಜೇನು ನೊಣಗಳು ಹೂವಿಂದ ಹೂವಿಗೆ ಹಾರಿ ಹೂವುಗಳ ಪರಾಗಸ್ಪರ್ಶವನ್ನು ಮಾಡಿ ಮಕರಂದವನ್ನು ಹೀರುತ್ತಾ, ಜೇನುಗೂಡಿಗೆ ಮರಳಿ ಜೇನಿನ ಎರಿಗಳಲ್ಲಿ ಜೇನು ತುಂಬುವ ಕಾರ್ಯವನ್ನು ಜೇನು ನೊಣಗಳು ಮಾಡುತ್ತವೆ. ಇಂತಹ ಜೇನುನೊಣಗಳಿಂದ ಜೇನನ್ನು ತೆಗೆಯುವ ಕೆಲಸಕ್ಕೆ ವೃತ್ತಿಪರತೆಯನ್ನು ನೀಡಲು ಹುಟ್ಟಿಕೊಂಡಿರುವ ಸಂಸ್ಥೆಯೇ "ದಕ್ಷಿಣ ಕನ್ನಡ ಜೇನು ವ್ಯವಸಾಯಗಾರರ ಸಹಕಾರಿ ಸಂಘ ಲಿ., ಪುತ್ತೂರು.

1938ರಲ್ಲಿ ಕೊಡಗಿನ ವಿರಾಜಪೇಟೆಯ ಪೊನ್ನಂಪೇಟೆಯ ಶ್ರೀ ರಾಮಕೃಷ್ಣಾಶ್ರಮದ ಶ್ರೀ ಶಾಂಭವಾನಂದ ಸ್ವಾಮೀಜಿಯವರ ನೇತೃತ್ವದಲ್ಲಿ ಪ್ರಾರಂಭಗೊಂಡ ಜೇನು ಕೃಷಿಕರ ಸಹಕಾರಿ ಸಂಘದಲ್ಲಿ ಜೇನು ವ್ಯವಸಾಯ ಅಭಿವೃದ್ಧಿ ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ಪುತ್ತೂರಿನ ಶ್ರೀ ಪೈಲೂರು ಲಕ್ಷ್ಮಿನಾರಾಯಣರವರು ತಮ್ಮ ಹುಟ್ಟೂರಿನಲ್ಲಿ ಇದೇ ರೀತಿಯ ಒಂದು ಸಹಕಾರಿ ಸಂಘವನ್ನು ಪ್ರಾರಂಭಿಸುವ ಪ್ರಸ್ತಾಪವಿಟ್ಟರು. ಇದಕ್ಕೆ ಸೂಕ್ತವಾಗಿ ಸ್ಪಂದಿಸಿದ ಶ್ರೀ ಕಂಜರ್ಪಣೆ ಗೋಪಾಲಕೃಷ್ಣಯ್ಯ, ಶ್ರೀ ಪೈಲೂರು ನಾರಾಯಣ ರಾವ್, ಶ್ರೀ ಪೈಲೂರು ಶಿವರಾಮಯ್ಯನವರು 21.05.1938 ರಲ್ಲಿ "ಪುತ್ತೂರು ತಾಲೂಕು ಸಹಕಾರಿ ಜೇನು ವ್ಯವಸಾಯ, ಜೇನು ಸಂಗ್ರಹ ಮತ್ತು ಮಾರಾಟ ಸಂಘ" ಎಂಬ ಸಂಸ್ಥೆಯನ್ನು ಚೊಕ್ಕಾಡಿ ಕೇಂದ್ರದಲ್ಲಿ ಸ್ಥಾಪಿಸಿದರು. ದಿನಾಂಕ: 05.06.1938 ರಲ್ಲಿ ನಡೆದ ಸಂಘದ ಪ್ರಥಮ ಮಹಾಸಭೆಯಲ್ಲಿ ಶ್ರೀ ಪೈಲೂರು ನಾರಾಯಣರಾವ್‌ರವರು ಅಧ್ಯಕ್ಷರಾಗಿಯೂ ಶ್ರೀ ಪೈಲೂರು ಶಿವರಾಮಯ್ಯನವರು ಕಾರ್ಯದರ್ಶಿಗಳಾಯೂ ಚುನಾಯಿಸಲ್ಪಟ್ಟರು.

ಶಾಸ್ತ್ರೀಯ ರೀತಿಯ ಜೇನು ಕೃಷಿ ಕುರಿತು ಮಾಹಿತಿ ನೀಡುವುದು, ಜೇನುಕೃಷಿಗೆ ಅವಶ್ಯಕವಾದ ಎಲ್ಲಾ ಉಪಕರಣಗಳನ್ನೊದಗಿಸಿ, ಕ್ರಮಬದ್ಧವಾಗಿ ಸಂಗ್ರಹಿಸಿದ ಜೇನನ್ನು ಖರೀದಿಸಿ ಮಾರಾಟದ ವ್ಯವಸ್ಥೆಗೊಳಿಸುವುದು ಸಂಘದ ಪ್ರಮುಖ ಉದ್ದೇಶವಾಗಿತ್ತು. ದಿ:26.10.1946 ರಂದು ಸಂಘದ ಕಾರ್ಯಕ್ಷೇತ್ರವನ್ನು ದಕ್ಷಿಣ ಕನ್ನಡ ಜಿಲ್ಲೆಗೆ ವಿಸ್ತರಿಸಿ ಹೆಸರನ್ನು "ದಕ್ಷಿಣ ಕನ್ನಡ ಜೇನು ವ್ಯವಸಾಯ, ಜೇನು ಸಂಗ್ರಹ ಮತ್ತು ಮಾರಾಟ ಸಂಘ"ವೆಂದು ಮಾರ್ಪಡಿಸಲಾಯಿತು. 1954ರಿಂದ ಅಖಿಲ ಭಾರತ ಖಾದಿ ಮತ್ತು ಗ್ರಾಮೋದ್ಯೋಗ ಆಯೋಗವು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಜೇನು ಕೃಷಿಗೆ ಪ್ರೋತ್ಸಾಹ ನೀಡಲಾರಂಭಿಸಿತು. ಮಂಗಳೂರಲ್ಲಿ ಜೇನು ಕೃಷಿ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಕಛೇರಿ ತೆರೆದು, ಜಿಲ್ಲಾದ್ಯಂತ ಅಲ್ಲಲ್ಲಿ ಉಪಕೇಂದ್ರಗಳು ಕಾರ್ಯಾರಂಭಗೊಂಡಿತು. ಪ್ರತಿ ಕೇಂದ್ರದಲ್ಲಿ ಒಬ್ಬೊಬ್ಬ ಫೀಲ್ಡ್‌ಮೆನ್‌ರಿದ್ದು ಸುತ್ತಮುತ್ತಲಿನ ಗ್ರಾಮಸ್ಥರಿಗೆ ಮಾಹಿತಿ ನೀಡುತ್ತಿದ್ದರು. ಇದರಿಂದ ಕೆಲವು ಮಾದರಿ ಕೇಂದ್ರಗಳು, ಬೀ ಕ್ಲಬ್‌ಗಳು ತೆರೆಯಲ್ಪಟ್ಟು ಜನರಿಗೆ ಜೇನು ಕೃಷಿ ಕುರಿತು ಪ್ರೇರಣೆ ನೀಡುವ ಕಾರ್ಯ ನಡೆಯಿತು. ಶ್ರೀ ಕಲ್ಲಾರು ವೆಂಕಟ್ರಮಣನಯ್ಯನವರು 1957–58ರಲ್ಲಿ ಜೇನುಮೇಣದ ಹಾಳೆ ತಯಾರಿಸುವ ಯಂತ್ರವನ್ನು ಜರ್ಮನಿಯಿಂದ ತರಿಸಿದರು ಮತ್ತು ಸಂಘದ ಕಛೇರಿಗೆ ಅಗತ್ಯವಿದ್ದ ಸ್ಥಳಾವಕಾಶವನ್ನು ಯಾವುದೇ ಪ್ರತಿಫಲ ಪಡೆಯದೇ ತಮ್ಮ ಮನೆಯನ್ನೇ ನೀಡಿ ಸಹಕರಿಸಿದರು.

1981ರಲ್ಲಿ ಜೇನು ಕೃಷಿಕರ ಅಗತ್ಯ ಮಾಹಿತಿಯನ್ನು ಒದಗಿಸುವ ಉದ್ದೇಶದಿಂದ "ಮಧು ಪ್ರಪಂಚ" ಎಂಬ ತ್ರೈಮಾಸಿಕ ಪತ್ರಿಕೆ ಪ್ರಾರಂಭಿಸಲಾಯಿತು. ನಂತರದ ದಿನಗಳಲ್ಲಿ ಸಂಘದ ಅಧ್ಯಕ್ಷ ಮತ್ತು ಕಾರ್ಯದರ್ಶಿಯವರ ನಿರಂತರ ಪ್ರಯತ್ನದಿಂದ ಹಲವಾರು ತೊಂದರೆಗಳ ನಡುವೆಯು ಸಂಸ್ಥೆ ಉತ್ತಮವಾಗಿ ಬೆಳೆಯತೊಡಗಿತು. 1978ರಲ್ಲಿ ಸಂಸ್ಥೆಯ ಮುಖ್ಯ ಕಾರ್ಯಾಲಯವಿರುವ ಕಟ್ಟಡವನ್ನು ಖರೀದಿಸಲಾಯಿತು. ಕಟ್ಟಡಕ್ಕೆ "ಮಾಧುರಿ" ಎಂದು ಹೆಸರಿಡಲಾಯಿತು. ನಂತರದಲ್ಲಿ ಖಾದಿ ಕಮೀಷನ್‌ನಿಂದ ದೊರಕುತ್ತಿದ್ದ ಸೌಲಭ್ಯ ವರ್ಷದಿಂದ ವರ್ಷಕ್ಕೆ ಕಡಿಮೆಯಾಗಿ ಉಪಕೇಂದ್ರಗಳ ಸಂಖ್ಯೆ ಕೇವಲ 2ಕ್ಕೆ ಇಳಿದು ಪ್ರಗತಿ ಕಾರ್ಯ ಕುಂಠಿತವಾಗಡೊಡಗಿತು.

1982ರಲ್ಲಿ ಸುಳ್ಯದಲ್ಲಿರುವ ಸದಸ್ಯರ ಅನುಕೂಲಕ್ಕಾಗಿ ಸಂಘದ ಶಾಖೆಯನ್ನು ಸುಳ್ಯದಲ್ಲಿ ತೆರೆಯಲಾಯಿತು ಅದೇ ವರ್ಷ ಪುತ್ತೂರಿನಲ್ಲಿ ಗ್ರಾಮೋದ್ಯೋಗ ಉತ್ಪನ್ನ ಮಾರಾಟ ಕೇಂದ್ರವನ್ನು ತೆರೆಯಲಾಯಿತು. 1982–83ರಲ್ಲಿ ಖಾದಿ ಕಮಿಷನ್ನಿನ ನೆರವಿನಿಂದ ಗುತ್ತಿಗಾರಿನಲ್ಲಿ ಜೇನು ಅಭಿವೃದ್ಧಿ ಘಟಕವನ್ನು ತೆರೆಯಲಾಯಿತು ಇದೇ ವರ್ಷ ಸಹಕಾರ ಸಂಘದ ಸುಳ್ಯದ ಶಾಖೆಗೆ ಸರಕಾರ ಸ್ಥಳ ಮಂಜೂರು ಮಾಡಿತು. 1982ರಲ್ಲಿ ಧರ್ಮಸ್ಥಳದಲ್ಲಿ ಜರುಗಿದ ಮಹಾಮಸ್ತಾಕಭಿಷೇಕದ ಸಂದರ್ಭದಲ್ಲಿ ಜೇನು ಕೃಷಿ ಪ್ರದರ್ಶನ ಏರ್ಪಡಿಸಿದಲ್ಲದೆ, ಜೇನಿನ ತಂಪು ಪಾನೀಯವನ್ನು ವಿತರಿಸಿ ಜನಮೆಚ್ಚುಗೆ ಗಳಿಸಿತು.

ನಂತರದಲ್ಲಿ 1985 ರಲ್ಲಿ ಉಡುಪಿಯಲ್ಲಿ ಸಂಘದ ಶಾಖೆಯನ್ನು ತೆರೆಯಲಾಯಿತು. ಮದ್ರಾಸಿಗೆ ಜೇನು ಪೂರೈಕೆ ಬಗ್ಗೆ ಪ್ರತ್ಯೇಕ ಏಜೆಂಟರನ್ನು ನೇಮಿಸಲಾಯಿತು. 1991ರಲ್ಲಿ ಸುಳ್ಯ ಶಾಖೆಯ ಕಟ್ಟಡವನ್ನು ನಿರ್ಮಿಸಲಾಯಿತು. ಪ್ರಸ್ತುತ ಸದರಿ ಕಟ್ಟಡದ ಮೊದಲನೇ ಅಂತಸ್ತನ್ನು ನಿರ್ಮಿಸಲು ಇಲಾಖೆಯ ಅನುಮತಿಯನ್ನು ಪಡೆದು ಕೆಲಸವು ಪ್ರಗತಿಯಲ್ಲಿರುತ್ತದೆ. 2002ರಲ್ಲಿ ರಾಷ್ಟ್ರೀಯ ತೋಟಗಾರಿಕಾ ಮಿಷನ್‌ನ ಸಾಲದ ನೆರವಿನೊಂದಿಗೆ ಪತ್ತೂರಿನಲ್ಲಿ "ಮಾಧುರಿಸೌಧ"ವನ್ನು ನಿರ್ಮಿಸಲಾಯಿತು. ಇದೇ ಸಂದರ್ಭದಲ್ಲಿ ಅಖಿಲ ಭಾರತ ಖಾದಿ ಮತ್ತು ಗ್ರಾಮೋದ್ಯೋಗ ಆಯೋಗದ ಮೂಲಕ ಯುನೈಡೆಡ್ ನೈಶನ್ ಡಿವೆಲಪ್‌ಮೆಂಟ್ ಯೋಜನೆಯಡಿಯಲ್ಲಿ ಜೇನು ಸಂಸ್ಕರಣಾ ಘಟಕವನ್ನು ಖರೀದಿಸಲು ಮತ್ತು ಜೇನು ಪ್ರಯೋಗಶಾಲೆ ಮತ್ತು ಜೇನು ವಸ್ತು ಸಂಗ್ರಹಣಾಲಯ, ಸೋಲಾರ್ ವ್ಯವಸ್ಥೆ ಮತ್ತು ಸ್ಟೀಲ್ ಪಾತ್ರೆಗಳನ್ನು

ಖರೀದಿಸಲು ಅನುದಾನವನ್ನು ಪಡೆಯಲಾಯಿತು. 1989ರಲ್ಲಿ ಸುವರ್ಣ ಮಹೋತ್ಸವವನ್ನು ಆಚರಿಸಿಕೊಂಡ ಸಂಘವು 2007ರಲ್ಲಿ "ಮಧು ಪ್ರಪಂಚ" ಪತ್ರಿಕೆಯ ರಜತ ಮಹೋತ್ಸವವನ್ನು ಆಚರಿಸಲಾಯಿತು. ಸಹಕಾರ ಸಂಘವು ರಾಷ್ಟ್ರೀಯ ಮತ್ತು ರಾಜ್ಯಮಟ್ಟದ ಫಲಪುಷ್ಪ ಪ್ರದರ್ಶನ, ಜಿಲ್ಲಾ ಮತ್ತು ತಾಲೂಕು ಮಟ್ಟದ ಕೃಷಿ ಮೇಳಗಳಲ್ಲಿ ಭಾಗವಹಿಸಿ ಜೇನುಕೃಷಿಯ ಬಗ್ಗೆ ಮಾಹಿತಿಯನ್ನು ಜನರಿಗೆ ಒದಗಿಸುತ್ತದೆ.

ದಕ್ಷಿಣ ಕನ್ನಡ ಜೇನು ವ್ಯವಸಾಯಗಾರರ ಸಹಕಾರಿ ಸಂಘವು ಪ್ರಸ್ತುತ 2159 ಖಾಯಂ ಸದಸ್ಯರನ್ನು ಹೊಂದಿದ್ದು, ಇವರಲ್ಲಿ ಸುಮಾರು 1600 ಸದಸ್ಯರು ಜೇನು ಕೃಷಿಯಲ್ಲಿ ಸಕ್ರಿಯವಾಗಿ ತಮ್ಮನ್ನು ತೊಡಗಿಸಿ ಕೊಂಡಿರುತ್ತಾರೆ. ಸಹಕಾರಿ ಸಂಘವು ತನ್ನ ಸದಸ್ಯರಿಗೆ ಜೇನು ಕೃಷಿಗೆ ಅವಶ್ಯಕವಾದ ಜೇನು ಪೆಟ್ಟಿಗೆ, ಜೇನುಮೇಣ, ಜೇನು ಕೃಷಿ ಉಪಕರಣಗಳನ್ನು ಒದಗಿಸಿ ಜೇನು ಕೃಷಿಗೆ ಉತ್ತೇಜನ ನೀಡುತ್ತದೆ. ಜೊತೆಗೆ ಸಹಕಾರಿ ಸಂಘವು ತನ್ನ ಸದಸ್ಯರಿಗೆ ಜೇನು ವ್ಯವಸಾಯಕ್ಕೆ ಅನುಕೂಲಕ್ಕಾಗಿ ಅವರ ಅಗತ್ಯಕ್ಕೆ ತಕ್ಕಂತೆ ಸೂಕ್ತ ದಾಖಲೆಗಳನ್ನು ಪಡೆದು ಸಾಲವನ್ನು ಒದಗಿಸುವ ಕೆಲಸವನ್ನು ಮಾಡುತ್ತದೆ. ತನ್ನ ಸದಸ್ಯರು ಬೆಳೆಯುವ ಜೇನನ್ನು ಮಾರುಕಟ್ಟೆ ದರದಲ್ಲಿ ಖರೀದಿಸಿ ಅದನ್ನು ಸಂಘದಲ್ಲಿರುವ ಆಧುನಿಕ ಸುಸಜ್ಜಿತ ಸಂಸ್ಕರಣಾ ಘಟಕಗಳ ಮೂಲಕ ಸಂಸ್ಕರಿಸಿ, ವರ್ಗೀಕರಿಸಿ, ಪ್ಯಾಕಿಂಗ್ ಮಾಡಿ ಉತ್ತಮ ಗುಣಮಟ್ಟದ ಆಗ್ ಮಾರ್ಕ್‌ನ್ನು ಹೊಂದಿರುವ "ಮಾಧುರಿ" ಜೇನನ್ನು ಗ್ರಾಹಕರಿಗೆ ಒದಗಿಸುತ್ತದೆ. ಜೇನುತುಪ್ಪದ ಜೊತೆಗೆ ಮಾಧುರಿ ಹನಿ ಜಾಮ್, ಮಾಧುರಿ ಕೋಕಮ್ ಸಿರಪ್‌ನ್ನು ಗ್ರಾಹಕರಿಗೆ ಒದಗಿಸುತ್ತದೆ. ಸಹಕಾರ ಸಂಘವು ತಯಾರಿಸುವ ಜೇನಿಗೆ ಕರ್ನಾಟಕ ಮತ್ತು ತಮಿಳುನಾಡಿನಾದ್ಯಂತ ಮಾರುಕಟ್ಟೆಯನ್ನು ಹೊಂದಿದೆ.

ಸಹಕಾರಿ ಸಂಘವು ತನ್ನ ಪ್ರಧಾನ ಕಛೇರಿಯಾದ ಮಾಧುರಿಸೌಧದಲ್ಲಿ ಅತ್ಯುತ್ತಮ ಗುಣಮಟ್ಟದ ಆಧುನಿಕ ಜೇನು ಸಂಸ್ಕರಣಾ ಘಟಕವನ್ನು ಹೊಂದಿದ್ದು ಸದರಿ ಘಟಕದ ಯಂತ್ರಗಳ ಮೂಲಕ 6 ರಿಂದ 8 ಘಂಟೆಗಳಲ್ಲಿ ಸುಮಾರು 250 ಕೆ.ಜಿ ಗಳಷ್ಟು ಜೇನನ್ನು ಶುದ್ಧೀಕರಿಸುವ ಸಾಮರ್ಥ್ಯವನ್ನು ಹೊಂದಿದೆ. ಜೊತೆಗೆ ಸಹಕಾರ ಸಂಘವು ಜೇನಿನ ಗುಣಮಟ್ಟವನ್ನು ತಿಳಿಯಲು ಸುಸ್ಸಜಿತವಾದ ಪ್ರಯೋಗಶಾಲೆಯನ್ನು ಹೊಂದಿದ್ದು ಸದರಿ ಪ್ರಯೋಗಶಾಲೆಯಲ್ಲಿ ತನ್ನ ಸದಸ್ಯರು ತರುವ ಜೇನಿನ ಪರಿಶೀಲನೆ ನಡೆಸಿ ಅದರ ಗುಣಮಟ್ಟಗಳನ್ನು ನಿರ್ಧರಿಸಿ ನಂತರದಲ್ಲಿ ಶುದ್ಧೀಕರಣ ಕಾರ್ಯವನ್ನು ನಡೆಸುತ್ತದೆ. ಸಹಕಾರಿ ಸಂಘವು ಜೇನುಕೃಷಿಗೆ ಸಂಬಂಧಿಸಿದ ಸಂಗ್ರಹಣಾಲಯ(ಒಣಜಣಟ) ಹೊಂದಿದ್ದು ಸದರಿ ಸಂಗ್ರಹಣಾಲಯದಲ್ಲಿ ಜೇನಿನ ವಿವಿಧ ಮಾದರಿಗಳು, ಜೇನಿನ ಮೇಣ, ಜೇನು ತೆಗೆಯಲು ಬಳಸುವ ಯಂತ್ರ ಜೇನಿಗೆ ಸಂಬಂಧಿಸಿದ ಎಲ್ಲಾ ವಿವರಗಳನ್ನು ಹೊಂದಿದೆ. ಇದು ಜೇನು ಕೃಷಿಯ ಬಗ್ಗೆ ಸದಸ್ಯರು ತಿಳಿಯಲು ಉಪಯುಕ್ತವಾಗಿದೆ.

ಸಹಕಾರಿ ಸಂಘವು ತನ್ನ ಸದಸ್ಯರಿಗೆ ಜೇನು ಕೃಷಿಯಿಂದ ಜೇನಿನ ಕಡಿತದಿಂದ ತಪ್ಪಿಸಿಕೊಳ್ಳಲು ಅವಶ್ಯಕವಾದ ವಸ್ತುಗಳಾದ ಮುಖಪರದೆ, ಕೈಕವಚ ಮೊದಲಾದ ವಸ್ತುಗಳನ್ನು ತನ್ನ ಸದಸ್ಯರಿಗೆ ಒದಗಿಸುತ್ತದೆ. ಸಹಕಾರಿ ಸಂಘವು ಸದಸ್ಯರಿಂದ ಪಡೆದ ಜೇನನ್ನು ಶುದ್ಧೀಕರಿಸಿ ಅದನ್ನು ಸಂರಕ್ಷಿಸಲು ಸ್ಟೀಲ್‌ನ ದೊಡ್ಡ ದೊಡ್ಡ ಪಾತ್ರೆಗಳನ್ನು ಹೊಂದಿದೆ. ಪ್ಲಾಸ್ಟಿಕ್ ಬಳಕೆಯಿಂದ ಜೇನಿನ ಮೇಲೆ ಪರಿಣಾಮ ಬೀರುವುದನ್ನು ತಪ್ಪಿಸಲು ಸಹಕಾರಿ ಸಂಘವು ಈ ರೀತಿಯ ಸ್ಟೀಲ್‌ನ ಪಾತ್ರೆಗಳನ್ನು ಉಪಯೋಗಿಸುತ್ತದೆ. ಸಂಘವು ತಾನು ನಡೆಸುವ ಶುದ್ಧಿಕರಣ ಪ್ರಕ್ರಿಯೆಯಲ್ಲಿ ಜೇನಿನಲ್ಲಿರುವ ಹೆಚ್ಚಿರುವ ತೇವಾಂಶವನ್ನು ತೆಗೆಯಲು ವಿಶಿಷ್ಟ ರೀತಿಯಲ್ಲಿ ಮೈಯಿಚ್ಚರ್ ಕಡಿಮೆಗೊಳಿಸುವ ಪ್ರಕ್ರಿಯೆಯನ್ನು ನಡೆಸುತ್ತಿವೆ. ಇದರಿಂದ ಸಹಕಾರ ಸಂಘವು ತಮ್ಮ ಗ್ರಾಹಕರಿಗೆ ಉತ್ತಮ ಗುಣಮಟ್ಟದ ಜೇನನ್ನು ನೀಡಲು ಸಹಕಾರಿಯಾಗಿದೆ. ಆದರೆ ಇದರಿಂದ 5 ರಿಂದ 6% ನಷ್ಟು ಜೇನು ನಷ್ಟವಾಗುವ ಸಂಭವಗಳಿದ್ದರೂ, ಗ್ರಾಹಕರಿಗೆ ಉತ್ತಮ ಗುಣಮಟ್ಟದ ಜೇನನ್ನು ಒದಗಿಸುವ ದೃಷ್ಟಿಯಿಂದ ಸಹಕಾರ ಸಂಘವು ಈ ಕ್ರಮ ಕೈಗೊಂಡಿದೆ.

ಸಹಕಾರ ಸಂಘವು ತನ್ನ ಸದಸ್ಯರಿಗೆ ಪಾಸ್‌ಬುಕ್ಕನ್ನು ಒದಗಿಸಿ ಅವರು ಸಹಕಾರಿ ಸಂಘಕ್ಕೆ ನೀಡುವ ಜೇನನ್ನು ಸದರಿ ಪಾಸ್‌ಬುಕ್‌ನಲ್ಲಿ ನಮೂದಿಸುವ ವ್ಯವಸ್ಥೆ ಇರುತ್ತದೆ. ಇದರ ಆಧಾರದಲ್ಲಿ ಸಹಕಾರ ಸಂಘವು ತನ್ನ ಸಾಮಾನ್ಯ ಸಭೆಯಲ್ಲಿ ವರ್ಷದಲ್ಲಿ 250 ಕೆ.ಜಿ ಗಿಂತಲು ಹೆಚ್ಚಿನ ಜೇನನ್ನು ನೀಡಿದವರಿಗೆ ಪ್ರಶಸ್ತಿ ನೀಡಿ ಗೌರವಿಸುವ ಕೆಲಸವನ್ನು ಮಾಡುತ್ತಿದೆ. 1997 ರಿಂದ 2001–02ರವರೆಗೆ ಸಹಕಾರ ಸಂಘವು ತನ್ನ ಸದಸ್ಯರಿಗೆ ಶೇಕಡಾ 25ರಷ್ಟು ಡಿವಿಡೆಂಟನ್ನು ಹಂಚಿರುತ್ತದೆ.

ಸಹಕಾರ ಸಂಘಕ್ಕೆ ಸುಳ್ಯ ಭಾಗದಲ್ಲಿ ಹೆಚ್ಚಿನ ಪ್ರಮಾಣದ ಜೇನು ಸಂಗ್ರಹವಾಗುತ್ತಿದೆ. ಸಂಘದ ಹಲವಾರು ಸದಸ್ಯರು ಜೇನು ಕೃಷಿಯನ್ನು ತಮ್ಮ ಮುಖ್ಯ ಕಸುಬಾಗಿ ಸ್ವೀಕರಿಸಿ ಜೀವನ ನಿರ್ವಹಿಸುತ್ತಿದ್ದಾರೆ. ಸಹಕಾರಿ ಸಂಘವು ವರ್ಷದಲ್ಲಿ 60,000 ರಿಂದ 70,000 ಲೀ. ವರೆಗೆ ಜೇನನ್ನು ಉತ್ಪಾದನೆ ಮಾಡುತ್ತಿದೆ. ಜೇನುಕುಟುಂಬಗಳಿಗೆ ತಗಲುವ ವೈರಸ್‌ನಿಂದಾಗಿ ಜೇನು ಕೃಷಿ ಕಡಿಮೆಯಾಗಿದ್ದು ಈ ಬಗ್ಗೆ ಈಗಾಗಲೇ ರಾಜ್ಯ ಸರ್ಕಾರದ ಗಮನಕ್ಕೆ ತಂದಿದ್ದು ಸರ್ಕಾರ ಈ ಬಗ್ಗೆ ಕ್ರಮ ವಹಿಸಿದ್ದಲ್ಲಿ ಜೇನು ಕೃಷಿ ಇನ್ನೂ ಅಭಿವೃದ್ದಿಪಡಿಸಲು ಸಾಧ್ಯ. ಸಹಕಾರ ಸಂಘವು ಪ್ರತಿಷ್ಠಿತ ಸಹಕಾರಿ ಸಂಸ್ಥೆಯಾಗಿರುವ ಕ್ಯಾಂಪ್ಕೊ ಸಂಸ್ಥೆಯ ಸಹಯೋಗದಲ್ಲಿ ಮಾರುಕಟ್ಟೆ ವ್ಯವಸ್ಥೆ ಮಾಡುವ ಕಾರ್ಯ ಪ್ರಗತಿಯಲ್ಲಿರುತ್ತದೆ.

ಜೇನುಸಾಕಣೆ ಒಂದು ವ್ಯವಸಾಯವು ಹೌದು ಜೊತೆಗೆ ಇದೊಂದು ಉಪವೃತ್ತಿ, ಜೇನುಕುಟುಂಬಗಳಿಂದ ಜೇನು ಸಂಗ್ರಹಣೆ ಜೊತೆಗೆ ಜೇನು ಕುಟುಂಬಗಳ ಅಭಿವೃದ್ಧಿಗೆ ಸಹಕಾರ ಸಂಘವು ಪ್ರಯತ್ನಿಸುತ್ತಿದೆ. ಸಹಕಾರ ಸಂಘದ ಅಧ್ಯಕ್ಷರಾದ ಶ್ರೀ ಜಿ.ಪಿ.ಶ್ಯಾಮ್‌ಭಟ್ ರವರು ಪ್ರತಿ ವರ್ಷ ಕನಿಷ್ಠ 15 ಜೇನು ಕುಟುಂಬಗಳನ್ನು ಬೇರೆಯವರಿಗೆ ನೀಡಿ ಈ ಮೂಲಕ ಜೇನು ಕುಟುಂಬದ ಅಭಿವೃದ್ಧಿಗೆ ಪಣ ತೊಟ್ಟಿರುತ್ತಾರೆ. ಜೇನು ಕೃಷಿಯು ಮನಸ್ಸಿಗೆ ತೃಪ್ತಿ ನೀಡುವುದರ ಜೊತೆಗೆ ಬೆಳೆಗಾರರ ಆರ್ಥಿಕ ಅಭಿವೃದ್ಧಿಗೆ ಸಹಕರಿಸುತ್ತದೆ. ಜೇನು ಕೃಷಿಕರಿಗೆ ಹಿಂದೆ ರಾಷ್ಟ್ರೀಯ ಖಾದಿ ಮತ್ತು ಗ್ರಾಮೋದ್ಯೋಗ ಆಯೋಗದಿಂದ ಉತ್ತಮ ಅನುದಾನಗಳು ಬರುತ್ತಿದ್ದವು, ಅದೇ ಸಂದರ್ಭದಲ್ಲಿ ಸಹಕಾರ ಸಂಘವು ಆಧುನಿಕ ಜೇನು ಪರಿಷ್ಕರಣಾಯಂತ್ರ ಖರೀದಿಸಲು ಸಹಾಯವಾಗಿತ್ತು. ಆದರೆ ಇತ್ತೀಚಿನ ದಿನಗಳಲ್ಲಿ ಜೇನು ಕೃಷಿಯು ತೋಟಗಾರಿಕೆ ಇಲಾಖೆಗೆ ಸೇರ್ಪಡೆಗೊಳಿಸಿದ್ದು, ತೋಟಗಾರಿಕೆ ಇಲಾಖೆ ಜೇನು ಕೃಷಿಯ ಅಭಿವೃದ್ಧಿಗೆ ನಿರಿಕ್ಷೀತ ಮಟ್ಟದಲ್ಲಿ ಸಹಕಾರ ನೀಡುತ್ತಿಲ್ಲ. ಇನ್ನಾದರೂ ತೋಟಗಾರಿಕೆ ಇಲಾಖೆ ಃಜಜ ಈಜಟಜ ಒಚಿಟ ಅಥವಾ ಃಜಜ ಓಣಢಿಚಿಡಿಥಿ ಬಗ್ಗೆ ಆಸಕ್ತಿ ತೋರಿದಲ್ಲಿ ಜೇನು ಕೃಷಿಯ ಅಭಿವೃದ್ಧಿಗೆ ಸಹಕಾರಿಯಾಗುತ್ತದೆ.

ಕಾಶ್ಮೀರವನ್ನು ಬಿಟ್ಟರೆ ಕೊಡಗು ಮತ್ತು ದಕ್ಷಿಣ ಕನ್ನಡದ ಜಿಲ್ಲೆಯಲ್ಲಿ ಔಷಧಿಯ ಗುಣಮಟ್ಟವುಳ್ಳ ಜೇನು ಸಿಗುತ್ತದೆ. ಕಾರಣವೇನೆಂದರೆ ಈ ಭಾಗದಲ್ಲಿ ಹಲವಾರು ಬಗೆಯ ಹೂವುಗಳಿದ್ದು ಹಲವಾರು ಬಗೆಯ ಹೂವಿನ ಮಕರಂಧದಿಂದ ಪಡೆದ ಜೇನು ಉತ್ತಮ ಔಷಧೀಯ ಗುಣವನ್ನು ಹೊಂದಿದೆ. ಜೇನು ನೊಣಗಳು ಹೆಚ್ಚಿನ ಜ್ಞಾಪಕಶಕ್ತಿಯನ್ನು ಹೊಂದಿರುತ್ತದೆ ನಾವು ಯಾವ ಸ್ಥಳದಲ್ಲಿ ಪೆಟ್ಟಿಗೆ ಇಟ್ಟಿರುತ್ತವೆಯೋ ನಂತರದಲ್ಲಿ ಜೇನುನೊಣಗಳು ಅದೇ ಸ್ಥಳಕ್ಕೆ ಪೆಟ್ಟಿಗೆಯನ್ನು ಹುಡುಕಿಕೊಂಡು ಬಂದು ಜೇನನ್ನು ಕಟ್ಟುತ್ತವೆ(ಬಿಡಾರ ಹೂಡುತ್ತದೆ). ಜೇನು ನೊಣಗಳು ತನ್ನಲ್ಲಿ ಉತ್ತಮ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಹೊಂದಿದ್ದು ತನ್ನ ಸಹ ಜೇನುನೊಣಗಳು ಅಪೇಕ್ಷಿಸುವ ಮೊಟ್ಟೆ (ಗಂಡು/ಹೆಣ್ಣು(ಕೆಲಸಗಾರ ನೊಣ)ಯನ್ನು ರಾಣಿ ಜೇನು ಇಡುತ್ತದೆ. ಈ ರೀತಿಯ ವೈಶಿಷ್ಟತೆಯನ್ನು ನಾವು ಜೇನಿನಲ್ಲಿ ಮಾತ್ರ ನೋಡಲು ಸಾಧ್ಯವಿದೆ.

ರೈತನು ತಾನು ನಡೆಸುವ ಉಪಕಸುಬುಗಳಾದ ದನ, ಹಂದಿ, ಕೋಳಿ, ಸಾಕಾಣಿಕೆಗಾಗಿ ಆಹಾರ ಕೊಡುವ ಖರ್ಚಿದೆ, ಆದರೆ ಜೇನು ನೊಣಗಳಿಗೆ ಆಹಾರವನ್ನು ಅವುಗಳೇ ಪ್ರಕೃತಿಯಲ್ಲಿರುವ ಮಕರಂದವನ್ನು

ಹುಡುಕಿಕೊಂಡು ಹೋಗುತ್ತದೆ. ಅದೇ ರೀತಿಯ ಮಕರಂದವನ್ನು ಪ್ರಕೃತಿ ಅವರಿಗಾಗಿ ಕೊಟ್ಟಿರುತ್ತದೆ, ಬಿಸಿಲಿಗೆ ಒಣಗಿ ಹಾಳಾಗುವ ಮಕರಂಧವನ್ನು ಜೇನುನೊಣಗಳು ಸಂಗ್ರಹಿಸುತ್ತವೆ. ಈ ರೀತಿಯಾಗಿ ಸಂಗ್ರಹವಾದ ಜೇನು, ಜೇನು ಪೆಟ್ಟಿಗೆಗೆ ಮತ್ತು ಮೇಣಗಳಿಗೆ ಆಗಿರುವ ಖರ್ಚಿಗಿಂತ ಹೆಚ್ಚಿನ ಪ್ರಮಾಣದಲ್ಲಿರುತ್ತದೆ. ಇದು ನೊಣಗಳ ಜೀವನ ಪದ್ದತಿ, ಕುಟುಂಬ ನಿರ್ವಹಣೆ ಬಗ್ಗೆ ನಡೆಯುವ ಕೆಲಸಗಳು ಅನುಕರಣೆಯುಕ್ತವಾದದ್ದು, ಕುಟುಂಬಗಳ ಕಾಪಾಡುವಿಕೆಯ ಸೈನಿಕ ಹುಳುಗಳ ಕಾರ್ಯ ವೈಖರಿ, ಪ್ರಜಾ ಪ್ರಭುತ್ವದ ಶಿಸ್ತು, ಮಹಿಳಾ ಆಳ್ವಿಕೆ, ಅಳಿಯ ಕಟ್ಟು ಪದ್ದತಿಯಂತೆ ತಾಯಿಯಿಂದ ತಾಯಿಗೆ ಜವಾಬ್ದಾರಿ ಹಂಚುವಿಕೆ ಮೊದಲಾದ ಹಲವಾರು ವಿಚಾರಗಳನ್ನು ನಾವು ಜೇನುನೊಣಗಳಿಂದ ಕಲಿಯಬಹುದಾಗಿದೆ.

ಸಹಕಾರ ಸಂಘವು ಜೇನು ಕೃಷಿಗೆ ಪೂರಕವಾಗಿರುವ ಸಲಹೆ, ನೆರವನ್ನು ನೀಡುತ್ತಿದ್ದು ಯುವಕರು ಇದರ ಪ್ರಯೋಜನ ಪಡೆಯುವುದರ ಮೂಲಕ ಜೇನುಕೃಷಿಯಲ್ಲಿ ತಮ್ಮನ್ನು ಹೆಚ್ಚಿನ ಸಂಖ್ಯೆಯಲ್ಲಿ ತೊಡಗಿಸಿಕೊಳ್ಳಬೇಕು. ಸಹಕಾರ ಸಂಘವು ಉತ್ತಮ, ನುರಿತ ಸಿಬ್ಬಂದಿ ವರ್ಗವನ್ನು ಹೊಂದಿದ್ದು ಸದಸ್ಯರಲ್ಲಿ ಜೇನು ಕೃಷಿಯ ಬಗ್ಗೆ ಅರಿವು ಮೂಡಿಸಲು ಮತ್ತು ಸೂಕ್ತ ಮಾರ್ಗದರ್ಶನ ನೀಡಲು ಇದು ಸಹಕಾರಿಯಾಗಿದೆ. ಜೇನು ಪೆಟ್ಟಿಗೆ ಪಡೆಯುವವರಿಗೆ ತೋಟಗಾರಿಕೆ ಇಲಾಖೆಯಿಂದ ಸಬ್ಸಿಡಿ ಪಡೆಯುವ ಅವಕಾಶವಿದೆ. ಆದರೆ ಕಡಿಮೆ ಸಂಖ್ಯೆಯ ಪೆಟ್ಟಿಗೆ ಪಡೆಯುವವರೂ ಪೆಟ್ಟಿಗೆಗೆ ತೋಟಗಾರಿಕೆ ಇಲಾಖೆ ನೀಡುವ ಸಬ್ಸಿಡಿ ಪಡೆಯಲು ಪ್ರಯತ್ನಿಸುವುದಿಲ್ಲ. ಆದ್ದರಿಂದ ತೋಟಗಾರಿಕಾ ಇಲಾಖೆಯು ಸಹಕಾರಿ ಸಂಘಕ್ಕೆ ಸದರಿ ಸಬ್ಸಿಡಿ ಹಣವನ್ನು ನೀಡಿ ತನ್ನ ಸದಸ್ಯರು ಪಡೆಯುವ ಪೆಟ್ಟಿಗೆಗೆ ಸಹಕಾರಿ ಸಂಘದಿಂದಲೇ ಸಬ್ಸಿಡಿ ನೀಡಲು ಅವಕಾಶ ಕಲ್ಪಿಸಿದ್ದಲ್ಲಿ ಜೇನು ಕೃಷಿಕರಿಗೆ ಉಪಯೋಗವಾಗಲಿದೆ.

ಈ ರೀತಿಯಾಗಿ ಜೇನು ಕೃಷಿಕರಾಗಿರುವ ಸಹಕಾರಿ ಸಂಘದ ಸದಸ್ಯರೆಲ್ಲರೂ ಒಗ್ಗೂಡಿ, ಜೇನು ನೊಣದಲ್ಲಿರುವ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ತಾವು ಅಳವಡಿಸಿಕೊಂಡಲ್ಲಿ ದಕ್ಷಿಣ ಕನ್ನಡ ಜೇನು ವ್ಯವಸಾಯಗಾರರ ಸಹಕಾರ ಸಂಘವು ಅಂತರಾಷ್ಟ್ರೀಯ ಮಾರುಕಟ್ಟೆಯಲ್ಲಿ ಅವಶ್ಯಕವಿರುವ ಉತ್ತಮ ಔಷಧೀಯ ಗುಣಮಟ್ಟದ ಜೇನನ್ನು ಪೂರೈಸಲು ಅವಕಾಶವಿರುತ್ತದೆ.

ಸಂಪರ್ಕ ವಿವರ: ದಕ್ಷಿಣ ಕನ್ನಡ ಜೇನು ವ್ಯವಸಾಯಗಾರರ ಸಹಕಾರಿ ಸಂಘ ನಿಯಮಿತ, ಪುತ್ತೂರು – 574 201, ದಕ್ಷಿಣ ಕನ್ನಡ ಜಿಲ್ಲೆ, ದೂರವಾಣಿ: 08251 230524.



## ಕುಂಬಾರರ ಗುಡಿ ಕೈಗಾರಿಕಾ ಸಹಕಾರ ಸಂಘ ನಿಯಮಿತ, ಪುತ್ತೂರು.

ಕುಂಬಾರಿಕೆಯು ಒಂದು ಸಾಂಪ್ರದಾಯಿಕ ವೃತ್ತಿಯಾಗಿದ್ದು, ಇಂತಹ ಸಾಂಪ್ರಾದಾಯಿಕ ವೃತ್ತಿಗೆ ಉತ್ತೇಜನ ನೀಡುವ ಉದ್ದೇಶದಿಂದ ಹುಟ್ಟಿಕೊಂಡಿರುವ ಸಂಸ್ಥೆಯೇ ಕುಂಬಾರರ ಗುಡಿ ಕೈಗಾರಿಕಾ ಸಹಕಾರ ಸಂಘ ನಿ., ಪುತ್ತೂರು. 1958ರಲ್ಲಿ ಗ್ರಾಮೀಣ ಪ್ರದೇಶ ಅರಿಯಡ್ಕ ಗ್ರಾಮದ ಕೌಡಿಚಾರಿನಲ್ಲಿ ದಿ.ಕೃಷ್ಣ ಮೂಲ್ಯ ಇವರ ನೇತೃತ್ವದಲ್ಲಿ ಆ ಗ್ರಾಮದ ಕುಂಬಾರ ಕುಶಲಕರ್ಮಿಗಳನ್ನು ಸೇರಿಸಿ ತಲಾ ರೂ. 5/– ಪಾಲು ಬಂಡವಾಳ ತೊಡಗಿಸಿ 25 ಸದಸ್ಯರು ಪ್ರವರ್ತಕರಾಗಿ "ಕಾವು ಕೌಡಿಚಾರು ಮಡಿಕೆ ತಯಾರಕರ ಕೈಗಾರಿಕ ಸಹಕಾರ ಸಂಘ" ಎಂದು ನಾಮಾಂಕಿತಗೊಂಡು ನೊಂದಣಿಯಾಯಿತು.

- ಅಸಂಘಟಿತ ಕುಶಲಕರ್ಮಿಗಳನ್ನು ಒಂದೆಡೆ ಸೇರಿಸಿ ಅವರ ಸಮಸ್ಯೆಗೆ ಸ್ಪಂದಿಸುವುದು.
- ಕುಂಬಾರರು ತಯಾರಿಸಿದ ಕರಕುಶಲ ವಸ್ತುಗಳನ್ನು ಸಹಕಾರಿ ಸಂಘವೇ ಮಾರುಕಟ್ಟೆ ಬೆಲೆಗೆ ಖರೀದಿಸಿ ತಲೆಹೊರೆಯ ಅಲೆದಾಟಕ್ಕೆ ವಿರಾಮ ನೀಡುವುದು.
- ಕಚ್ಚಾವಸ್ತುಗಳಾದ ಆವೆಮಣ್ಣು ಮತ್ತು ಮಡಿಕೆ ಸಂಸ್ಕರಣೆಗೆ ಸೌದೆಯನ್ನು ಒದಗಿಸಲು ಸಹಕರಿಸುವುದು.
- ಸದಸ್ಯರಿಗೆ ಸಾಲ ಸೌಲಭ್ಯವನ್ನು ಒದಗಿಸುವುದು.
- ಕುಶಲಕರ್ಮಿಗಳ ಕುಟುಂಬದ ಮಕ್ಕಳ ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹ ಮತ್ತು ಕ್ಷೇಮಾಭಿವೃದ್ಧಿಗೆ ಆರೋಗ್ಯ ಕವಚ ಆಳವಡಿಸುವುದು.


ಇವೇ ಮೊದಲಾದ ಉದ್ದೇಶಗಳಿಗಾಗಿ ಸಹಕಾರ ಸಂಘವನ್ನು ಪ್ರಾರಂಭಿಸಲಾಯಿತು. ಮುಂದೆ ದಿ.ಕೃಷ್ಣ ಮೂಲ್ಯ ಇವರು ಅಧ್ಯಕ್ಷರಾಗಿ ಹಾಗೂ ದಿ.ಬಿ.ಹೂವಯ್ಯ ಇವರು ಗೌರವ ಕಾರ್ಯದರ್ಶಿಯಾಗಿ ದಿ.ಕೃಷ್ಣ ಮೂಲ್ಯರ ಮನೆಯಲ್ಲಿ ಸಂಘದ ಚಟುವಟಿಕೆಯನ್ನು ಪ್ರಾರಂಭಿಸಲಾಯಿತು. ಸಂಘವು 1981ರವರೆಗೆ ಸಣ್ಣ ಪ್ರಮಾಣದ ವ್ಯವಹಾರವನ್ನು ನಡೆಸುತ್ತಿತ್ತು. 1984ರಲ್ಲಿ ಆಗಿನ ಅಧ್ಯಕ್ಷರಾದ ಶ್ರೀ ಬಿ.ಎಸ್.ಕುಲಾಲರವರ ಪ್ರಯತ್ನದಿಂದಾಗಿ ಕೌಡಿಚಾರು ಮತ್ತು ಪುತ್ತೂರಿನ ಹೃದಯ ಭಾಗದಲ್ಲಿ ಸುಸಜ್ಜಿತ ಸ್ವಂತ ಕಟ್ಟಡಗಳನ್ನು

ಹೊಂದಿ ಮುಂಚೂಣಿಯಲ್ಲಿ ನಡೆಯಲು ಕಾರಣವಾಯಿತು. ಸಂಘದ ವ್ಯವಹಾರವು ಪುತ್ತೂರು ತಾಲೂಕಿನ ಸಮಸ್ತ ಕುಂಬಾರರಿಗೆ ದೊರಕಬೇಕೆಂದು ಸಂಘದ ಕಾರ್ಯವ್ಯಾಪ್ತಿಯನ್ನು ಪುತ್ತೂರು ತಾಲೂಕಿಗೆ ವಿಸ್ತರಿಸಿದರು. ಅರಿಯಡ್ಕ ಗ್ರಾಮದಲ್ಲಿ ರಾಜ್ಯ ಸರಕಾರದ ನೆರವಿನೊಂದಿಗೆ ಒಂದು ಎಕರೆ ಜಮೀನು ಮಂಜೂರುಗೊಳಿಸಿ ಕುಂಬಾರಿಕೆ ಸಾಮೂಹಿಕ ಉತ್ಪಾದನಾ ಕೇಂದ್ರವನ್ನು ಆರಂಭಿಸಲಾಯಿತು ಹಾಗೂ ಹಂತ ಹಂತವಾಗಿ ಸದಸ್ಯರಿಗೆ ಆರ್ಥಿಕ ನೆರವನ್ನು ನೀಡಲಾಯಿತು. ಶ್ರೀ ಬಿ.ಎಸ್.ಕುಲಾಲ್‌ರವರು ತಮ್ಮ ವೃತ್ತಿ ಜೀವನ ಪ್ರಭಾವದಿಂದ ಪುತ್ತೂರು ನಗರದಲ್ಲಿ ಸಹಕಾರ ಸಂಘಕ್ಕೆ ನಿವೇಶನವನ್ನು ಪಡೆಯುವಲ್ಲಿ ಶಕ್ತರಾದರು. ಮುಂದೆ ಸಂಘಕ್ಕೆ ಸ್ವಂತ ಕೇಂದ್ರ ಕಛೇರಿ ಕಟ್ಟಡವನ್ನು ಹೊಂದಬೇಕೆಂದು ದೃಢ ನಿರ್ಧಾರದಿಂದ ಸಮಾಜದ ಹಲವು ಗಣ್ಯ ದಾನಿಗಳಿಂದ ಮತ್ತು ಸರಕಾರದ ಅನುದಾನದಿಂದ ಸ್ವಂತ ಕಟ್ಟಡವನ್ನು ರಚಿಸಿ 19.05.1996ರಂದು ಪುತ್ತೂರು ಕ್ಷೇತ್ರದ ಆಗಿನ ಶಾಸಕರಾದ ಶ್ರೀ ಡಿ.ವಿ.ಸದಾನಂದ ಗೌಡರಿಂದ ಉದ್ಘಾಟನೆಗೊಂಡಿತು.

ಅದೇ ಸಂದರ್ಭದಲ್ಲಿ ಸಂಘದ ಕಾರ್ಯಚಟುವಟಿಕೆಯಲ್ಲಿ ಬ್ಯಾಂಕಿಂಗ್ ವ್ಯವಹಾರವನ್ನು ಅಳವಡಿಸಿ ಕಾರ್ಯಚರಿಸಲಾಯಿತು. ಕುಂಬಾರ ಕುಶಲಕರ್ಮಿಗಳಿಗೆ ಹಾಗೂ ಈ ಕೈಗಾರಿಕೆಗೆ ವ್ಯವಸ್ಥಿತ ರೂಪ ಕೊಡಬೇಕು, ಈ ಕೈಗಾರಿಕೆ ನಡೆಸುವ ಹೆಚ್ಚಿನ ಜನರನ್ನು ಸೇರಿಸಬೇಕೆಂಬ ಮಹದಾಸೆಯಿಂದ ಸಂಘದ ಕಾರ್ಯವ್ಯಾಪ್ತಿಯನ್ನು ವಿಸ್ತರಿಸಿದಂತೆ ಸ್ಥಳೀಯ ಜನರ ಅವಶ್ಯಕತೆಗಳಿಗಾಗಿ ಸ್ಪಂದಿಸುವ ನೆಲೆಯಲ್ಲಿ 1998ರಲ್ಲಿ ಬೆಳ್ತಂಗಡಿ ತಾಲೂಕಿನ ಗುರುವಾಯನಕೆರೆಯಲ್ಲಿ ಶಾಖೆಯನ್ನು ಪ್ರಾರಂಭಿಸಲಾಯಿತು. 1999ರಲ್ಲಿ ಬೆಳ್ಳಾರೆಯಲ್ಲಿ ಸಂಘದ ಎರಡನೇ ಶಾಖೆಯನ್ನು ಪ್ರಾರಂಭಿಸಲಾಯಿತು. 2002ರಲ್ಲಿ ಬಂಟ್ವಾಳ ತಾಲೂಕಿನ ಕುಡ್ತಮುಗೇರುನಲ್ಲಿ ಮತ್ತು 2003ರಲ್ಲಿ ಮಾಣಿಯಲ್ಲಿ ಶಾಖೆಯನ್ನು ಪ್ರಾರಂಭಿಸಲಾಯಿತು.

ಭಾರತ ಸರಕಾರದ ಜವಳಿ ಮಂತ್ರಾಲಯದ ಕರಕುಶಲ ಅಭಿವೃದ್ಧಿ ಆಯುಕ್ತರು ಮತ್ತು ದ.ಕ ಜಿಲ್ಲಾ ಪಂಚಾಯತ್‌ನ ವಿಶೇಷ ಅನುದಾನದಲ್ಲಿ ಪುತ್ತೂರು ನಗರದಲ್ಲಿ 3 ಅಂತಸ್ತಿನ ಕುಲಾಲ ಸಹಕಾರ ಭವನ ಕಟ್ಟಡವನ್ನು 2002ರಲ್ಲಿ ನಿರ್ಮಿಸಲಾಯಿತು. ಈ ಕಟ್ಟಡದಲ್ಲಿ ಸಂಘದ ಆಡಳಿತ ಕಛೇರಿ ಮತ್ತು ಕುಂಬಾರಿಕೆ ಪ್ರದರ್ಶನ ಮತ್ತು ಮಾರಾಟ ಮಳಿಗೆ ಕಾರ್ಯಾಚರಿಸುತ್ತಿದೆ. 2008ರಲ್ಲಿ ಸಂಘದ ಸುವರ್ಣ ಮಹೋತ್ಸವದ ಅಂಗವಾಗಿ ಕೌಡಿಚಾರು ಕೇಂದ್ರದಲ್ಲಿ ಸುವರ್ಣ ಮಹೋತ್ಸವ ಭವನವನ್ನು ನಿರ್ಮಿಸಲಾಯಿತು. ಈ ರೀತಿಯಾಗಿ ಹಂತ ಹಂತವಾಗಿ ಬೆಳೆದು ಬಂದ ಸಹಕಾರ ಸಂಘವು ಪ್ರಸ್ತುತ ಶ್ರೀ ಕೃಷ್ಣ ಎಂ. ರವರ ಅಧ್ಯಕ್ಷತೆಯಲ್ಲಿ ಮತ್ತು ಕಾರ್ಯದರ್ಶಿಯಾದ ಶ್ರೀ ಎಸ್.ಜನಾರ್ಧನ ಮೂಲ್ಯರವರ ಪ್ರಯತ್ನದಿಂದ ಕುಂಬಾರ ಕುಶಲಕರ್ಮಿಗಳಿಗೆ ಉತ್ತಮ ಸೇವೆಯನ್ನು ನೀಡುತ್ತಿದೆ.

ಸಹಕಾರ ಸಂಘಕ್ಕೆ ಬ್ಯಾಂಕಿಂಗ್ ವ್ಯವಹಾರವೇ ಮೂಲ ಆಧಾರವಾಗಿದ್ದು, ಸಹಕಾರ ಸಂಘವು ತನ್ನ ಸದಸ್ಯರಿಗೆ ಕುಂಬಾರಿಕೆ ವೃತ್ತಿಗಾಗಿ ಅವರ ಅಗತ್ಯತೆತೆ ತಕ್ಕಂತೆ ಅಗತ್ಯ ದಾಖಲೆಗಳನ್ನು ಪಡೆದು, ಸದಸ್ಯರಿಗೆ ಆರ್ಥಿಕ ನೆರವನ್ನು ನೀಡುತ್ತಿದೆ. ಜೊತೆಗೆ ತನ್ನ ಸದಸ್ಯರಿಗೆ ವಾಹನ ಖರೀದಿ, ಕೃಷಿ ಅಭಿವೃದ್ಧಿ, ಗೃಹ ನಿರ್ಮಾಣ, ಆಭರಣ ಈಡಿನ ಸಾಲ ಇತ್ಯಾದಿ ಆರ್ಥಿಕ ನೆರವನ್ನು ನೀಡುತ್ತಿದೆ. ಸಹಕಾರಿ ಸಂಘವು ತನ್ನ ಶಾಖೆಗಳಾದ ಗುರುವಾಯನಕೆರೆ, ಬೆಳ್ಳಾರೆ, ಮಾಣಿ, ಕುಡ್ತಮುಗೇರಿನಲ್ಲಿ ಬ್ಯಾಂಕಿಂಗ್ ವ್ಯವಹಾರಗಳ ಜೊತೆಗೆ ಕುಂಬಾರಿಕೆ ಪ್ರದರ್ಶನ ಮತ್ತು ಮಾರಾಟ ಮಳಿಗೆಗಳನ್ನು ನಡೆಸುತ್ತಿದೆ. ಸಹಕಾರ ಸಂಘವು ತನ್ನ ಸದಸ್ಯರು ತಯಾರಿಸುವ ಮಡಿಕೆಗಳನ್ನು ಮಾರಾಟ



ಮಾಡಲು ಯಾವುದೇ ರೀತಿಯ ಏಜೆಂಟರನ್ನು ನೇಮಕ ಮಾಡಿಕೊಳ್ಳದೆ, ತನ್ನ ಮಾರಾಟ ಮಳಿಗೆಗಳ ಮೂಲಕವೇ ಮಾರಾಟ ಮಾಡುತ್ತಿದೆ.

ಸಹಕಾರ ಸಂಘವು ತನ್ನ ಸದಸ್ಯರಾದ ಕುಂಬಾರ ಕುಶಲಕರ್ಮಿಗಳಿಗೆ ಕಚ್ಚಾವಸ್ತುಗಳಾದ ಆವೆಮಣ್ಣು, ಸೌದೆ, ಸಂಸ್ಕರಣಾ ಶೆಡ್‌ಗಳನ್ನು ಒದಗಿಸಿ, ಅವರು ತಯಾರಿಸಿದ ಮಡಿಕೆಗೆ ಅದರ ಗುಣಮಟ್ಟಕ್ಕೆ ಅನುಗುಣವಾಗಿ ಸಹಕಾರ ಸಂಘದ ಆಡಳಿತ ಮಂಡಳಿಯವರು ನಿಗದಿಪಡಿಸಿರುವ ಬೆಲೆಯನ್ನು ನೀಡಿ, ಅಂತಹ ಮಡಿಕೆಗಳಿಗೆ ಸಹಕಾರ ಸಂಘವೇ ಮಾರುಕಟ್ಟೆಯ ವ್ಯವಸ್ಥೆಯನ್ನು ಮಾಡುತ್ತಿದೆ. ಇದಕ್ಕಾಗಿ ಪುತ್ತೂರಿನಿಂದ ಸುಮಾರು 14 ಕಿ.ಮೀ ದೂರದಲ್ಲಿರುವ ಕೌಡಿಚಾರು ಪ್ರದೇಶದಲ್ಲಿ ಉತ್ಪಾದನಾ ಘಟಕವನ್ನು ಹೊಂದಿದ್ದು, ಉತ್ಪಾದನಾ ಘಟಕದ ಎಲ್ಲಾ ವೆಚ್ಚವನ್ನು ಸಹಕಾರ ಸಂಘವೇ ಭರಿಸುತ್ತದೆ. ಸಹಕಾರ ಸಂಘದ ಸದಸ್ಯರು ಸದರಿ ಉತ್ಪಾದನಾ ಘಟಕದಲ್ಲಿರುವ ಕಚ್ಚಾವಸ್ತು, ಉಪಕರಣಗಳನ್ನು ಉಪಯೋಗಿಸಿಕೊಂಡು ಕುಂಬಾರಿಕೆ ವೃತ್ತಿಯನ್ನು ಮಾಡಬಹುದಾಗಿದೆ. ಸದರಿ ಉತ್ಪಾದನಾ ಘಟಕದಲ್ಲಿ ಮಣ್ಣು ಹದಗೊಳಿಸುವ ಯಂತ್ರ (PUG-MILL), ಮಡಕೆ ತಯಾರಿಸಲು ಉಪಯೋಗಿಸುವ ಚಕ್ರಗಳು, ಮಡಿಕೆ ಹದಗೊಳಿಸಲು ಅಗತ್ಯವಿರುವ ಸೌದೆ, ಸಂಗ್ರಹ ಕೊಠಡಿಗಳು, ಮಡಿಕೆ ಸಂಸ್ಕರಣಾ ಶೆಡ್ ಇತ್ಯಾದಿಗಳನ್ನು ತನ್ನ ಸದಸ್ಯರಿಗೆ ಒದಗಿಸುತ್ತದೆ ಜೊತೆಗೆ ಮಾರಾಟ ಮಳಿಗೆಯನ್ನು ಹೊಂದಿದೆ. ಸಹಕಾರ ಸಂಘವು ನವನವೀನ ಮಾದರಿಯ ಕಲಾತ್ಮಕ ಹೂವಿನ ಕುಂಡಗಳು, ಅಲಂಕಾರಿಕ ಮಣ್ಣಿನ ಹೂದಾನಿಗಳು, ಗೃಹಪಯೋಗಿ ಮಣ್ಣಿನ ಪಾತ್ರೆಗಳ ಉತ್ಪಾದನೆ ಮತ್ತು ಮಾರಾಟವನ್ನು ಮಾಡುತ್ತಿದೆ. ಈಗ ಇರುವ ಉತ್ಪಾದನಾ ಘಟಕಕ್ಕೆ ಇನ್ನೂ ಆಧುನಿಕ ತಂತ್ರಜ್ಞಾನವನ್ನು ಅಳವಡಿಸಿ ಉತ್ಪಾದನಾ ಘಟಕದ ಆಧುನಿಕರಿಸಲು ಸಹಕಾರ ಸಂಘವು ಪ್ರಯತ್ನಿಸುತ್ತಿದೆ.

ಸಹಕಾರ ಸಂಘದ ಅಭಿವೃದ್ಧಿಗೆ ಕೇಂದ್ರದ ಜವಳಿ ಮಂತ್ರಾಲಯ, ಖಾದಿ ಗ್ರಾಮೋದ್ಯೋಗ ಆಯೋಗ, ಕೈಗಾರಿಕಾ ಇಲಾಖೆ, ಸಹಕಾರಿ ಇಲಾಖೆ, ಕರಕುಶಲ ಅಭಿವೃದ್ಧಿ ನಿಗಮಗಳಿಂದ ಪ್ರೋತ್ಸಾಹ ಮತ್ತು ಸಹಾಯಧನ ದೊರಕುತ್ತಿದೆ. ಸಹಕಾರ ಸಂಘವು ತನ್ನ ಸದಸ್ಯರು ತಯಾರಿಸುವ ಕುಂಬಾರಿಕೆ ವಸ್ತುಗಳನ್ನು ರಾಷ್ಟ್ರೀಯ ಮತ್ತು ರಾಜ್ಯಮಟ್ಟದ ವಸ್ತು ಪ್ರದರ್ಶನಗಳಲ್ಲಿ ಪ್ರದಶೀಸುತ್ತದೆ, ಜೊತೆಗೆ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದಲ್ಲಿ ನಡೆಯುವ ಕೃಷಿಮೇಳಗಳಲ್ಲಿಯೂ ಕುಂಬಾರಿಕೆ ವಸ್ತುಗಳನ್ನು ಪ್ರದರ್ಶಿಸುತ್ತದೆ.

ಕುಂಬಾರಿಕೆ ವೃತ್ತಿಯನ್ನು ಉಳಿಸಿ ಬೆಳೆಸುವ ದೃಷ್ಟಿಯಿಂದ ಸಹಕಾರಿ ಸಂಘವು ಕುಂಬಾರಿಕೆ ಗುಡಿಕೈಗಾರಿಕೆಗೆ ಅವಕಾಶ ಒದಗಿಸುತ್ತಿದ್ದು ಸದಸ್ಯರು ಇದರ ಸದುಪಯೋಗ ಪಡೆದು ಕುಂಬಾರಿಕೆ ವೃತ್ತಿಯ ಅಭಿವೃದ್ಧಿ ಪಡಿಸಲು ಪ್ರಯತ್ನಿಸಬೇಕು. ಸಹಕಾರ ಸಂಘಕ್ಕೆ ಸರಕಾರದ ವಿವಿಧ ಇಲಾಖೆಗಳಿಂದ ನಿರೀಕ್ಷಿತ ಮಟ್ಟದ ಸಹಕಾರ ದೊರಕದೆ ಇರುವುದರಿಂದ ಸಹಕಾರಿ ಸಂಘವು ನಡೆಸುತ್ತಿರುವ ಕುಂಬಾರಿಕೆ ಕೈಗಾರಿಕೆಯ ಅಭಿವೃದ್ಧಿ ಕುಂಠಿತವಾಗಿದ್ದು, ಈ ಬಗ್ಗೆ ಸರಕಾರವು ಮುತುವರ್ಜಿ ವಹಿಸಿದಲ್ಲಿ ನಶಿಸುತ್ತಿರುವ ಕುಂಬಾರಿಕೆ ವೃತ್ತಿಯ ವಿಶೇಷತೆಯನ್ನು ಉಳಿಸಿ ಮುಂದಿನ ಪೀಳಿಗೆಗೆ ನೀಡಲು ಸಾಧ್ಯ. ಸಹಕಾರ ಸಂಘವು ಆಧುನಿಕ ಉಪಕರಣ ಮತ್ತು ಸದಸ್ಯರಿಗೆ ಸೂಕ್ತ ತರಬೇತಿ ನೀಡುವ ಮೂಲಕ ಉತ್ತಮ ಗುಣಮಟ್ಟದ ಮಡಿಕೆಯನ್ನು ತಯಾರಿಸಿ, ಮಾರುಕಟ್ಟೆ ವ್ಯವಸ್ಥೆಯನ್ನು ಇನ್ನೂ ಉತ್ತಮಗೊಳಿಸಿ ಅವನತಿಯ ಅಂಚಿನಲ್ಲಿರುವ ಕುಂಬಾರಿಕೆ ವೃತ್ತಿಯನ್ನು ಅಭಿವೃದ್ಧಿಪಡಿಸುವುದರಿಂದ ಸಹಕಾರ ಸಂಘದ ಬೆಳವಣಿಗೆಗೂ ಪೂರಕವಾಗಲಿದೆ.

ಸಂಪರ್ಕ ವಿವರ: ಕುಂಬಾರರ ಗುಡಿ ಕೈಗಾರಿಕಾ ಸಹಕಾರ ಸಂಘ ನಿಯಮಿತ, ಪುತ್ತೂರು – 574 201, ದಕ್ಷಿಣ ಕನ್ನಡ ಜಿಲ್ಲೆ.



## ಚರಕ – ಗ್ರಾಮೀಣಾಭಿವೃದ್ಧಿಯ ಹೊಸ ಸಾಧ್ಯತೆ

ಸಂಘ ಜೀವಿಯಾದ ಮನುಷ್ಯ ಸಂಘಟನೆಗಳಿಂದ ಸಂಸ್ಥೆಗಳಿಂದ ವೈಯಕ್ತಿಕ ಪ್ರಯೋಜನಗಳನ್ನು ನೋಡುತ್ತಿರುವ ಇಂದಿನ ಜಾಗತಿಕರಣದ ಯುಗದಲ್ಲಿ ಸಹಕಾರ ಕ್ಷೇತ್ರದ ಪ್ರಯತ್ನಗಳು ಎಲೆಮರೆಯಿಂದ ಇಣುಕುವ ಬೆಳಕ ರೇಖೆಗಳಾಗಿವೆ. ಭಾರತದ ಗ್ರಾಮೀಣ ಭಾಗದ ಮಹಿಳೆಯರಿಗೆ ಸ್ವಾವಲಂಬನೆಯ ಸಾಧ್ಯತೆಗಳನ್ನು ತೋರಿಸುತ್ತಾ, ಕೃಷಿಯಿಂದ ಬಿಡುವಿನ ಸಂದರ್ಭದಲ್ಲಿ ಸಾಮಾಜಿಕ ಅಭಿವೃದ್ಧಿಗೆ ಕೊಡುಗೆ ನೀಡುವಂತೆ ಪುರುಷರಿಗೆ ಪ್ರೇರೇಪಿಸುತ್ತಾ ಗ್ರಾಮೀಣಾಭಿವೃದ್ಧಿ ಸಾಧಿಸಲು ಸಹಕಾರ ಕ್ಷೇತ್ರ ತನ್ನೆಲ್ಲ ಮಿತಿಗಳಿಗಾಚೆಯೂ ಪ್ರಯತ್ನಿಸುತ್ತಿದೆ. ಗ್ರಾಮೀಣ ಭಾಗದಲ್ಲಿ ಉದ್ಯೋಗದೊಂದಿಗೆ ಆರ್ಥಿಕ ಶಿಸ್ತನ್ನು ರೂಢಿಸಿಕೊಳ್ಳಲು ಸಹಕರಿಸುತ್ತಾ, ಕೃಷಿಗೆ ಪರ್ಯಾಯವಾಗಿ ಹಾಗೂ ಪರಿಸರ ಸ್ನೇಹಿಯಾಗಿಯೂ ಕೆಲಸ ನಿರ್ವಹಿಸುತ್ತಿರುವ ಅನೇಕ ಸಹಕಾರ ಸಂಸ್ಥೆಗಳನ್ನ, ಸ್ವ ಸಹಾಯ ಸಂಘಗಳನ್ನು ಸಹಕಾರ ಕ್ಷೇತ್ರದಲ್ಲಿ ನೋಡಬಹುದಾಗಿದೆ. ಭಾರತದ ಇಂತಹ ಅನೇಕ ಸಂಸ್ಥೆಗಳಲ್ಲಿ ಕರ್ನಾಟಕದ ಶಿವಮೊಗ್ಗ ಜಿಲ್ಲೆಯ ಸಾಗರದ ಹೆಗ್ಗೋಡಿನಲ್ಲಿರುವ "ಚರಕ" ಎಂದೇ ಪ್ರಸಿದ್ಧವಾಗಿರುವ ಸಂಸ್ಥೆಯ ಕುರಿತು ಕಿರುಪರಿಚಯ ಹಾಗೂ ಮಾಹಿತಿ ಒದಗಿಸುವುದು ಈ ಲೇಖನದ ಆಶಯ.


ಮಲೆನಾಡಿನ ಜನರಿಗೆ ಕೃಷಿಗೆ ಪರ್ಯಾಯವಾದ ಹಾಗೂ ಪರಿಸರ ಸ್ನೇಹಿಯಾದ ಉದ್ಯೋಗವಕಾಶ ಕಲ್ಪಿಸಬೇಕೆಂಬ ಕನಸಿನೊಂದಿಗೆ 1994ರಲ್ಲಿ ಕವಿ–ಕಾವ್ಯ ಟ್ರಸ್ಟಿನ ಅಂಗಸಂಸ್ಥೆಯಾಗಿ ಆರಂಭವಾದ ಚರಕ ಗ್ರಾಮೋದ್ಯೋಗ ಘಟಕವು 1996ರ ಅಕ್ಟೋಬರ್ 04 ರಂದು "ಚರಕ ಮಹಿಳಾ ವಿವಿದೋದ್ದೇಶ ಕೈಗಾರಿಕಾ ಸಹಕಾರ ಸಂಘ ನಿ., ಭೀಮನಕೋಣೆ" ಎಂಬ ಹೆಸರಿನಲ್ಲಿ ನೋಂದಾಯಿಸಲ್ಪಟ್ಟಿತು. ರಂಗಕರ್ಮಿ ಪ್ರಸನ್ನರವರ ಕನಸಿನ ಕೂಸಾಗಿ ಭೀಮನಕೋಣೆಯ ಪಾಳುಬಿದ್ದಿದ್ದ ಸರ್ಕಾರಿ ಕೈಗಾರಿಕಾ ಷೆಡ್ಡೊಂದನ್ನು ಆಗಿನ ಜನಪರ ಅಧಿಕಾರಿಗಳ ಸಹಾಯದೊಂದಿಗೆ ಸರ್ಕಾರಿ ಯೋಜನೆಯೊಂದರಡಿಯಲ್ಲಿಯೇ ಮಹಿಳೆಯರಿಗಾಗಿ ಹೊಲಿಗೆ ತರಬೇತಿ ಕೇಂದ್ರವೊಂದನ್ನು ತೆರೆಯುವ ಮೂಲಕ ಚರಕದ ಉದಯವಾಯಿತು. ಆರಂಭದಲ್ಲಿ ಕೇವಲ ಎರಡು ಕೈಮಗ್ಗ ಮತ್ತು ಎರಡು ಹೊಲಿಗೆ ಯಂತ್ರಗಳ ಮೂಲಕ ಆರಂಭವಾದ

ಈ ಸಂಸ್ಥೆ ಪ್ರಸ್ತುತ 400ಕ್ಕೂ ಹೆಚ್ಚು ಜನರಿಗೆ ಕೆಲಸ ಒದಗಿಸಿರುವುದಲ್ಲದೇ ರಾಜ್ಯದ ಹಲವೆಡೆ ಮಾರಾಟ ಕೇಂದ್ರಗಳನ್ನೂ ಆರಂಭಿಸಿದೆ. ಚರಕ ಸಂಸ್ಥೆ ಕೇವಲ ನೇಯ್ಗೆ ಘಟಕ ಮಾತ್ರವಾಗಿರದೆ ನೂಲಿಗೆ ಬಣ್ಣ ಹಾಕುವುದು, ಬ್ಲಾಕ್ ಪ್ರಿಂಟಿಂಗ್, ಸ್ಕ್ರೀನ್ ಪ್ರಿಂಟಿಂಗ್, ಹೊಲಿಗೆ, ಕಸೂತಿ, ಮಗ್ಗ ತಯಾರಿಕೆ, ತರಬೇತಿ, ವಿನ್ಯಾಸ ಹೀಗೆ ಹಲವಾರು ಕೌಶಲ್ಯಗಳನ್ನೊಳಗೊಂಡ ಸಂಕೀರ್ಣ ಘಟಕವಾಗಿದೆ. ಗಂಡಸರ ಉಡುಪುಗಳು, ಮಹಿಳೆಯರ ಸಿದ್ಧ ಉಡುಪುಗಳು ಚೂಡಿದಾರ, ಕೌದಿ, ಡಿಸೈನ್ ಫೈಲ್, ಬೆಡ್‌ಸ್ಪ್ರೆಡ್ ಮೊದಲಾದ 159ಕ್ಕೂ ಹೆಚ್ಚು ಉತ್ಪನ್ನಗಳನ್ನು ಇಂದು ಚರಕ ತಯಾರಿಸುತ್ತಿದೆ. ಚರಕದ ಉಡುಪುಗಳು ಇಂದು ರಾಷ್ಟ್ರಮಟ್ಟದಲ್ಲಿ ಹೆಸರುವಾಸಿಯಾಗಿದೆ.



ಇತ್ತೀಚಿನ ದಿನಗಳಲ್ಲಿ ಪರಿಸರಕ್ಕೆ ಹಾಗೂ ಧರಿಸುವವರ ಚರ್ಮಕ್ಕೆ ಹಾನಿಕಾರಕವಾಗಿರುವ ರಾಸಾಯನಿಕ ಮೂಲದ ಬಣ್ಣಗಳ ಬಟ್ಟೆಗಳು ಮಾರುಕಟ್ಟೆಯನ್ನು ಆಕ್ರಮಿಸುತ್ತಿರುವಾಗ ಚರಕವು ನೈಸರ್ಗಿಕ ಬಣ್ಣಗಾರಿಕೆಯ ಪಾರಂಪರಿಕ ತಂತ್ರಜ್ಞಾನವನ್ನು ಪುನರುಜ್ಜೀವನಗೊಳಿಸಿ ಉಳಿಸುತ್ತಿರುವುದು ವಿಶೇಷ. ಚರಕ ತನ್ನದೇ ಆದ ಬಣ್ಣದ ಮನೆಯನ್ನು ಹೊಂದಿದ್ದು ಎರಡು ಪ್ರತ್ಯೇಕ ಘಟಕಗಳಲ್ಲಿ ಕಚ್ಚಾ ರೂಪದ ನೂಲಿಗೆ ಬಣ್ಣ ಹಾಕಲು ಅನುಕೂಲಕರ ವ್ಯವಸ್ಥೆಯನ್ನು ಹೊಂದಿದೆ. ಅಡಿಕೆ ಚೊಗರು, ಅಳಲೆಕಾಯಿ, ದಾಳಿಂಬೆ ಸಿಪ್ಪೆ, ರಂಗಮಾಲೆ ಬೀಜ, ಅಂಟುವಾಳ, ಶೀಗೆ ಮುಂತಾದ ಸ್ಥಳೀಯವಾದ ಕಾಡು ಉತ್ಪನ್ನಗಳನ್ನು ಇಲ್ಲಿ ಬಣ್ಣಗಾರಿಕೆಗಾಗಿ ಬಳಸಲಾಗುತ್ತದೆ. ನೈಸರ್ಗಿಕ ವಸ್ತುಗಳನ್ನು ಬಳಸಿ ಹೊಸ ಹೊಸ ಬಣ್ಣಗಳನ್ನು ಶೋಧಿಸುವ ಪ್ರಯೋಗಶಾಲೆಯಾಗಿಯೂ ಚರಕ ಕಾರ್ಯನಿರ್ವಹಿಸುತ್ತಿದೆ.

ಪಾರಂಪರಿಕ ನೇಕಾರಿಕೆ ಇಲ್ಲದ ಮಲೆನಾಡಿನಲ್ಲಿ ಸ್ಥಳೀಯ ಮಹಿಳೆಯರ ಶ್ರಮದಿಂದ ಬೆಳೆದ ಚರಕದ ಸಾಧನೆ ಅಸಾಧಾರಣವಾದದ್ದು. ಹೊಸದಾಗಿ ಕೆಲಸಕ್ಕೆ ಸೇರಿದ ಗ್ರಾಮೀಣ ಮಹಿಳೆಯರಿಗೆ ಆರು ತಿಂಗಳವರೆಗೆ ಕೈಮಗ್ಗ, ಬಣ್ಣಗಾರಿಕೆ, ಕಸೂತಿ, ಹೊಲಿಗೆ ಇತ್ಯಾದಿ ಅವರವರ ಆಯ್ಕೆಯಂತೆ ತರಬೇತಿಯನ್ನು ನೀಡಲಾಗುತ್ತದೆ. ಅಗತ್ಯವೆನಿಸಿದಾಗ ನಗರದ ವಸ್ತ್ರವಿನ್ಯಾಸಗಾರರನ್ನು ಕರೆಸಿಯೂ ತರಬೇತಿ ಒದಗಿಸಲಾಗುತ್ತದೆ. ಹೊಲಿಗೆ, ವಿನ್ಯಾಸ, ಆಡಳಿತ, ಹಣಕಾಸು ಎಲ್ಲವನ್ನೂ ಸ್ಥಳೀಯರೇ, ಹೆಚ್ಚಾಗಿ ಗ್ರಾಮೀಣ ಮಹಿಳೆಯರೇ ನಿರ್ವಹಿಸುತ್ತಿದ್ದಾರೆ. ದುಡಿಮೆಗೆ ತಕ್ಕಂತೆ ಸಂಭಾವನೆಯನ್ನು ನೀಡಲಾಗುತ್ತದೆಯಲ್ಲದೆ ಬೋನಸ್, ಪಿಎಫ್ ಇತ್ಯಾದಿ ಸೌಲಭ್ಯಗಳನ್ನು ಒದಗಿಸಲಾಗಿದೆ. ಅಲ್ಲದೆ ಮಹಿಳೆಯರೇ ಹೆಚ್ಚಾಗಿರುವ ಕಾರಣ ಅನುಕೂಲ ಒದಗಿಸುವ ದೃಷ್ಟಿಯಿಂದ ಐದು ವರ್ಷಗಳ ಒಳಗಿನ



ಮಕ್ಕಳಿಗಾಗಿ ಜೆ ಪಿ ರಾಜರತ್ನಂ ಹೆಸರಿನ ಬೇಬಿ ಘಟಕವನ್ನು ನಿರ್ವಹಿಸಲಾಗುತ್ತಿದೆ. ಕೆಲಸಗಾರರ ಜ್ಞಾನಾಭಿವೃದ್ಧಿಗಾಗಿ ಗ್ರಂಥಾಲಯ ಹಾಗೂ ಊಟದ ವ್ಯವಸ್ಥೆಗಾಗಿ ಕಡಿಮೆ ದರದ ಕ್ಯಾಂಟೀನ್ ಘಟಕವನ್ನು ಕೂಡ ನಿರ್ವಹಿಸಲಾಗುತ್ತಿದೆ.



ಪರಿಸರ ಸ್ನೇಹಿ ಸಿದ್ಧ ಉಡುಪುಗಳನ್ನು ತಯಾರಿಸುತ್ತಿರುವ ಚರಕ ಸಂಸ್ಥೆಯು ಪರಿಸರದ ನೈರ್ಮಲ್ಯದ ದೃಷ್ಠಿಯಿಂದಲೂ ಮಾದರಿ ಸಂಸ್ಥೆಯಾಗಿದೆ. ಇಲ್ಲಿ ವಿದ್ಯುತ್ ಚಾಲಿತ ಯಂತ್ರಗಳ ಬಳಕೆಯಿಲ್ಲ, ಮಣ್ಣಿನ ಗೋಡೆ ಹಾಗೂ ಹಂಚಿನ ಮನೆಗಳ ಕಡೆಗೆ ಚರಕಕ್ಕೆ ಒಲವು, ದಟ್ಟ ಮಳೆಯ ಮಲೆನಾಡಿನಲ್ಲೂ ಮಳೆ ನೀರನ್ನು ಸಂಗ್ರಹಿಸುವ ಮೂಲಕ ನೀರಿನಡೆಗೆ ಜಾಗೃತಿಯನ್ನು ಹೊಂದಿದೆ. ಅಂತರ್ಜಲ ಹೆಚ್ಚಿಸುವುದಕ್ಕಾಗಿ ಇಂಗುಗುಂಡಿಗಳನ್ನು ತೋಡಿಸಲಾಗಿದೆಯಲ್ಲದೆ, ಕೊಳವೆ ಬಾವಿಗಳ ಬದಲು ತೆರೆದ ಬಾವಿಗೆ ಆದ್ಯತೆ ನೀಡಲಾಗಿದೆ. ಇಂಧನ ಉಳಿತಾಯಕ್ಕಾಗಿ ಬಣ್ಣದ ಮನೆಗೆ ಮಲೆನಾಡಿನ ವಿಶೇಷ ಅಸ್ತ್ರ ಒಲೆಗಳನ್ನು ನಿರ್ಮಿಸಲಾಗಿದೆ. ಪಾರಂಪರಿಕ ಕಲೆಯನ್ನು ಉಳಿಸಿ ಬೆಳೆಸುವ ನಿಟ್ಟಿನಲ್ಲೂ ಚರಕದ ಪಾತ್ರ ಮಹತ್ವವಾದದ್ದು. ಕರ್ನಾಟಕದ ಪ್ರಮುಖ ಜಾನಪದ ದೃಶ್ಯ ಕಲಾ ಪ್ರಕಾರವಾದ ಹಸೆ ಚಿತ್ರಕಲೆಯನ್ನು ಅಭಿವೃದ್ಧಿಪಡಿಸುವ ನಿಟ್ಟಿನಲ್ಲಿ ಚರಕವು ಗ್ರಾಮೀಣ ಯುವತಿಯರಿಗೆ ಹಸೆ ಚಿತ್ತಾರದ ತರಬೇತಿ ನೀಡುವುದರ ಜೊತೆಗೆ ಈ ಚಿತ್ತಾರಗಳನ್ನು ಉಡುಪುಗಳ ಮೇಲೆ ವಿನ್ಯಾಸದ ರೂಪದಲ್ಲಿಯೂ ಅಳವಡಿಸಿಕೊಂಡಿದೆ. ಇಂದು ಅಳಿವಿನಂಚಿನಲ್ಲಿರುವ ಯಂತ್ರಚಾಲಿತ ಮುದ್ರಣ ವ್ಯವಸ್ಥೆ ಬರುವ ಮೊದಲು ಬಟ್ಟೆ ಮುದ್ರಣದಲ್ಲಿ ಅಸಾಧಾರಣ ಹಿರಿಮೆಯನ್ನು ಸಾಧಿಸಿದ್ದ ಪಡಿಯಚ್ಚು ಮುದ್ರಣ (ಬ್ಲಾಕ್ ಪ್ರಿಂಟಿಂಗ್)ವೆಂಬ ಶುದ್ಧ ಕೈಕಸುಬು ಚರಕದ ಪ್ರಯತ್ನದಿಂದಾಗಿ ಮೊದಲ ಬಾರಿಗೆ ಮಲೆನಾಡನ್ನು ಪ್ರವೇಶಿಸಿದೆ.

ಚರಕದ ಅಂಗಸಂಸ್ಥೆಗಳು : ಸಾಂಸ್ಕೃತಿಕ ಚಟುವಟಿಕೆಗಳ ವೇದಿಕೆಯಾಗಿ ಹುಟ್ಟಿಕೊಂಡ ಚರಕದ ಅಂಗಸಂಸ್ಥೆ "ಜನಪದ ಕಾವ್ಯ ಮಂಡಲ". ಗ್ರಾಮೀಣ ಜನರಿಂದಲೇ ಕಾರ್ಯನಿರ್ವಹಿಸುತ್ತಿರುವ ಇದು ಯಕ್ಷಗಾನ, ತಾಲಮದ್ದಲೆ, ಕೋಲಾಟ, ಸಂಪ್ರದಾಯದ ಹಾಡುಗಳು, ಕವಿಗೋಷ್ಠಿ, ಬೀದಿನಾಟಕ ಮೊದಲಾದ ಕಾರ್ಯಕ್ರಮಗಳನ್ನು ನಡೆಸುವ ಮೂಲಕ ಗ್ರಾಮೀಣ ಪ್ರತಿಭೆಗಳ ವಿಕಾಸಕ್ಕೆ ನೆರವಾಗಿದೆ. ಪ್ರತಿ ವರ್ಷ ಜನವರಿ ತಿಂಗಳಲ್ಲಿ ನಡೆಯುವ ಮೂರು ದಿನಗಳ ಚರಕ ಉತ್ಸವವು ಮಲೆನಾಡಿನ ಒಂದು ಪ್ರಮುಖ ಸಾಂಸ್ಕೃತಿಕ ಉತ್ಸವವಾಗಿ ಹೊರಹಮ್ಮಿದೆ.

ಚರಕದ ವಸ್ತುಗಳ ಮಾರಾಟಕ್ಕೆಂದೇ ಬೆಂಗಳೂರಿನಲ್ಲಿ ಆರಂಭಿಸಲಾಗಿರುವ "ದೇಸಿ ಟ್ರಸ್ಟ್" ಚರಕದ ಆಧಾರಸ್ಥಂಭ. ದೇಸಿ ಎಂದರೆ ಡೆವಲಪಿಂಗ್ ಎಕಲಾಜಿಕಲ್ ಸಸ್ಟೇನಬಲ್ ಇಂಡಸ್ಟ್ರಿ ಎಂಬ ಆಶಯದ ಸಂಕ್ಷಿಪ್ತ ರೂಪ. ದೇಸಿ ಅಂಗಡಿಗಳು ಚರಕ ಮಾತ್ರವಲ್ಲದೆ ಇತರೆ ಹಲವು ಗ್ರಾಮೀಣ ಕೈಗಾರಿಕೆಗಳ ಉತ್ಪನ್ನಗಳಿಗೂ ಮಾರಾಟ ಮಾಧ್ಯಮವಾಗಿ ಗ್ರಾಮೀಣ ಕುಶಲಕರ್ಮಿಗಳ ಹಿತೈಷಿಯಾಗಿ ಕಾರ್ಯನಿರ್ವಹಿಸುತ್ತಿದೆ. ಗ್ರಾಮೀಣ ಕೈಗಾರಿಕೆಗಳಿಗೆ ವಿನ್ಯಾಸಕಾರರು ಹಾಗೂ ತಂತ್ರಜ್ಞರನ್ನು ಒದಗಿಸುವುದು, ಪದಾರ್ಥಗಳ ಗುಣಮಟ್ಟ ಹೆಚ್ಚಿಸುವಲ್ಲಿ ತಾಂತ್ರಿಕ ನೆರವು ನೀಡುವುದು, ಪ್ರದರ್ಶನ ಮಾರಾಟಗಳನ್ನು ಏರ್ಪಡಿಸುವುದು, ತರಬೇತಿ, ಪ್ರಚಾರ, ಅಭಿವೃದ್ಧಿ ಕಾರ್ಯಗಳಿಗೆ ಧನಸಹಾಯ ಮಾಡುವುದು, ಸರ್ಕಾರದ ಮಟ್ಟದಲ್ಲಿ ಹಾಗೂ ಸಾರ್ವಜನಿಕರ

ನಡುವೆ ಕೈಮಗ್ಗ ಕ್ಷೇತ್ರದ ಬಗ್ಗೆ ಅರಿವು ಮೂಡಿಸುವುದು ಇತ್ಯಾದಿ ಚಟುವಟಿಕೆಗಳನ್ನು ದೇಸಿ ಸಂಸ್ಥೆ ನಿರ್ವಹಿಸುತ್ತಿದೆ. ಕೈಮಗ್ಗ ಕ್ಷೇತ್ರದಲ್ಲಿ ಮಹತ್ವದ ಕೆಲಸ ಮಾಡುತ್ತಿರುವ ಸ್ವಯಂ ಸೇವಾ ಸಂಸ್ಥೆಗಳು ಹಾಗೂ ವ್ಯಕ್ತಿಗಳನ್ನು ಉತ್ತೇಜಿಸುವುದಕ್ಕಾಗಿ ಪ್ರತಿಷ್ಠಿತ "ದಾಸಿಮಯ್ಯ ಪ್ರಶಸ್ತಿ"ಯನ್ನು ಸ್ಥಾಪಿಸಲಾಗಿದೆ. ಹೆಗ್ಗೋಡು ಗ್ರಾಮದಲ್ಲಿ ನೇಕಾರಿಕೆಗೆ ಒತ್ತು ನೀಡುವ ಗ್ರಾಮೀಣಾಭಿವೃದ್ಧಿ ತರಬೇತಿ ಸಂಸ್ಥೆಯೊಂದರ ಸ್ಥಾಪನೆ, ನೈಸರ್ಗಿಕ ಬಣ್ಣ ಹಾಕಿದ ಕೈಮಗ್ಗ ಹಾಗೂ ಖಾದಿ ಬಟ್ಟೆಗಳ ಹೋಲ್‌ಸೇಲ್ ಮಾರಾಟದ ಸ್ಥಾಯಿ ವ್ಯವಸ್ಥೆಯೊಂದರ ನಿರ್ಮಾಣ ಇವು ದೇಸಿ ಹಾಗೂ ಚರಕ ಸಂಸ್ಥೆಗಳ ಮುಂದಿನ ಗುರಿಗಳಾಗಿವೆ.

ಗ್ರಾಮೀಣಾಭಿವೃದ್ಧಿಯ ಹೊಸ ಸಾಧ್ಯತೆಯಾಗಿ, ಪರಿಸರ ಸ್ನೇಹಿ ಕೈಗಾರಿಕೆಯಾಗಿ, ಮಹಿಳೆಯರ ಸ್ವಾವಲಂಭನೆಗೆ ದಾರಿಯಾಗಿ, ಗ್ರಾಮೀಣ ಕಲೆ ಹಾಗೂ ಸಂಸ್ಕೃತಿಯನ್ನು ಉಳಿಸಿ ಬೆಳೆಸುವ ಸಂಸ್ಥೆಯಾಗಿ ಚರಕ ಕಾರ್ಯನಿರ್ವಹಿಸುತ್ತಿದೆ. ದೇಶೀಯ ಪರಂಪರೆಗಳನ್ನು ಬೆಳೆಸುವ ಅಪರೂಪದ ಸಂಸ್ಥೆಗಳಲ್ಲಿ ಚರಕ ಕೂಡ ಗುರುತಿಸಿಕೊಂಡಿದೆ. ಸಹಕಾರ ಕ್ಷೇತ್ರದ ಹೊಸ ಸಾಧ್ಯತೆಗಳತ್ತ ವ್ಯಾವಹಾರಿಕ ಮಿತಿಗಳಾಚೆಗೂ ಬೆಳೆದ ಚರಕ ಸಂಸ್ಥೆ ಆಸಕ್ತ ಮನಗಳಿಗೆ ಹೊಸತನ್ನು ಹೊಳೆಯಿಸುವ ಮಾದರಿಯಾಗಲಿ ಎನ್ನುವ ಆಶಯ ನಮ್ಮದು.

ಸಂಪರ್ಕ ಹಾಗೂ ಭೇಟಿಗಾಗಿ : ಚರಕ ಮಹಿಳಾ ವಿವಿದೋದ್ದೇಶ ಕೈಗಾರಿಕಾ ಸಹಕಾರ ಸಂಘ ನಿ., ಭೀಮನಕೋಣೆ – 577417, ತಾ:ಸಾಗರ, ಶಿವಮೊಗ್ಗ ಜಿಲ್ಲೆ, (ಹೆಗ್ಗೋಡು–ವರದಮೂಲ ರಸ್ತೆ) ಫೋನ್: 08183 – 265602, ಮೊಬೈಲ್–9900257910, ವೆಬ್‌ತಾಣ : http://www.charaka.in





## ಟ್ರಾನ್ಸ್‌ಪೋರ್ಟ್ ಕೋ-ಆಪರೇಟಿವ್ ಸೊಸೈಟಿ ಲಿ., ಕೊಪ್ಪ (ಸಹಕಾರ ಸಾರಿಗೆ)

ಮಾನವನ ಇತಿಹಾಸದಲ್ಲಿ ನಾಗರೀಕತೆಯ ಬೆಳವಣಿಗೆಯಲ್ಲಿ ಸಾರಿಗೆ ವ್ಯವಸ್ಥೆಯು ಬಹುಮುಖ್ಯ ಪಾತ್ರ ವಹಿಸಿದೆ. ಒಂದೆಡೆಯಿಂದ ಇನ್ನೊಂದೆಡೆಗೆ ಸಂಚರಿಸುವುದು, ವಸ್ತುಗಳು, ಪ್ರಾಣಿಗಳ ಸಾಗಾಣಿಕೆಯನ್ನ ಸಾರಿಗೆ ಎನ್ನಬಹುದು. ಸಾರಿಗೆ ವ್ಯವಸ್ಥೆ ಬೆಳೆದು ಬಂದ ಬಗೆಗೆ ಮಾನವನ ಇತಿಹಾಸದಷ್ಟೇ ಹಳೆಯದಾದ ಇತಿಹಾಸವಿದೆ. ಆರಂಭದಲ್ಲಿ ಮಾನವ ಸಾರಿಗೆ, ಪ್ರಾಣಿ ಸಾರಿಗೆಗಳು ಹೆಚ್ಚು ಬಳಕೆಯಲ್ಲಿದ್ದವು. ಹರಪ್ಪ, ಮೆಹಂಜೋದಾರೋ ನಾಗರೀಕತೆಯ ಕಾಲದಲ್ಲಿ ವ್ಯವಸ್ಥಿತವಾಗಿ ರಸ್ತೆಗಳು ಅಭಿವೃದ್ಧಿ ಹೊಂದಿದ್ದವು. ವ್ಯಾಪಾರಕ್ಕಾಗಿ ಪೋರ್ಚುಗೀಸರು ಭಾರತಕ್ಕೆ ಬರುವುದರೊಂದಿಗೆ ಜಲ ಸಾರಿಗೆಯ ಅಭಿವೃದ್ಧಿಯಾಯಿತು. ಹಂತ ಹಂತವಾಗಿ ರೈಲ್ವೆ ಸಾರಿಗೆ, ವಾಯು ಸಾರಿಗೆಗಳು ಜಾರಿಯಲ್ಲಿ ಬಂದವು. ಸಾಗಾಣಿಕೆ ಹಾಗೂ ಸಂಚಾರವನ್ನು ಸುಲಭಗೊಳಿಸುವ ನಿಟ್ಟಿನಲ್ಲಿ ವಿವಿಧ ಸಾರಿಗೆಗಳಲ್ಲಿ ಅಭಿವೃದ್ಧಿಗಳನ್ನು ಮಾಡುತ್ತಾ ಬರಲಾಯಿತು. ಪ್ರಸ್ತುತ ಭಾರತ ರಸ್ತೆ ಸಾರಿಗೆಯಲ್ಲಿ 2ನೇ ಸ್ಥಾನದಲ್ಲಿ (ಅಮೇರಿಕಾ 1ನೇ ಸ್ಥಾನ), ರೈಲ್ವೆ ಸಾರಿಗೆಯಲ್ಲಿ 2ನೇ ಸ್ಥಾನದಲ್ಲಿ (ಕೆನಡಾ 1ನೇ ಸ್ಥಾನ), ಜಲಸಾರಿಗೆಯಲ್ಲಿ 4ನೇ ಸ್ಥಾನದಲ್ಲಿ, ವಾಯುಸಾರಿಗೆಯಲ್ಲಿ 14ನೇ ಸ್ಥಾನದಲ್ಲಿಯೂ ಇರುತ್ತದೆ. ದೇಶದ ಆರ್ಥಿಕ, ವಾಣಿಜ್ಯ, ರಾಜಕೀಯ, ಸಾಮಾಜಿಕ, ಶೈಕ್ಷಣಿಕ ಕ್ಷೇತ್ರಗಳ ಸರ್ವಾಂಗೀಣ ಅಭಿವೃದ್ಧಿಗೆ ಸಾರಿಗೆ ಅವಶ್ಯಕವಾಗಿದೆ. ರಸ್ತೆ ಸಾರಿಗೆ ಕ್ಷೇತ್ರದಲ್ಲಿ ಹೆಸರು ಮಾಡಿರುವ ರಾಜ್ಯದ ಸಹಕಾರ ಸಂಸ್ಥೆಯೊಂದರ ಪರಿಚಯ ಇಲ್ಲಿದೆ.

ಹಿನ್ನೆಲೆ : ಪ್ರಸ್ತುತ ಚಿಕ್ಕಮಗಳೂರು, ಶಿವಮೊಗ್ಗ, ಉಡುಪಿ ಹಾಗೂ ದಾವಣಗೆರೆಗಳಲ್ಲಿ ಸಹಕಾರ ಸಾರಿಗೆ ಎಂದೇ ಕರೆಯಲ್ಪಡುವ ಟ್ರಾನ್ಸ್‌ಪೋರ್ಟ್ ಕೋ-ಆಪರೇಟೀವ್ ಸೊಸೈಟಿ ಲಿ. ಇದು ಸಾರಿಗೆಯ ವಾಣಿಜ್ಯಾತ್ಮಕ ಬಳಕೆಯ ಇತಿಹಾಸವನ್ನು ಹೊಂದಿದ್ದು ಶಂಕರ ಟ್ರಾನ್ಸ್‌ಪೋರ್ಟ್ ಕಂಪನಿಯ ಅನುಭವ ಹಾಗೂ ಅವನತಿಯ ನಂತರ ಹುಟ್ಟಿದ ಸಂಸ್ಥೆಯಾಗಿದೆ. ಶಂಕರ ಟ್ರಾನ್ಸ್‌ಪೋರ್ಟ್ ಕಂಪನಿಯನ್ನು 1957ರಲ್ಲಿ ದಿವಂಗತ ಶ್ರೀ ಎಂ.ಎಸ್. ದೇವೇಗೌಡರು ಆರಂಭಿಸಿದರು. 70 ಹಾಗೂ 80ರ ದಶಕದಲ್ಲಿ ಅರೂರ್ ಕುಟುಂಬ ಇದನ್ನು ನಿರ್ವಹಿಸುತ್ತಿತ್ತು. 85 ಮಾರ್ಗಗಳಲ್ಲಿ ಬಸ್ ವ್ಯವಸ್ಥೆಯನ್ನು ಕಲ್ಪಿಸಿದ್ದ ಈ ಸಂಸ್ಥೆ ಶಿವಮೊಗ್ಗ, ಚಿಕ್ಕಮಗಳೂರು ಹಾಗೂ ದಕ್ಷಿಣ ಕನ್ನಡದಲ್ಲಿ ರಸ್ತೆ ಸಾರಿಗೆಯಲ್ಲಿ ಸಮರ್ಥವಾಗಿ ಕಾರ್ಯನಿರ್ವಹಿಸುತ್ತಿದ್ದ ಸಂಸ್ಥೆಯಾಗಿ ಹೆಸರು ಗಳಿಸಿತ್ತು. ಈ ಸಂಸ್ಥೆಯ ಅಭಿವೃದ್ಧಿಗಾಗಿ 350ಕ್ಕೂ ಹೆಚ್ಚು ಕೆಲಸಗಾರರು ಶ್ರಮಿಸುತ್ತಿದ್ದರು.

ದಿನಾಂಕ:07–02–1991ರಂದು ಶಂಕರ ಟ್ರಾನ್ಸ್‌ಪೋರ್ಟ್ ಸಂಸ್ಥೆಯನ್ನು ಅನೇಕ ಕಾರಣಗಳಿಂದಾಗಿ 67 ರಸ್ತೆ ಪರವಾನಗಿಗಳನ್ನು ಸರ್ಕಾರಕ್ಕೆ ಹಿಂತಿರುಗಿಸುವುದರೊಂದಿಗೆ ಮುಚ್ಚಲಾಯಿತು. ಈ ಸಂದರ್ಭದಲ್ಲಿ ಅದರಲ್ಲಿ ಕೆಲಸ ನಿರ್ವಹಿಸುತ್ತಿದ್ದ ಕಾರ್ಮಿಕರೆಲ್ಲ ಬೀದಿಪಾಲಾಗ ಬೇಕಾಯಿತು. ಆಗಿನ ಕಾರ್ಮಿಕ ನಾಯಕರಾಗಿದ್ದ ದಿವಂಗತ ಬಿ.ಕೆ. ಸುಂದರೇಶ್‌ರವರ ನೇತೃತ್ವದಲ್ಲಿ ಶಂಕರ ಟ್ರಾನ್ಸ್‌ಪೋರ್ಟ್‌ನಲ್ಲಿ ಕೆಲಸ ಮಾಡಿದ್ದ ನೌಕರರೆಲ್ಲ ಸೇರಿ ಸಹಕಾರ ಮಾರ್ಗದಲ್ಲಿ ಬಸ್‌ಗಳನ್ನು ನಡೆಸಲು ಪರವಾನಗಿ ಪಡೆಯಲು ಪ್ರಯತ್ನಿಸಿದರು. ಈ ಹಿನ್ನೆಲೆಯಲ್ಲಿ ದಿನಾಂಕ:11.02.1991ರಂದು ರೀಜಿನಲ್ ಟ್ರಾನ್ಸ್‌ಪೋರ್ಟ್ ಅಥಾರಿಟಿಯು ಡಾ॥ ಎಸ್. ಸುಬ್ರಹ್ಮಣ್ಯರವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ 6 ರಸ್ತೆ ಪರವಾನಗಿಗಳನ್ನು ಶಂಕರ ಟ್ರಾನ್ಸ್‌ಪೋರ್ಟ್ ಕಂಪನಿ ನೌಕರರ ಯೂನಿಯನ್‌ಗೆ ನೀಡಲು ತೀರ್ಮಾನಿಸಿತು. ಹಿಂದೆ ಕೆಲಸ ಮಾಡುತ್ತಿದ್ದ ಸಂಸ್ಥೆಯಿಂದ ಬಂದ ಅಲ್ಪಸ್ವಲ್ಪ ಪರಿಹಾರವನ್ನು ಒಟ್ಟುಗೂಡಿಸಿ ತಾವೇ ಒಂದು ಸಂಸ್ಥೆಯನ್ನು ಕಟ್ಟಲು ಕಾರ್ಮಿಕರು ನಿರ್ಧರಿಸಿದರು. 130 ನೌಕರರು ತಮ್ಮ ಪರಿಹಾರ ಹಣವಾದ 4.85 ಲಕ್ಷಗಳನ್ನು ಹೊಸ ಸಂಸ್ಥೆ ಸ್ಥಾಪನೆಗೆ ವಿನಿಯೋಗಿಸಲು ಮುಂದೆ ಬಂದರು. ಇದರ ಪ್ರತಿಫಲವೇ ಇಂದು ಹೆಮ್ಮರವಾಗಿ ಬೆಳೆದ ಸಹಕಾರ ಸಂಘ "ಟ್ರಾನ್ಸ್‌ಪೋರ್ಟ್ ಕೋ–ಆಪರೇಟಿವ್ ಸೊಸೈಟಿ ಲಿಮಿಟೆಡ್".

ಆಡಳಿತ : ಸಂಘದ ನೌಕರರಾದವರೆಲ್ಲರೂ ಸದಸ್ಯತ್ವ ಹೊಂದಲೇಬೇಕೆಂಬ ನಿಯಮದನ್ವಯ, ನೌಕರರೇ ಸಹಕಾರಿಯ ಸದಸ್ಯರಾಗಿಯೂ ಇರುವ ವೈಶಿಷ್ಟ್ಯ ಹೊಂದಿರುವ ಹಾಗೂ ನೌಕರರೇ ನಿರ್ದೇಶಕರಾಗಲು ಅವಕಾಶವಿರುವ ಕಾರಣದಿಂದ ಹಾಗೂ ನೌಕರರ ಕಾರ್ಯನಿರ್ವಹಣೆಯ ಆಧಾರದಲ್ಲಿ ಹುದ್ದೆಗಳನ್ನು, ಬಡ್ತಿಗಳನ್ನು ನೀಡಲಾಗುವುದರಿಂದ ಹಾಗೂ ಸದಸ್ಯತ್ವದ ಸ್ವರೂಪವು ಹುದ್ದೆಗಳ ಮೂಲಕ ನಿರ್ಣಯಿಸಲ್ಪಡುವುದರಿಂದ ಸಹಕಾರ ಕ್ಷೇತ್ರದಲ್ಲೇ ವಿಭಿನ್ನವೆನಿಸುವ ಆಡಳಿತ ನಿರ್ವಹಣಾ ಪದ್ಧತಿ ಈ ಸಂಸ್ಥೆಯ ವಿಶೇಷ.

ಸಹಕಾರ ಸಾರಿಗೆಯಲ್ಲಿನ ದೈನಂದಿನ ಆಡಳಿತ ನಿರ್ವಹಣೆಯಲ್ಲಿ ವಿಕೇಂದ್ರೀಕೃತ ಮಾದರಿಯನ್ನು ಅನುಸರಿಸಲಾಗುತ್ತಿದೆ. ಆಡಳಿತವನ್ನು ವಿವಿಧ ವಿಭಾಗಗಳಾಗಿ ವಿಂಗಡಿಸಿಕೊಳ್ಳಲಾಗಿದ್ದು, ಆಯಾ ವಿಭಾಗದಲ್ಲಿ ಪರಿಣಿತಿ ಪಡೆದ ನೌಕರರನ್ನು ಕಾರ್ಯನಿರ್ವಹಣೆಯಲ್ಲಿ ತೊಡಗಿಸಲಾಗಿದೆ. ಎಲ್ಲಾ ವಿಭಾಗಗಳ ಕಾರ್ಯನಿರ್ವಹಣೆಯನ್ನು ಮುಖ್ಯಕಾರ್ಯನಿರ್ವಹಣಾಧಿಕಾರಿ/ವ್ಯವಸ್ಥಾಪಕ ನಿರ್ದೇಶಕರು ನಿರ್ವಹಿಸುತ್ತಾರೆ. ವಿಭಾಗಗಳಲ್ಲಿ ಮುಖ್ಯವಾಗಿ ಯೋಜನಾ ವಿಭಾಗ, ಲೆಕ್ಕಪತ್ರ ವಿಭಾಗ, ಸಿಬ್ಬಂದಿ ವಿಭಾಗ, ಟ್ರಾನ್ಸ್‌ಪೋರ್ಟ್ ವಿಭಾಗ, ಗೇಟ್‌ಪಾಸ್ ವಿಭಾಗ, ಟ್ರಾಫಿಕ್ ವಿಭಾಗ, ಚೆಕ್ಕಿಂಗ್ ವಿಭಾಗ, ತಾಂತ್ರಿಕ ವಿಭಾಗ, ಉಗ್ರಾಣ/ದಾಸ್ತಾನು ವಿಭಾಗ ಎನ್ನುವ ಪ್ರಕಾರಗಳಿವೆ.

ಸಹಕಾರ ಸಾರಿಗೆಯ ಧ್ಯೇಯ ಮತ್ತು ಉದ್ದೇಶಗಳು : ಸಂಘವು ಮುಖ್ಯವಾಗಿ ಸಾರ್ವಜನಿಕ ಸಾರಿಗೆ ಉದ್ಯಮವನ್ನು ಕೈಗೊಳ್ಳುವ ಮೂಲಕ ಸಂಘದ ಸದಸ್ಯರಿಗೆ ಯೋಗ್ಯ ಉದ್ಯೋಗಾವಕಾಶಗಳನ್ನು ಕಲ್ಪಿಸಿಕೊಡುವುದು, ಸಂಘದ ಸದಸ್ಯರುಗಳ ಆರ್ಥಿಕ ಹಿತಾಸಕ್ತಿ ಬೆಳೆಯುವಂತೆ ಪ್ರೋತ್ಸಾಹಿಸುವ ಸಲುವಾಗಿ ಸಾರಿಗೆ ಉದ್ಯಮಕ್ಕೆ ಪೂರಕವಾದ ಬಿಡಿಭಾಗಗಳ ಮಾರಾಟ, ಆಯಿಲ್ ಲೂಬ್ರಿಕೆಂಟ್‌ಗಳ ಮಾರಾಟ ಮುಂತಾದ ವ್ಯಾಪಾರೋದ್ಯಮವನ್ನು ನಡೆಸುವುದು, ಗ್ರಾಮೀಣ ಪ್ರದೇಶಗಳಿಗೆ ಹೆಚ್ಚಿನ ಸಾರಿಗೆ ಸೌಕರ್ಯ ಒದಗಿಸುವ ಭಾಗವಾಗಿ ಸಾಮಾನು ಸರಂಜಾಮುಗಳನ್ನು ಸಾಗಿಸುವ ಲಾರಿ ಉದ್ಯಮವನ್ನು ಸಹ ಕೈಗೊಳ್ಳುವುದು, ಪ್ರತಿಷ್ಠಿತ ವಾಹನಗಳ ಮಾರಾಟ ಮತ್ತು ದುರಸ್ಥಿ ಕಾರ್ಯಗಳನ್ನು ಕೈಗೊಳ್ಳುವುದು, ವರ್ಕ್‌ಷಾಪ್ ಮತ್ತು ಸರ್ವೀಸ್ ಸ್ಟೇಷನ್‌ಗಳನ್ನು ನಡೆಸುವುದು, ಟಯರ್ ರಿಟ್ರೇಡಿಂಗ್ ಕಾರ್ಖಾನೆಯನ್ನು ಸ್ಥಾಪಿಸುವುದು, ಮೋಟಾರು ವಾಹನಗಳ ಚಾಲನಾ ತರಬೇತಿ ಶಾಲೆಗಳನ್ನು ನಡೆಸುವುದು ಮುಂತಾದ ಉದ್ದೇಶಗಳನ್ನು ಹೊಂದಿದೆ.

ಪ್ರಶಸ್ತಿ ಪುರಸ್ಕಾರಗಳು : ಯಾವುದೇ ಸಂಘ, ಸಂಸ್ಥೆ ಅಥವಾ ವ್ಯಕ್ತಿಗಳ ಸಾಧನೆಗಳು ವೈಶಿಷ್ಟ್ಯತೆಗಳನ್ನು ಸಮಾಜ ಕಾಲಕಾಲಕ್ಕೆ ಗುರುತಿಸಿ ಪ್ರೋತ್ಸಾಹಿಸುವುದು ಪ್ರಶಸ್ತಿ ಪುರಸ್ಕಾರಗಳನ್ನು ನೀಡುವುದರ ಮೂಲಕ. ಈ



ಗುರುತಿಸುವಿಕೆ ಹೆಚ್ಚಿನ ಸಾಧನೆಗೆ ಪ್ರೋತ್ಸಾಹವನ್ನೂ ಜವಾಬ್ದಾರಿಗಳನ್ನೂ ಹೆಚ್ಚಿಸುತ್ತದೆ. ಸಹಕಾರ ಸಾರಿಗೆ ತನ್ನ ವೈಶಿಷ್ಟ್ಯತೆ ಹಾಗೂ ಸಾಧನೆಗಳಿಂದ ಸಮಾಜದಲ್ಲಿ ವಿಶಿಷ್ಟವಾಗಿ ಗುರುತಿಸಿಕೊಳ್ಳಲ್ಪಡುತ್ತಿದೆ. ರಾಜ್ಯದ ವಿಶಿಷ್ಟ ಸಹಕಾರ ಸಂಘ, ಅಧ್ಯಕ್ಷರಿಗೆ ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ, 53ನೇ ಅಖಿಲ ಭಾರತ ಸಹಕಾರ ಸಪ್ತಾಹದಲ್ಲಿ "ಜಿಲ್ಲಾ ಉತ್ತಮ ಸಹಕಾರ ಸಂಘ"ವೆಂಬ ಪ್ರಶಸ್ತಿ, 2008ರ ಹೆಚ್.ಡಿ. ಚೌಡಯ್ಯ ಸಹಕಾರ ಪ್ರಶಸ್ತಿ, 2009ರಲ್ಲಿ ಎಕಾನಾಮಿಕ್ ಗ್ರೋಥ್ ಸೊಸೈಟಿ ಆಫ್ ಇಂಡಿಯಾ, ಇವರು ವರ್ಲ್ಡ್ ಹ್ಯಾಬಿಟೇಟ್ ಸೆಂಟರ್, ನ್ಯೂ ಡೆಲ್ಲಿಯಲ್ಲಿ ನಡೆದ ಸಮಾರಂಭದಲ್ಲಿ "ರಾಷ್ಟ್ರೀಯ ವಿಕಾಸ್ ರತನ್ ಅವಾರ್ಡ್", 2009 ತರೀಕೆರೆಯಲ್ಲಿ ನಡೆದ ಚಿಕ್ಕಮಗಳೂರು ಜಿಲ್ಲಾ 8ನೇ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಸಂಘಕ್ಕೆ "ಅಮೃತಶ್ರೀ" ಪ್ರಶಸ್ತಿ ಮುಂತಾದವುಗಳು ಈ ಸಂಸ್ಥೆಯ ಸಾಧನೆಗೆ ಸಿಕ್ಕ ಗರಿಗಳಾಗಿವೆ.

ಸೇವಾ ಸೌಲಭ್ಯಗಳು : ಯಾವುದೇ ಸಂಘ ಅಥವಾ ಸಂಸ್ಥೆಯ ಅಭಿವೃದ್ಧಿಯಲ್ಲಿ ನೌಕರರ ಪಾತ್ರ ಮಹತ್ವದ್ದು. ಇದನ್ನರಿತಿರುವ ಹಾಗೂ ನೌಕರರ ಹಿತಾಸಕ್ತಿಯನ್ನು ಕಾಪಾಡುವ ಉದ್ದೇಶದಿಂದಲೇ ಆರಂಭಿಸಲ್ಪಟ್ಟ ಸಹಕಾರ ಸಾರಿಗೆ ನೌಕರರುಗಳಿಗೆ ವಿಶೇಷ ಸೇವಾ ಸೌಲಭ್ಯಗಳನ್ನು ಒದಗಿಸುವುದರ ಮೂಲಕ ಅವರನ್ನು ಪ್ರೋತ್ಸಾಹಿಸುತ್ತಿದೆ. ಸರ್ಕಾರದಿಂದ ಅನುಮೋದನೆಗೊಂಡ ಉತ್ತಮ ವೇತನ, ದಿನಭತ್ಯೆ ಮತ್ತು ಹೆಚ್ಚುವರಿ ಭತ್ಯೆ ಸೌಲಭ್ಯ, ಭವಿಷ್ಯನಿಧಿ, ವೈದ್ಯಕೀಯ ಭತ್ಯೆ, ಹೆಚ್ಚುವರಿ ಕರ್ತವ್ಯ ಭತ್ಯೆ, ಪ್ರಯಾಣದ ಭತ್ಯೆ, ವರ್ಷಕ್ಕೆ ಒಂದು ಜೊತೆ ಉತ್ತಮ ಗುಣಮಟ್ಟದ ಸಮವಸ್ತ್ರ, ಕುಟುಂಬದ ಸದಸ್ಯರಿಗೆ ತಿಂಗಳಿಗೆ 2 ಉಚಿತ ಪಾಸ್, ಜನತಾ ವ್ಯಕ್ತಿಗತ ಅಪಘಾತ ವಿಮೆ, ಕಾರ್ಮಿಕ ಪರಿಹಾರ ವಿಮೆ, ಮಕ್ಕಳ ವಿದ್ಯಾಭ್ಯಾಸಕ್ಕೆ ವಾರ್ಷಿಕ ಪ್ರೋತ್ಸಾಹ ಧನ, ಮಕ್ಕಳ ವಿದ್ಯಾಭ್ಯಾಸದ ಸಲುವಾಗಿ ಪ್ರಯಾಣ ಮಾಡಲು ಉಚಿತ ಪಾಸ್ ವಿತರಣೆ ಮುಂತಾದವು ನೌಕರರಿಗೆ ನೀಡಲಾಗುತ್ತಿರುವ ವಿಶೇಷ ಸೌಲಭ್ಯಗಳಾಗಿವೆ.

ಇದಲ್ಲೆ, ಸದಸ್ಯರುಗಳಿಗೆ ವಾರ್ಷಿಕ ಡಿವಿಡೆಂಡ್ ಜೊತೆಗೆ ಕುಟುಂಬದ ಸದಸ್ಯರಿಗೆ ಉಚಿತ ಪಾಸ್, ಮಕ್ಕಳ ವಿದ್ಯಾಭ್ಯಾಸದ ಪ್ರೋತ್ಸಾಹ ಧನ ಮತ್ತು ವಿಶೇಷ ಕೊಡುಗೆಗಳು, ಮಕ್ಕಳ ವಿದ್ಯಾಭ್ಯಾಸದ ಸಲುವಾಗಿ ಪ್ರಯಾಣ ಮಾಡಲು ಉಚಿತ ಪಾಸ್ ವಿತರಣೆ, ಸ್ಥಾಪನ ಸದಸ್ಯರ ನಾಮಿನಿಯವರಿಗೆ ಗೌರವ ಉಚಿತ ಪಾಸ್ ಮುಂತಾದ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ.

ಸಂಘದ ವತಿಯಿಂದ ಸಾಮಾಜಿಕ ಕಳಕಳಿ ಕಾರ್ಯಕ್ರಮಗಳು : ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕಗಳಿಸಿದ ಕೊಪ್ಪ, ನ.ರಾ.ಪುರ ಮತ್ತು ಶೃಂಗೇರಿ ತಾಲ್ಲೂಕುಗಳ ವ್ಯಾಪ್ತಿಯ ಎಲ್ಲಾ ಪ್ರೌಢಶಾಲಾ ಮಕ್ಕಳಿಗೆ ಪ್ರತಿ ವರ್ಷ ಆಗಸ್ಟ್–15ನೇ ತಾರೀಖು ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ಹಮ್ಮಿಕೊಂಡು ಸುಮಾರು 50 ರಿಂದ 60 ಜನ ವಿದ್ಯಾರ್ಥಿಗಳಿಗೆ ಪಠ್ಯ ಚಟುವಟಿಕೆ ಸಂಬಂಧಿಸಿದ ಸಾಮಾಗ್ರಿಗಳನ್ನು ಸಂಘದ ವತಿಯಿಂದ ನೀಡಲಾಗುತ್ತಿದೆ.

ಸಂಘದ ವತಿಯಿಂದ ಶಿವಮೊಗ್ಗ, ದಕ್ಷಿಣ ಕನ್ನಡ, ಚಿಕ್ಕಮಗಳೂರು ಜಿಲ್ಲೆಗಳ ಅಂಗವಿಕಲ ವಿದ್ಯಾರ್ಥಿಗಳಿಗೆ ಉಚಿತವಾಗಿ ಸಂಸ್ಥೆಯ ಬಸ್ ಪಾಸ್ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ. ಶಿವಮೊಗ್ಗ, ದಕ್ಷಿಣ ಕನ್ನಡ ಮತ್ತು ಚಿಕ್ಕಮಗಳೂರು ಜಿಲ್ಲಾ ವ್ಯಾಪ್ತಿಯಲ್ಲಿ ಬರುವ ಅಂಗವಿಲರಿಗೆ ಬಸ್ ಪ್ರಯಾಣದರ ಶೇ. 50ರಷ್ಟು ರಿಯಾಯಿತಿ ನೀಡಿ ಪಾಸ್ ನೀಡುವ ವ್ಯವಸ್ಥೆ ಮಾಡಲಾಗಿದೆ. ಬಿ.ಪಿ.ಎಲ್. ಕಾರ್ಡ್ ಹೊಂದಿರುವ 65 ವರ್ಷ ವಯೋಮಿತಿ ಮೀರಿದವರಿಗೆ ಬಸ್ ಪ್ರಯಾಣದರದ ಶೇ. 50ರಷ್ಟು ರಿಯಾಯಿತಿ ನೀಡಿ 3 ಜಿಲ್ಲೆಗಳಲ್ಲಿ ಪ್ರಯಾಣಿಸಲು ಅವಕಾಶ ಕಲ್ಪಿಸಲಾಗಿದೆ. 3 ಜಿಲ್ಲೆಗಳ ವ್ಯಾಪ್ತಿಯ ಸ್ವಾತಂತ್ರ್ಯ ಹೋರಾಟಗಾರರಿಗೆ ಬಸ್‌ನಲ್ಲಿ ಪ್ರಯಾಣಿಸಲು

ಸಂಘದ ವತಿಯಿಂದ ಸಂಪೂರ್ಣ ರಿಯಾಯಿತಿ ನೀಡಿ ಬಸ್ ಪಾಸ್ ವಿತರಿಸಲಾಗಿರುತ್ತದೆ. 1ನೇ ತರಗತಿಯಿಂದ 5ನೇ ತರಗತಿಯವರೆಗಿನ ವಿದ್ಯಾರ್ಥಿಗಳಿಗೆ ಬಸ್ ಪ್ರಯಾಣದರದಲ್ಲಿ ಶೇ.75ರಷ್ಟು ರಿಯಾಯಿತಿ ಹಾಗೂ 6ನೇ ತರಗತಿಯಿಂದ ಮೇಲ್ಪಟ್ಟ ಎಲ್ಲಾ ತರಗತಿಯ ವಿದ್ಯಾರ್ಥಿಗಳಿಗೆ ಶೇ.50ರಷ್ಟು ರಿಯಾಯಿತಿ ನೀಡಿ ಪ್ರಯಾಣಿಸುವ ವ್ಯವಸ್ಥೆ ಮಾಡಲಾಗಿದೆ. ಸರ್ಕಾರಿ ನೌಕರರ ಶೇ.25ರಷ್ಟು ರಿಯಾಯಿತಿ ನೀಡಿ ಬಸ್ ಪಾಸ್ ವಿತರಿಸಲಾಗುತ್ತಿದೆ. ಸುಮಾರು 4000ದಷ್ಟು ಸರ್ಕಾರಿ ನೌಕರರು ಇದರ ಪ್ರಯೋಜನ ಪಡೆಯುತ್ತಿರುತ್ತಾರೆ. ಸಹಕಾರ ಕ್ಷೇತ್ರದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳಿಗೆ ಬಸ್ ಪ್ರಯಾಣದರದ ಶೇ.50ರಷ್ಟು ರಿಯಾಯಿತಿ ನೀಡಲಾಗುತ್ತಿದೆ. ಸಂಘದ ನೌಕರರ ಪ್ರತಿ ಕುಟುಂಬದ 2 ಜನ ಸದಸ್ಯರಿಗೆ ವಾರ್ಷಿಕ 24 ಪಾಸ್‌ಗಳನ್ನು ಉಚಿತವಾಗಿ ನೀಡಲಾಗುತ್ತಿದೆ. ಸರ್ಕಾರದ ಯೋಜನೆಯಡಿ ಕೈಗಾರಿಕೆ, ಕಂಪ್ಯೂಟರ್, ಗಾರ್ಮೆಂಟ್ಸ್ ಇತರೆ ತರಬೇತಿಯ ಶಿಬಿರಾರ್ಥಿಗಳಿಗೆ ಶೇ.50ರಷ್ಟು ಬಸ್ ಪಾಸ್ ರಿಯಾಯಿತಿ ನೀಡಲಾಗುತ್ತಿದೆ. ಈ ಎಲ್ಲ ಸಾರ್ವಜನಿಕ ಕಳಕಳಿ ಕಾರ್ಯಕ್ರಮಗಳ ವಾರ್ಷಿಕ ಅಂದಾಜು ವೆಚ್ಚ ರೂ.55.50ಲಕ್ಷಗಳನ್ನು ಸಾರ್ವಜನಿಕ ಹಿತಾಸಕ್ತಿಗಾಗಿ ವ್ಯಯಿಸಲಾಗುತ್ತಿದೆ.

ಸಾಧನೆ : ಪ್ರಥಮದಲ್ಲಿ ತನ್ನ ನಿರುದ್ಯೋಗ ಸಮಸ್ಯೆಯನ್ನು ನಿವಾರಿಸುವ ಉದ್ದೇಶದಿಂದ ಪ್ರಾರಂಭಗೊಂಡ ಈ ಸಂಘವು ಮುಂದೆ ಗ್ರಾಮೀಣ ಭಾಗದ ಜನರಿಗೆ ಅದರಲ್ಲೂ ಪ್ರಯಾಣಿಕರಿಗೆ ಉತ್ತಮ ಸಾರಿಗೆ ಸೌಕರ್ಯ ಕಲ್ಪಿಸುವ ಉದ್ದೇಶದಿಂದ ಅಭಿವೃದ್ಧಿಯತ್ತ ನಡೆಯಿತು. ಅದರಂತೆ ಈ ಸಂಘವು ಚಿಕ್ಕಮಗಳೂರು, ಶಿವಮೊಗ್ಗ, ಉಡುಪಿ ಜಿಲ್ಲೆಯಾದ್ಯಂತ ಸಾರಿಗೆ ಸೌಕರ್ಯವನ್ನು ಕೈಗೊಂಡಿದ್ದು, ನೂತನ ಮಾದರಿಯ, ಪ್ರಯಾಣಿಕರ ಪ್ರಯಾಣಕ್ಕೆ ಯೋಗ್ಯ ರೀತಿಯ ಬಸ್ಸುಗಳನ್ನು ಒದಗಿಸುತ್ತಿದ್ದು, ಈ ಸುತ್ತಲಿನ ವಿದ್ಯಾವಂತ ನಿರುದ್ಯೋಗಿಗಳ ನಿರುದ್ಯೋಗ ಸಮಸ್ಯೆಯನ್ನು ಹೋಗಲಾಡಿಸುತ್ತಾ ಹೆಚ್ಚು ಹೆಚ್ಚು ಉದ್ಯೋಗಗಳನ್ನು ಸೃಷ್ಟಿ ಮಾಡುತ್ತಾ ತನ್ನ ಉದ್ಯಮವನ್ನು ವಿಸ್ತರಿಸುತ್ತಿದೆ.

ಸಂಘವು ಪ್ರಧಾನ ಕಛೇರಿಯಾದ ಕೊಪ್ಪದಲ್ಲಿ 1998ರಲ್ಲಿ ನಿರ್ಮಾಣಮಾಡಲ್ಪಟ್ಟ ಎರಡು ಅಂತಸ್ತಿನ ಸ್ವಂತ ಕಟ್ಟಡ ಹೊಂದಿದ್ದು, ಚಿಕ್ಕಮಗಳೂರು ಜಿಲ್ಲೆಯಲ್ಲಿ ಪ್ರಥಮವಾಗಿ ಗಣಕಯಂತ್ರ ಅಳವಡಿಸಿದ ಸಹಕಾರ ಸಂಘವೆಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಸಂಘದ ಬಸ್ಸುಗಳ ಹಾಗೂ ಅದರ ವ್ಯವಸ್ಥಿತ ತಾಂತ್ರಿಕ ನಿರ್ವಹಣೆಗೆ ಸಂಘದ ಪ್ರಧಾನ ಕೇಂದ್ರವಾದ ಕೊಪ್ಪದಲ್ಲಿ ಸುಸಜ್ಜಿತ ಯಂತ್ರೋಪಕರಣಗಳಿಂದ ಕೂಡಿದ ವರ್ಕ್‌ಶಾಪ್‌ನ್ನು ಹೊಂದಿದ್ದು, ಹಾಗೆಯೇ ತಾಂತ್ರಿಕತೆಯಲ್ಲಿ ಪರಿಣಿತಿ ಹೊಂದಿರುವ ನೌಕರರು ಇದ್ದು, ಬಸ್‌ನ ಕವಚ ನಿರ್ಮಾಣವೊಂದನ್ನು ಹೊರತುಪಡಿಸಿ, ಉಳಿದೆಲ್ಲಾ ಕೆಲಸಗಳು ಇಲ್ಲಿಯೇ ನಡೆಯುತ್ತದೆ. ಅಲ್ಲದೆ, ಶೃಂಗೇರಿಯಲ್ಲಿ ಇದರ ಒಂದು ವಿಭಾಗ ತೆರೆದಿದ್ದು, ಅಲ್ಲಿ ಬಸ್ಸಿನ ಮೇಲ್ವಿ ತಾಂತ್ರಿಕ ದುರಸ್ಥಿ, ಬಸ್ಸಿನ ತಂಗುವಿಕೆ ಹಾಗೂ ನೌಕರರ ವಿಶ್ರಾಂತಿ ಗೃಹದ ವ್ಯವಸ್ಥೆ ಇದೆ.

ಸಹಕಾರ ರಂಗದ ಸಾರಿಗೆ ಉದ್ಯಮದಲ್ಲಿ ಕರ್ನಾಟಕದಲ್ಲಿಯೇ ಪ್ರಪ್ರಥಮ ಪ್ರಯೋಗವಾದ ಈ ಸಹಕಾರ ಸಾರಿಗೆಯ ಬಗ್ಗೆ ಜಪಾನ್ ದೇಶದ ಸಹಕಾರ ರಂಗದಲ್ಲಿ ಶ್ಲಾಘನೀಯ ಮಾತಾಗಿ ಕಯಾಟೋ ನಗರದ ರಿಟ್ಸುಮೆಕಿನ್ ವಿಶ್ವವಿದ್ಯಾಲಯದ 21 ಜನರ ಅಧ್ಯಯನ ತಂಡವು ದಿನಾಂಕ:13.09.1998ರಂದು ಭೇಟಿ ನೀಡಿ ಹಲವಾರು ವಿಷಯಗಳ ಬಗ್ಗೆ ವಿವರವಾಗಿ ಚರ್ಚಿಸಿ ಸಂಸ್ಥೆಯ ಪ್ರಾರಂಭದಿಂದ ಈ ಅವಧಿಯವರೆಗಿನ ಸಂಘದ ರಚನೆ, ಉದ್ದೇಶ, ಚಟುವಟಿಕೆ ಇನ್ನಿತರೆ ವಿಚಾರಗಳನ್ನು ಮನನ ಮಾಡಿಕೊಂಡು ಪ್ರಗತಿಯ ಪಥದತ್ತ ಯಾವ ರೀತಿ ಹೋಗಬೇಕೆಂದು ಸಲಹೆ ಮಾಡಿದೆ ಹಾಗೂ ಈ ಸಂಘದ ಬಗ್ಗೆ ಮಂಗಳೂರು ವಿಶ್ವವಿದ್ಯಾಲಯದ ಉಪನ್ಯಾಸಕರಾದ ಶ್ರೀ ಪಿ. ಸುರೇಶ ರಮಣ ಮಯ್ಯರವರು ವಿವಿಧ ಕೋನಗಳಲ್ಲಿ ಸುಮಾರು 2 ವರ್ಷಗಳವರೆಗೆ ಅಧ್ಯಯನ ನಡೆಸಿ ಅದರ ಅಧ್ಯಯನವನ್ನು ವಿಶ್ವವಿದ್ಯಾಲಯವು ಅಂಗೀಕರಿಸಿ ಅವರಿಗೆ ಡಾಕ್ಟರೇಟ್ ಪದವಿ ನೀಡಿದ್ದಲ್ಲದೇ, ಈ ಅಧ್ಯಯನದ ವಿಷಯವನ್ನು ಮಣಿಪಾಲದ ಇನ್ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್‌ರವರು

ತಮ್ಮ ಪ್ರಥಮ ದರ್ಜೆ ಮತ್ತು ಸ್ನಾತಕೋತ್ತರ ಪದವಿಯ ವ್ಯಾಸಂಗದಲ್ಲಿ ಪಠ್ಯ ವಿಷಯವಾಗಿ ಅಳವಡಿಸಿಕೊಂಡಿದೆ. ಸಂಘದ ಕಾರ್ಯಚಟುವಟಿಕೆಯನ್ನು ಗಮನಿಸಿದ ಕೆ.ಎಸ್.ಆರ್.ಟಿ.ಸಿ. ಕೇಂದ್ರ ಕಛೇರಿಯು ತನ್ನ ಹೊಸ ನೇಮಕಾತಿಯಾಗಿ ಬಂದ ಅಧಿಕಾರಿಗಳ ಮೂರು ತಂಡಗಳಿಗೆ ಇಲ್ಲಿಯ ಸಂಘಟನೆ, ತಾಂತ್ರಿಕ ನಿರ್ವಹಣೆ, ನೌಕರರ ಸೇವಾ ಸೌಲಭ್ಯ ಇನ್ನಿತರೇ ವಿಷಯಗಳ ಬಗ್ಗೆ ತರಬೇತಿಯನ್ನೂ ಸಹ ನೀಡಿದ್ದು, ಈ ಸಂಘದ ಏಳಿಗೆಯಲ್ಲಿ ಕಾರ್ಮಿಕರ ಪಾತ್ರ ಎಷ್ಟು ಎಂಬುದು ಮನಗಾಣುವಂತಾಗಿದೆ.



ಸಂಘವು ಇಂದು 75 ಬಸ್‌ಗಳನ್ನು ಹೊಂದಿ 300 ಕಾರ್ಮಿಕರಿಗೆ ಉದ್ಯೋಗ ನೀಡಿ, ಗ್ರಾಮೀಣ ಸಾರಿಗೆ ಸೌಕರ್ಯ ಕಲ್ಪನೆಗೆ ಉತ್ತಮ ಒತ್ತು ನೀಡಿ ಪ್ರಾರಂಭದಲ್ಲಿ 4.8 ಲಕ್ಷಗಳ ವ್ಯವಹಾರದಿಂದ ಈಗ ಸುಮಾರು 12 ಕೋಟಿಗಳ ವ್ಯವಹಾರದೆಡೆಗೆ ಮುನ್ನಡೆದಿದೆ. ಇತ್ತೀಚೆಗೆ ನೌಕರರ ಸಾಂಸ್ಕೃತಿಕ ಚಟುವಟಿಕೆಗಳಿಗೆ ಪ್ರೋತ್ಸಾಹ ನೀಡುವ ನಿಟ್ಟಿನಲ್ಲಿ ಬೃಹತ್ ನೌಕರರ ಭವನ ನಿರ್ಮಿಸಲಾಗಿದೆ. ಅಲ್ಲದೇ ವ್ಯವಹಾರ ವಿಸ್ತರಣೆಗಾಗಿ ಹಲವು ಯೋಜನೆಗಳನ್ನು ಹಮ್ಮಿಕೊಂಡಿದ್ದು, ಅದರಂತೆ ಸುಸಜ್ಜಿತ ಗ್ಯಾರೇಜ್ ನಿರ್ಮಾಣ ವ್ಯವಸ್ಥೆಯು ಮುಂದುವರೆದಿದೆ. ಸಂಘದ ಉದ್ದೇಶಿತ ಯೋಜನೆಯಾದ ಮತ್ತು ಸಂಘದ ವಾಹನಗಳಿಗೆ ಅವಶ್ಯವಾಗಿ ಬೇಕಾದ ಇಂಧನ ಪೂರೈಕೆಗಾಗಿ ಕೇಂದ್ರ ಕಛೇರಿಯಲ್ಲಿ ದಿನಾಂಕ:13–02–2004ರಿಂದ ನೂತನ ಡೀಸೆಲ್ ಪಂಪ್ ಕಾರ್ಯಾರಂಭಗೊಂಡಿದೆ.

ಘನ ಸರ್ಕಾರವು ಈ ಸಂಘವನ್ನು ರಾಜ್ಯದ ವಿಶೇಷ ಸಹಕಾರ ಸಂಘವೆಂದು ಪರಿಗಣಿಸಿ ದಿನಾಂಕ:07–02–2008 ರಿಂದ ಈ ಸಂಘಕ್ಕೆ ಸಹಕಾರ ಕಾಯ್ದೆ 29(ಸಿ)(1)(ಇ) ಯಿಂದ ವಿನಾಯಿತಿ ನೀಡಿರುವುದು ಈ ಸಂಘದ ಸರ್ವತೋಮುಖ ಬೆಳವಣಿಗೆಗೆ ಸಹಕಾರಿಯಾಗಿದೆ. ದಿನಾಂಕ:10–02–2008 ರಿಂದ ಸಂಘದ ಎಲ್ಲಾ ಬಸ್ಸುಗಳಲ್ಲಿ ರಾಷ್ಟ್ರಕವಿ ಕುವೆಂಪುರವರ ನುಡಿಮುತ್ತುಗಳನ್ನು ಸ್ಟಿಕರ್ ಮೂಲಕ ಪ್ರಕಟಿಸುವುದರೊಂದಿಗೆ ಸಾರ್ವಜನಿಕರಿಗೆ ಸಾಹಿತ್ಯದ ಬಗ್ಗೆ ಅರಿವು ಮೂಡಿಸುವ ಕೆಲಸವನ್ನೂ ಕೂಡ ಈ ಸಹಕಾರಿಯು ಮಾಡುತ್ತಿದೆ.

ದೇಶದ ಆರ್ಥಿಕ ವ್ಯವಸ್ಥೆಯ ಬೆಳವಣಿಗೆಯಲ್ಲಿ ಸಾರಿಗೆಯ ಪಾತ್ರ ಬಹುಮುಖ್ಯವಾದದ್ದು. ಸಂಪರ್ಕ ಸಾರಿಗೆಯಲ್ಲಿನ ಅನುಕೂಲತೆಗಳಿಂದಾಗಿ ಜನಸಾಮಾನ್ಯರ ಜೀವನ ಮಟ್ಟದಲ್ಲಿ ಬದಲಾವಣೆಯನ್ನು ತರಲು ಹಾಗೂ ಮಾರುಕಟ್ಟೆಯ ವ್ಯವಸ್ಥೆಯನ್ನು ಉತ್ತಮೀಕರಿಸುವುದರ ಜೊತೆಗೆ ಜನಸಾಮಾನ್ಯರ ಬೇಡಿಕೆ ಹಾಗೂ ಪೂರೈಕೆಗಳೊಂದಿಗೆ ಸಮತೋಲನ ಸಾಧಿಸಲು ಸಾಧ್ಯವಾಗುತ್ತಿದೆ. ಮಲೆನಾಡು ಪ್ರದೇಶದಲ್ಲಿನ ಭೌಗೋಳಿಕ ಪರಿಸ್ಥಿತಿ ಹಾಗೂ ರೈಲ್ವೆ ಸಂಪರ್ಕದ ಅಭಾವದ ಹಿನ್ನಲೆಯಲ್ಲಿ ರಸ್ತೆ ಸಾರಿಗೆಯು ಸಂಪರ್ಕ ಕ್ಷೇತ್ರದಲ್ಲಿ ಬಹುಮುಖ್ಯ ಪಾತ್ರವಹಿಸುತ್ತಿದೆ. ಸಹಕಾರ ಸಾರಿಗೆಯು ಈ ಭಾಗದ ಜನರ ಸಾರಿಗೆ ಸಂಪರ್ಕದ ಆಶೋತ್ತರಗಳಿಗೆ ಸ್ಪಂದಿಸುತ್ತ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿರುವುದಲ್ಲದೆ ಸ್ಥಳೀಯರಿಗೆ ಉದ್ಯೋಗಾವಕಾಶವನ್ನು ಒದಗಿಸುವುದರ ಮೂಲಕ ಜನರ ಜೀವನ ಮಟ್ಟದಲ್ಲಿ ಆರ್ಥಿಕ ಸ್ಥಿರತೆಗೂ ತನ್ನ ಕೊಡುಗೆಯನ್ನು ನೀಡುತ್ತಿದೆ. ವಿಶಿಷ್ಠವಾಗಿ ಕಾರ್ಯನಿರ್ವಹಿಸುತ್ತಿರುವ ಸಹಕಾರ ಸಾರಿಗೆಯು ಕರ್ನಾಟಕದ ಸಹಕಾರ ಕ್ಷೇತ್ರದಲ್ಲಿ ವಿಶೇಷ ಸಹಕಾರ ಸಂಸ್ಥೆಯಾಗಿ ಗುರುತಿಸಿಕೊಂಡಿರುವುದರ ಜೊತೆಗೆ ಅಧ್ಯಯನ ಯೋಗ್ಯ ಸಹಕಾರಿಯಾಗಿರುತ್ತದೆ.

ಸಂಪರ್ಕ ವಿವರ: **"ಟ್ರಾನ್ಸ್‌ಪೋರ್ಟ್ ಕೋ–ಆಪರೇಟಿವ್ ಸೊಸೈಟಿ ಲಿಮಿಟೆಡ್"**, ಕೆಸವೆ ರಸ್ತೆ, ಸಹಕಾರ ನಗರ, ಕೊಪ್ಪ – 577 126, ಚಿಕ್ಕಮಗಳೂರು ಜಿಲ್ಲೆ. ದೂರವಾಣಿ: 08265 221956, 221369.



## ಬೆಳ್ತಂಗಡಿ ತಾಲೂಕು ರಬ್ಬರು ಬೆಳೆಗಾರರ ಮಾರಾಟ ಮತ್ತು ಸಂಸ್ಕರಣ ಸಹಕಾರಿ ಸಂಘ (ನಿ), ಉಜಿರೆ

ಇಪ್ಪತ್ತೈದು ವರ್ಷಗಳ ಹಿಂದೆ ರಬ್ಬರ್ ಕೃಷಿ ವಿಸ್ತಾರವಾಗುತ್ತಿದ್ದ ಕಾಲ. ಕೃಷಿ ಮಾಹಿತಿಗಾಗಿ ಕೃಷಿಕರ ಬೇಡಿಕೆ. ಪರಿಸರ ಆರ್ಥಿಕ ಅಭಿವೃದ್ಧಿ, ಉದ್ಯೋಗ ಸೃಷ್ಟಿ ಹಾಗೂ ಬೆಳೆದ ಬೆಳೆಗೆ-ಬೆಲೆ ಇದನ್ನು ಗಮನದಲ್ಲಿಟ್ಟು ಹಿರಿಯರಾದ ಶ್ರೀ ಜಿ.ಎನ್.ಭಿಡೆ ಇವರ ಒತ್ತಾಸೆಯಂತೆ ಸಹಕಾರಿ ಕ್ಷೇತ್ರದಲ್ಲೇ ಕೃಷಿಕರನ್ನು ಸಂಘಟಿಸುವ ಕಾರ್ಯಯೋಜನೆ ರೂಪುಗೊಂಡಿತು. ಅಂದು ಮುಂಡಾಜೆಯಲ್ಲಿ ಕಾರ್ಯಾಚರಿಸುತ್ತಿದ್ದ ಲಯನ್ಸ್ ಕ್ಲಬ್ ಹಾಗೂ ಗುರುವಾಯನಕೆರೆಯ ನಾಗರಿಕ ಸೇವಾ ಟ್ರಸ್ಟ್ ಇವುಗಳ ಸಹಕಾರ ಹಾಗೂ ಪ್ರೋತ್ಸಾಹದೊಂದಿಗೆ ಉಜಿರೆಯ ರಬ್ಬರು ಬೆಳೆಗಾರರ ಮಾರಾಟ ಮತ್ತು ಸಂಸ್ಕರಣ ಸಹಕಾರಿ ಸಂಘ, 1985ರಲ್ಲಿ ಅಸ್ತಿತ್ವಕ್ಕೆ ಬಂತು. ಆಗ ಇಲ್ಲಿಯ ಆಸುಪಾಸಿನ ಕೃಷಿಕರಿಗೆ ರಬ್ಬರಿನ ಬಗೆಗೆ ಹೆಚ್ಚೇನೂ ಮಾಹಿತಿಯಾಗಲೀ ಆಸಕ್ತಿಯಾಗಲೀ ಇರಲಿಲ್ಲ. ಅಡಿಕೆ, ತೆಂಗು, ಗದ್ದೆ ಬೇಸಾಯ, ಕೊಕ್ಕೊ, ಒಳ್ಳೆಮೆಣಸು, ಬಾಳೆ – ಈ ರೀತಿಯ ಸಾಂಪ್ರದಾಯಿಕ ಕೃಷಿಯಲ್ಲಿ ತೊಡಗಿ ಮಧ್ಯಮ ತರಗತಿಯ ಜೀವನ ಸಾಗಿಸುತ್ತಿದ್ದರು. ಅಂತಹ ಸಂಘಟಕರ ಸ್ಫೂರ್ತಿ, ಮಾರ್ಗದರ್ಶನಗಳಿಂದ ಪಾಳು ಬಿದ್ದ ಗುಡ್ಡಗಳಿಗೆ ಜೀವಕಳೆ ಬಂತು. ರಬ್ಬರು ಗಿಡಗಳು ಚಿಗುರಿ ಕೃಷಿಕರಲ್ಲಿದ್ದ ಸಂದೇಹ ಮಾಯವಾಯಿತು. ಅಲ್ಲಿಂದ ಇಲ್ಲಿಯ ತನಕ ನೇತ್ರಾವತಿಯಲ್ಲಿ ಸಾಕಷ್ಟು ನೀರು ಹರಿದಿದೆ. ತಕ್ಕಡಿಯ ಏರಿಳಿತದಂತೆ ಕಷ್ಟಗಳು ಕೃಷಿಕರನ್ನು ಕಂಗೆಡಿಸಿದುವು. ಅಡಿಕೆಯ ಬೆಲೆ ಪಾತಾಳಕ್ಕಿಳಿಯಿತು. ಇಂತಹ ಸಂಕ್ರಮಣ ಕಾಲದಲ್ಲಿ ಅನ್ನದಾತರನ್ನು ಎತ್ತಿ ಹಿಡಿದಿದ್ದು ಪ್ರಾಕೃತಿಕ ರಬ್ಬರು. ಕರ್ನಾಟಕದ ಕೆಲವು ಭಾಗ ಹಾಗೂ ಮಂಗಳೂರು ಜಿಲ್ಲೆಯಾದ್ಯಂತ ಸಾವಿರಾರು ಹೆಕ್ಟೇರು ಜಮೀನಿನಲ್ಲಿ ರಬ್ಬರಿನ ಮರಗಳ ಕೊಡೆಗಳು ಅರಳಿದವು. ಬೆಳೆಗಾರರಲ್ಲಿ ನಿಂತ ಉಸಿರು ಮತ್ತೆ ಚಲನೆಯನ್ನು ಕಂಡಿತು. ಬರಬರುತ್ತ ಕೃಷಿಕರು ಇದರಲ್ಲಿ ಧನ್ಯತೆಯನ್ನು ಕಂಡರು.

1965-66ರಲ್ಲಿ ಕರ್ನಾಟಕದಲ್ಲಿ ರಬ್ಬರ್ ಕೃಷಿಗೆ ಸಂಬಂಧಪಟ್ಟ ಅತ್ಯಂತ ಮಹತ್ವದ ವರ್ಷ. ಅಲ್ಲಿನ ತನಕ ದೊಡ್ಡ ಕೃಷಿಕರು ಈ ಕೃಷಿಯಲ್ಲಿ ತೊಡಗಿಸಿಕೊಂಡಿದ್ದು, ಸದ್ರಿ ಸಾಲಿನಲ್ಲಿ ಸಿಲೋನ್ ನಿರಾಶ್ರಿತರಿಗಾಗಿ ಕರ್ನಾಟಕ ರಾಜ್ಯ ಸರಕಾರ ಪ್ಲಾಂಟೇಶನ್ ಕಾರ್ಪೋರೇಶನ್ ಮೂಲಕ ಸುಳ್ಯ ಪ್ರದೇಶದಲ್ಲಿ

ಸಾವಿರಾರು ಎಕರೆ ರಬ್ಬರ್ ಕೃಷಿ ಪ್ರಾರಂಭಿಸಿ ಸ್ಥಳೀಯರು ಆಸಕ್ತಿಯಿಂದ ಇದನ್ನು ಗಮನಿಸತೊಡಗಿದರು. ಈ ಕೃಷಿಯನ್ನು ಇಲ್ಲಿನ ಸಣ್ಣ ಕೃಷಿಕರಿಗೆ, ರಬ್ಬರು ಮಂಡಳಿ ಮಾರ್ಗದರ್ಶನ ದೊರಕಿದ ಪರಿಣಾಮ ಪುತ್ತೂರಿನ ರಬ್ಬರ್ ಮಂಡಳಿ ಸಬ್ ಆಫೀಸ್ ಮೇಲ್ದರ್ಜೆಗೇರಿ ಮಂಗಳೂರಿನಲ್ಲಿ ಪ್ರಾದೇಶಿಕ ಕಚೇರಿ ಪ್ರಾರಂಭವಾಯಿತು. ದಕ್ಷಿಣ ಕನ್ನಡ ಜಿಲ್ಲೆ ಭೂಭಾಗ, ಹವಾಮಾನ ಈ ಕೃಷಿಗೆ ಯೋಗ್ಯವಾಗಿದ್ದು ಇಲ್ಲಿನ ಪುಂಜ ಸ್ಥಳಗಳಲ್ಲಿ ರಬ್ಬರ್ ಕೃಷಿ ಆವರಿಸಿಕೊಂಡು ಪರಿಸರ ಪೂರಕ ಚಟುವಟಿಕೆ ಎಂದು ಗುರುತಿಸಿ ಪ್ರಶಂಸೆಗೊಳಪಟ್ಟ ಪರಿಣಾಮ, ವೇಗವರ್ಧನೆಗೊಳಪಟ್ಟ ಕೃಷಿ ಸುಮಾರು ಇದೀಗ 35000 ಹೆಕ್ಟೇರ್ ವಿಸ್ತೀರ್ಣದಲ್ಲಿ ಆಗಿ ದೇಶದ ಉತ್ಪಾದನೆಯ 2.5% ಉತ್ಪಾದನೆ ಹಾಗೂ ವಿಸ್ತೀರ್ಣದಲ್ಲಿ 5.8% ನಮ್ಮ ಕರ್ನಾಟಕದಲ್ಲಾಯಿತು. ಕರ್ನಾಟಕ ರಾಜ್ಯದಲ್ಲಿ ಸುಮಾರು 225ರಷ್ಟು ರಬ್ಬರ್ ಆಧಾರಿತ ಕೈಗಾರಿಕೆಗಳಿದ್ದು ಬೇಡಿಕೆ 57000 ಟನ್‌ಗಳಿದ್ದು ಉತ್ಪಾದನೆ ಕೇವಲ 20000 ಟನ್ ಮಾತ್ರ ಇದೆ. ಇದೀಗ ನಮ್ಮ ದೇಶದಲ್ಲಿ ವೈಯಕ್ತಿಕ ರಬ್ಬರ್ ಉಪಯೋಗ 1.20 ಕೆಜಿಯಾಗಿದ್ದು ಇದು ಹೆಚ್ಚಾಗುವುದು ಸ್ವಾಭಾವಿಕ. ನಮ್ಮ ದೇಶದ ರಬ್ಬರ್ ಉತ್ಪಾದನೆ 71.8% ಶೀಟ್ ರೂಪದಲ್ಲಿ ಬಳಕೆ ಆಗುತ್ತಿದೆ. 58% ಉತ್ಪಾದನೆ ಮುಖ್ಯವಾಗಿ ವಾಹನಗಳ ಟಯರ್, ಟ್ಯೂಬ್ ತಯಾರಿಕೆಯಲ್ಲಿ ಉಪಯೋಗವಾಗುತ್ತಿದೆ. ವಾರ್ಷಿಕ 850 ಲಕ್ಷ ಟಯರ್ ಉತ್ಪಾದನೆ ಪ್ರಕೃತ ಇದ್ದು, ಇದು ಮುಂದಿನ ದಿನಗಳಲ್ಲಿ ಹೆಚ್ಚುವುದು ಸತ್ಯ. ಜಾಗತಿಕ ನೆಲೆಯಲ್ಲಿ 2008ರಲ್ಲಿ ಉತ್ಪಾದನೆ 22.8 ಮಿಲಿಯ ಟನ್ ಇದ್ದು 2009ರಲ್ಲಿ ಉತ್ಪಾದನೆ 21.8 ಮಿಲಿಯ ಟನ್ ಆಗಿ 4.6% ಇಳಿಮುಖವಾಗಿದೆ. ಈ ಅವಧಿಯಲ್ಲಿ ಬೇಡಿಕೆಯಲ್ಲಿ 11.20% ಹೆಚ್ಚಳವಾಗಿದ್ದು ಬೆಲೆ ಏರಲು ಇದೂ ಒಂದು ಕಾರಣ. ನಮ್ಮ ದೇಶದಲ್ಲೂ ಸದ್ರಿ ಸಾಲಿನಲ್ಲಿ 4% ಉತ್ಪಾದನೆ ಕಮ್ಮಿ ಆಗಿದ್ದು ಬೇಡಿಕೆ 6.8% ಹೆಚ್ಚಾಗಿದೆ.

ಇದನ್ನು ಗಮನಿಸಿದಾಗ ರಬ್ಬರ್ ಬೆಳೆಯಬಹುದಾದಲ್ಲಿ ಎಲ್ಲಾ ರಬ್ಬರ್ ಕೃಷಿ ಮಾಡಿದರೂ ಬೇಡಿಕೆ ಪೂರೈಸುವುದು ಕಷ್ಟವಾಗಬಹುದು. ಇದನ್ನು ದೃಷ್ಟಿಯಲ್ಲಿಟ್ಟು ರಬ್ಬರು ಮಂಡಳಿ ರಬ್ಬರು ಕೃಷಿ ವಿಸ್ತರಣೆ, ಅಧಿಕ ಉತ್ಪಾದನೆ ಹಾಗೂ ಉತ್ತಮ ಗುಣಮಟ್ಟ ರಬ್ಬರ್ ಉತ್ಪಾದಿಸುವಂತೆ ಪ್ರಾಮಾಣಿಕವಾಗಿ ಅವಿರತ ಕಾರ್ಯನಿರ್ವಹಿಸುತ್ತಿದ್ದು, ಇದೀಗ ಕರ್ನಾಟಕದಲ್ಲಿ ದ.ಕ., ಉಡುಪಿ, ಶಿವಮೊಗ್ಗ, ಉತ್ತರಕನ್ನಡ, ಚಿಕ್ಕಮಗಳೂರು ಹಾಗೂ ಕೊಡಗು ಪ್ರದೇಶದಲ್ಲಿ ರಬ್ಬರು ಬೆಳೆಸಲು ಪ್ರೋತ್ಸಾಹಿಸುತ್ತಿದೆ. ಈ ಪ್ರದೇಶದಲ್ಲಿ ರಬ್ಬರ್ ಕೃಷಿ ಮಾಡಲು ಯೋಗ್ಯವಾದ 2 ಲಕ್ಷ ಹೆಕ್ಟೇರ್ ಪ್ರದೇಶ ಇನ್ನೂ ಲಭ್ಯ ಇರುತ್ತದೆ. ಈ ಎಲ್ಲ ಹಿನ್ನಲೆಯಲ್ಲಿ ರಬ್ಬರ್ ಬೆಳೆಗೆ ಮಾರುಕಟ್ಟೆ ಸೃಷ್ಟಿಸಿ ಕಾರ್ಯನಿರ್ವಹಿಸುತ್ತಿರುವ ಈ ಸಂಘದ ಸಾಧನೆ ಗಮನಾರ್ಹವಾದದ್ದು. ಅಂದಿನ ಆಡಳಿತ ಮಂಡಳಿ ಸದಸ್ಯರ ಪ್ರಾಮಾಣಿಕ ಸೇವೆ ಇಂದಿನ ಸಾಧನೆ ಹಾಗೂ ಯಶಸ್ಸಿಗೆ ಕಾರಣ. ರಾಜಕಾರಣಿಗಳು, ಸಹಕಾರಿ ನೇತಾರರು, ಸರಕಾರಿ ಅಧಿಕಾರಿಗಳು, ರಬ್ಬರು ಮಂಡಳಿ ಅಧಿಕಾರಿಗಳು, ಭಿಡೆಯವರು 75ರ ಇಳಿ ವಯಸ್ಸಿನಲ್ಲೂ ಕಾಣುತ್ತಿದ್ದ ಕನಸನ್ನು ಸಾಕಾರಗೊಳಿಸಲು ಪ್ರೋತ್ಸಾಹಿಸಿದರು. ಕಳೆದ 25 ವರ್ಷಗಳಲ್ಲಿ ಹಿನ್ನಡೆ ಕಾಣದ ಈ ಸಂಘ ರಾಜ್ಯದಲ್ಲೇ ಪ್ರಥಮ ರಬ್ಬರು ಬೆಳೆಗಾರರ ಸಹಕಾರಿ ಸಂಘವಾಗಿ ಹಲವು ಪ್ರಥಮಗಳನ್ನು ದಾಖಲಿಸುತ್ತಾ 25ನೇ ವರ್ಷ 25% ಪಾಲು ಮುನಾಫೆಯೊಂದಿಗೆ ದೇಶದ 1% ಉತ್ಪಾದನೆಯ ಖರೀದಿಯನ್ನೂ ಸಾಧಿಸಿತು. (ಇದು ರಾಜ್ಯದ 70%). ಈ ವರ್ಷ 150 ಕೋಟಿ ಮೌಲ್ಯದ ರಬ್ಬರ್ ಖರೀದಿಯ ಗುರಿ ಇರಿಸಿದ ಸಂಘ, ರಾಜ್ಯದ ಸಹಕಾರಿ ಸಂಸ್ಥೆಗಳು ಖರೀದಿಸಿದ ರಬ್ಬರ್ ಮಾರಾಟದಲ್ಲಿ ಸಹಕಾರ ನೀಡಿದೆ. ವಿವಿಧೆಡೆ ಖರೀದಿ ಕೇಂದ್ರಗಳು ಕಾರ್ಯನಿರ್ವಹಿಸುತ್ತಿದ್ದು, ಕೃಷಿಕರಲ್ಲಿ ಭರವಸೆ ಮೂಡಿಸುವಲ್ಲಿ ಯಶಸ್ಸು ಕಂಡಿದೆ. ರಾಜ್ಯದ ರಬ್ಬರು ಕೃಷಿಕರನ್ನು ಹಲವು ಬಾರಿ ಸಂಘಟಿಸಿ ರಾಜ್ಯ ಮಟ್ಟದ ಸಮ್ಮೇಳನಗಳನ್ನು ಏರ್ಪಡಿಸಿದೆ.



ನಡೆದು ಬಂದ ದಾರಿ : ದಿನಾಂಕ 06.09.1984 ಈ ಸಂಘದ ಅತೀ ಪ್ರಮುಖ ದಿನ. ಈ ದಿನದಂದು ಮುಂಡಾಜೆ ಲಯನ್ಸ್ ಭವನದಲ್ಲಿ ಪ್ರವರ್ತಕರ ಮಂಡಳಿ ರಚನೆಯೊಂದಿಗೆ ಸಂಘ ಪ್ರಾರಂಭಿಸಲು ಚಾಲನೆ ನೀಡಲಾಯಿತು. ವಿವಿಧ ಸಂಘ ಸಂಸ್ಥೆಗಳ ಸಹಕಾರದೊಂದಿಗೆ 25.01.1985ರಂದು ಸಂಘವು ನೋಂದಾವಣೆಗೊಂಡು ದಿನಾಂಕ 26.01.1985ರಂದು ಪ್ರಥಮ ಮಹಾಸಭೆ ಜರುಗಿತು. ದಿನಾಂಕ 31.01.1985ರಂದು ಪ್ರಥಮ ಆಡಳಿತ ಮಂಡಳಿ ಸಭೆ ಜರುಗಿ ಸ್ಥಾಪಕಾಧ್ಯಕ್ಷರಾಗಿ ಶ್ರೀ ಜಿ.ಎನ್.ಭಿಡೆಯವರು ಆಯ್ಕೆಯಾದರು. ಸಂಘವು ಸ್ವಂತ ಕಟ್ಟಡ ಹೊಂದುವವರೆಗೆ ಶ್ರೀ ಸಂಜೀವರಾವ್ ಪಡುವೆಟ್ನಾಯರು ಸಂಘದ ಕಾರ್ಯಾಲಯಕ್ಕೆ ಬಾಡಿಗೆ ರಹಿತವಾಗಿ ಕಟ್ಟಡ ಒದಗಿಸಿಕೊಟ್ಟರು. 1985ರಲ್ಲಿಯೇ ಸಂಘವು ಕೃಷಿಕರಿಗೆ ರಸಗೊಬ್ಬರ, ಕೃಷಿ ಸಲಕರಣೆ ಮಾರಾಟ ವ್ಯವಹಾರ ಪ್ರಾರಂಭ ಮಾಡಿದರೆ 1986ರಲ್ಲಿ ರಬ್ಬರು ವ್ಯವಹಾರ ಪ್ರಾರಂಭಿಸಲಾಯಿತು. 1988ರಲ್ಲಿ ಬೇಡಿಕೆ ಮೇರೆಗೆ ರಬ್ಬರು ಗಿಡ ಒದಗಿಸುವ ವ್ಯವಹಾರ ಪ್ರಾರಂಭಿಸಲಾಯಿತು. 1988ರಲ್ಲಿ ಸಂಘಕ್ಕೆ ಸ್ವಂತ ಕಚೇರಿ ರಚಿಸುವುದರೊಂದಿಗೆ ಬೆಳ್ತಂಗಡಿ ತಾಲೂಕಿನಲ್ಲಿ 4 ರಬ್ಬರು ಖರೀದಿ ಕೇಂದ್ರಗಳನ್ನು ಪ್ರಾರಂಭಿಸಲಾಯಿತು. ರಬ್ಬರುಹಾಲು ಸಂಗ್ರಹ ಪ್ರಾರಂಭಿಸಲಾಯಿತಾದರೂ ಹಲವು ತೊಂದರೆಗಳಿಂದಾಗಿ ಈ ವ್ಯವಹಾರವನ್ನು ನಿಲ್ಲಿಸಲಾಯಿತು. ಈ ಅವಧಿಯಲ್ಲಿ 2 ಬಾರಿ ರಬ್ಬರು ಬೆಳೆಗಾರರ ಸಮ್ಮೇಳನ ನಡೆಸುವ ಮೂಲಕ ಬೆಳೆಗಾರರ ಸಂಘಟನೆಯನ್ನು ಬಲಪಡಿಸಲಾಯಿತು. 1995ರಲ್ಲಿ ಸಂಘದ ಸಂಸ್ಕರಣ ಘಟಕದ ರಚನೆ ಬಗ್ಗೆ ಯೋಜನೆ ಹಾಕಿಕೊಂಡು ಬೆಳ್ತಂಗಡಿಯ ಲಾಯಿಲದಲ್ಲಿ ನಿವೇಶನ ಖರೀದಿಸಿ ಈ ಬಗ್ಗೆ ಓಅಆಅ ಯಿಂದ ಸಾಲ ಮಂಜೂರಾತಿ ಪಡೆದುಕೊಳ್ಳಲಾಯಿತು.

ಗ್ರಾಮೀಣ ಪ್ರದೇಶದಲ್ಲಿ ಮಾದರಿಯಾಗಿ ರಾಷ್ಟ್ರದ ರಬ್ಬರು ಸಹಕಾರಿ ಸಂಘಗಳಲ್ಲೇ ಮೊತ್ತ ಮೊದಲ ಮೌಲ್ಡೆಡ್ ವಸ್ತುಗಳ ತಯಾರಿಕಾ ಘಟಕ ಸ್ಥಾಪನೆಯಾಗಿ ದಿನಾಂಕ 16.01.1998ರಂದು ಪೂಜ್ಯ ಶ್ರೀ ಡಿ.ವೀರೇಂದ್ರ ಹೆಗ್ಗಡೆಯವರಿಂದ ಉದ್ಘಾಟನೆಗೊಂಡು ಅದೇ ದಿನ ಕರ್ನಾಟಕ ರಾಜ್ಯ ರಬ್ಬರು ಬೆಳೆಗಾರರ ಸಮ್ಮೇಳನವನ್ನು ಆಯೋಜಿಸಲಾಯಿತು. 1998-1999ರಲ್ಲಿ ರಬ್ಬರಿಗೆ ಕೊರಿನೊಸ್ಪೊರಾ ರೋಗ ತಾಲೂಕಿನಾದ್ಯಂತ ಹಬ್ಬಿದಾಗ ರಬ್ಬರು ಮಂಡಳಿಯ ಸಹಕಾರದಿಂದ 970 ಹೆಕ್ಟೇರ್‌ಗೆ ಮದ್ದು ಸಿಂಪಡಣೆಯನ್ನು ಮಾಡಲಾಯಿತು. 2000-2001 ರಲ್ಲಿ ಬೆಳೆಗಾರರಿಂದ ಅತ್ಯುತ್ತಮ ದರ್ಜೆಯ ರಬ್ಬರಾದ ಖಖಖ ಖಫ ದರ್ಜೆಯ ರಬ್ಬರ್ ಖರೀದಿ ಪ್ರಾರಂಭಿಸುವ ಮೂಲಕ ಎಲ್ಲಾ ದರ್ಜೆಯ ರಬ್ಬರ್ ಖರೀದಿಸುತ್ತಿರುವ ಏಕಮಾತ್ರ ಸಂಘವೆಂಬ ಹೆಗ್ಗಳಿಕೆಗೆ ಪಾತ್ರವಾಯಿತು. ರಬ್ಬರು ಗುಣಮಟ್ಟ ಉತ್ತಮಪಡಿಸುವ ನಿಟ್ಟಿನಲ್ಲಿ ತಾಲೂಕಿನಾದ್ಯಂತ ವಿವಿಧ ಕಡೆಗಳಲ್ಲಿ ಬೆಳೆಗಾರರ ತೋಟದಲ್ಲಿಯೇ ಪ್ರಾತ್ಯಕ್ಷಿಕೆಯನ್ನು ಏರ್ಪಡಿಸಲಾಗಿತ್ತು. ರಬ್ಬರು ಮಂಡಳಿಯಿಂದ ರಬ್ಬರಿಗೆ ಕನಿಷ್ಠ ಖರೀದಿ ದರ ಪ್ರಕಟವಾದಾಗ ಖರೀದಿಗೆ ಯಾರೂ ತಯಾರಿಲ್ಲದ ಸಂದರ್ಭದಲ್ಲಿ 54 ದಿನ ರಬ್ಬರ್ ಮಂಡಳಿ ನಿಗದಿ ಪಡಿಸಿದ ಕನಿಷ್ಟ ದರದಲ್ಲಿ ರಬ್ಬರು ಖರೀದಿಸಿ ವ್ಯವಹಾರ ನಡೆಸಿದ ಏಕಮಾತ್ರ ಸಹಕಾರಿ ಸಂಘವೆಂಬ ಶ್ಲಾಘನೆಗೆ ಪಾತ್ರವಾಯಿತು. ಈ ಎಲ್ಲಾ ಮುಖ್ಯ ಸಾಧನೆಗಳೊಂದಿಗೆ ಇದೀಗ ಸಂಘವು ವಿವಿಧ ಸಂಸ್ಥೆಗಳ ಸಹಕಾರದೊಂದಿಗೆ ಒಟ್ಟು 18 ಖರೀದಿ ಕೇಂದ್ರಗಳನ್ನು ಹೊಂದಿದ್ದು ಯಶಸ್ವಿಯಾಗಿ ಕಾರ್ಯಾಚರಿಸುತ್ತಿವೆ.

ಸಂಘದ ವಿಶೇಷತೆಗಳು:

- ಕರ್ನಾಟಕದ ಪ್ರಪ್ರಥಮ ರಬ್ಬರ್ ಬೆಳೆಗಾರರ ಮಾರಾಟ ಮತ್ತು ಸಂಸ್ಕರಣ ಸಹಕಾರಿ ಸಂಘ.
- ಕರ್ನಾಟಕದಲ್ಲಿ ಅತೀ ಹೆಚ್ಚಿನ ದರದಲ್ಲಿ ಎಲ್ಲಾ ದರ್ಜೆಯ ರಬ್ಬರು, ಸ್ಕ್ರಾಪ್ ರಬ್ಬರು ಖರೀದಿಸುತ್ತಿರುವ ಏಕಮಾತ್ರ ಸಂಸ್ಥೆ.
- ರಬ್ಬರ್ ಸಂಬಂಧಿ ಎಲ್ಲಾ ರಾಸಾಯನಿಕ, ರಸಗೊಬ್ಬರ, ಕೃಷಿ ಸಲಕರಣೆ ಮಾರಾಟ ಮಾಡುತ್ತಿರುವ ಏಕಮಾತ್ರ ಸಂಸ್ಥೆ.
- ಸದಸ್ಯರ ಉತ್ಪನ್ನಗಳನ್ನು ಕಾಪಿಡಲು ದಾಸ್ತಾನು ಸೌಲಭ್ಯ ಒದಗಿಸುತ್ತಿರುವ ಏಕಮಾತ್ರ ಸಹಕಾರಿ ಸಂಘ.
- ಸದಸ್ಯರಿಗೆ ರಿಯಾಯಿತಿ ದರದಲ್ಲಿ ಕೃಷಿ ಸಂಬಂಧಿ ವಸ್ತುಗಳನ್ನು ಒದಗಿಸುತ್ತಿರುವ ಏಕಮಾತ್ರ ಸಹಕಾರಿ ಸಂಘ.
- ಜಿಲ್ಲೆಯ ಎಲ್ಲಾ ಸಹಕಾರಿ ಸಂಘಗಳೊಂದಿಗೆ ರಬ್ಬರು ಮಾರಾಟದಲ್ಲಿ ಸಹಕಾರ ನೀಡುತ್ತಿರುವ ಏಕಮಾತ್ರ ಸಹಕಾರಿ ಸಂಘ.
- ರಬ್ಬರು ಮೌಲ್ಡೆಡ್ ವಸ್ತುಗಳ ತಯಾರಿಕಾ ಘಟಕವನ್ನು ಹೊಂದಿರುವ ಏಕೈಕ ಸಹಕಾರಿ ಸಂಘ.
- 800 ಟನ್ ರಬ್ಬರು ದಾಸ್ತಾನು ಮಾಡುವ ಅವಕಾಶವಿರುವ ಗೋದಾಮು ಸೌಲಭ್ಯ.
- ಸಂಘದ ಸ್ವಂತ ಜಾಗದಲ್ಲಿ ಸುಸಜ್ಜಿತ ರಬ್ಬರು ನರ್ಸರಿಯನ್ನು ಸ್ಥಾಪಿಸಲಾಗಿದೆ.
- ಮಾಸ್ ಲಿಮಿಟೆಡ್ ಮಂಗಳೂರು, ಇದರ ಸಹಯೋಗದಿಂದ ಅಡಿಕೆ ಖರೀದಿ ಕೇಂದ್ರವನ್ನು ಪ್ರಾರಂಭಿಸಲಾಗಿದೆ.
- ರಬ್ಬರು ಉತ್ಪಾದಕರ ಸಂಘಗಳಿಗೆ ಏಜೆನ್ಸಿ ನೀಡಿ ರಬ್ಬರು ಖರೀದಿ ಮಾಡುವಂತೆ ಉತ್ತೇಜನ ಹಾಗೂ ಸಹಕಾರ ನೀಡುತ್ತಿದೆ.

ಯೋಜನೆಗಳು: ಸಂಘವು ನಡೆಸುತ್ತಿರುವ ಎಲ್ಲಾ ಖರೀದಿ ಕೇಂದ್ರಗಳನ್ನು ಕಂಪ್ಯೂಟರೀಕರಣಗೊಳಿಸಿ ಆನ್‌ಲೈನ್ ಮಾಡುವುದು, ಸಂಘದ ವ್ಯವಹಾರ ವಿಸ್ತರಿಸುವ ನಿಟ್ಟಿನಲ್ಲಿ ತಾಲೂಕಿನ ಒಳಗೆ ಹಾಗೂ ಹೊರಗಡೆ ಅಗತ್ಯವಿದ್ದಲ್ಲಿ ಸೇವಾ ಕೇಂದ್ರ ತೆರೆಯುವುದು, ಈ ತಾಲೂಕಿನ ಎಲ್ಲಾ ರಬ್ಬರು ಕೃಷಿಕರನ್ನು ಸಂಘದ ಸದಸ್ಯತ್ವಕ್ಕೆ ಮನವೊಲಿಸಿ ಸೇರಿಸುವುದರ ಮೂಲಕ ರಬ್ಬರು ಬೆಳೆಗಾರರ ಸಂಘಟನೆಯನ್ನು ಬಲಪಡಿಸುವುದು, ಸುಧಾರಿತ ಕೃಷಿ ಕ್ರಮವನ್ನು ರೈತರಿಗೆ ತಲುಪಿಸುವ ನಿಟ್ಟಿನಲ್ಲಿ ತಜ್ಞರಿಂದ ರೈತರ ತೋಟದಲ್ಲಿಯೇ ಪ್ರಾತ್ಯಕ್ಷಿತೆಯನ್ನು ಏರ್ಪಡಿಸುವುದು, ಸಂಘವು ನಿರಂತರವಾಗಿ ಸಂಘಕ್ಕೆ ರಬ್ಬರು ಒದಗಿಸುವ ಸದಸ್ಯರಿಗೆ ರಿಯಾಯಿತಿ ದರದಲ್ಲಿ ರಬ್ಬರು ಕೃಷಿ ಉಪಯುಕ್ತ ವಸ್ತುಗಳನ್ನು ಮುಂದೆಯೂ ಒದಗಿಸುವುದು, ಸ್ಥಳೀಯವಾಗಿ ರಬ್ಬರ್ ಆಧಾರಿತ ಕೈಗಾರಿಕೆಗಳಿಗೆ ಪ್ರೋತ್ಸಾಹ ನೀಡುವುದು, ಮುಂದಿನ ದಿನಗಳಲ್ಲಿ ಸಂಘವೇ ಸುಸಜ್ಜಿತ ಕ್ರಂಬ್ ರಬ್ಬರ್ ಫ್ಯಾಕ್ಟರಿ ಸ್ಥಾಪಿಸುವುದು, ಬೆಳೆಗಾರರ ಅನುಕೂಲಕ್ಕೋಸ್ಕರ 3000 ಟನ್ ಸಾಮರ್ಥ್ಯದ ಗೋದಾಮು ಹಾಗೂ ವೇಬ್ರಿಡ್ಜ್ ಸಂಘದ ಸಂಸ್ಕರಣ ಘಟಕದ ಆವರಣದಲ್ಲಿ ನಿರ್ಮಿಸುವುದು ಸೇರಿದಂತೆ ಅನೇಕ ಯೋಜನೆಗಳನ್ನು ಸಾಕಾರಗೊಳಿಸುವಲ್ಲಿ ಈ ಸಂಘವು ಶ್ರಮಿಸುತ್ತಿದೆ.

ಸಂಘವು 2009–10ನೇ ಸಾಲಿನಲ್ಲಿ ಸುಮಾರು 9000 ಟನ್‌ಗಿಂತಲೂ ಮೇಲ್ಪಟ್ಟು ರಬ್ಬರು ಖರೀದಿ ಮಾಡುವ ಮೂಲಕ ವಿಶೇಷ ಸಾಧನೆ ಮಾಡಿದೆ. ಸಂಘವು ಅಪೋಲೋ, ಫಾಲ್ಕನ್ ಮುಂತಾದ ಅತೀ ದೊಡ್ಡ ಟಯರ್ ಕಂಪನಿಗಳೊಂದಿಗೆ ನಿರಂತರ ವ್ಯವಹಾರ ನಡೆಸುತ್ತಿದ್ದು ಯಾವುದೇ ಪ್ರಮಾಣದಲ್ಲಿ ರಬ್ಬರ್ ಖರೀದಿಯಾದರೂ ಮಾರಾಟಕ್ಕೆ ಸದಾ ಸಜ್ಜಾಗಿರುತ್ತದೆ. ರಾಷ್ಟ್ರದ ವಿವಿಧ ಸುಮಾರು 200ಕ್ಕೂ ಮೇಲ್ಪಟ್ಟು ಕಾರ್ಖಾನೆಗಳೊಂದಿಗೆ ನೇರ ವ್ಯವಹಾರ ಮಾಡುತ್ತಾ, ಬೆಳೆಗಾರರಿಗೆ ಅತ್ಯಧಿಕ ಲಭ್ಯ ಧಾರಣೆ ನೀಡುವರೇ ಕಾರ್ಯಕ್ರಮ ಹಾಕಿಕೊಳ್ಳಲಾಗಿದೆ. ಅದೇ ರೀತಿ ರಸಗೊಬ್ಬರ ಮಾರಾಟದ ಬಗ್ಗೆಯೂ ಫ್ಯಾಕ್ಟ್, ಎಂ.ಸಿ.ಎಫ್, ಐ.ಪಿ.ಎಲ್ ಯೂನಿಫಾಸ್, ಇತ್ಯಾದಿ ರಸಗೊಬ್ಬರ ಉತ್ಪಾದಕರ ಅಧಿಕೃತ ಮಾರಾಟಗಾರರಾಗಿ ವ್ಯವಹರಿಸಲಾಗುತ್ತಿದೆ. ರೈತರಿಗೆ ಬೇಕಾದ ಎಲ್ಲಾ ಸೇವೆಗಳು ಒಂದೇ ಸೂರಿನಡಿ ದೊರಕುವಂತೆ ಮಾಡಿ ರೈತರ ಸಂಕಷ್ಟಗಳಿಗೆ ಸದಾ ಸ್ಪಂದಿಸುವ ವ್ಯವಸ್ಥೆಯಿದ್ದು ಇದು ಮಾದರಿ ವ್ಯವಸ್ಥೆಯಾಗಿ ಮುಂದುವರಿಯುತ್ತಿದೆ.

ಈ ಸಂಘವು 25 ವರ್ಷಗಳ ಸಾರ್ಥಕ ಸೇವೆಯನ್ನು ಸಲ್ಲಿಸಿ ರಜತ ಮಹೋತ್ಸವ ಆಚರಿಸುತ್ತಿದ್ದು ಸಾಧಿಸಿರುವುದು ಅಲ್ಪ, ಸಾಧಿಸಲಿರುವುದು ಇನ್ನೂ ಅಗಾಧ ಎನ್ನುವ ಭಾವನೆ ಸಂಘದ್ದು. ಕರ್ನಾಟಕ ಸಹಕಾರಿ ರಂಗದಲ್ಲಿ ಅದರಲ್ಲೂ ಮುಖ್ಯವಾಗಿ ಅವಿಭಜಿತ ದ.ಕ. ಜಿಲ್ಲೆಯ ಸಹಕಾರಿ ಚರಿತ್ರೆಯಲ್ಲಿ ನಮ್ಮ ರಬ್ಬರು ಮಾರಾಟ ಮತ್ತು ಸಂಸ್ಕರಣ ಸಹಕಾರಿ ಸಂಘವು ಹಲವು ಪ್ರಥಮಗಳನ್ನು ಸಾಧಿಸಿ ವಿಶಿಷ್ಟ ಸಾಧನೆ ಮೆರೆದಿದೆ. ಮುಖ್ಯವಾಗಿ ರಬ್ಬರು ಕೃಷಿ ವಿಸ್ತರಣೆಯಲ್ಲಿ ವಿಶೇಷ ಕೊಡುಗೆ ನೀಡುವ ಮೂಲಕ ಈ ಪ್ರದೇಶದ ಕೃಷಿಕರು ಇತರ ಕೃಷಿ ಉತ್ಪನ್ನಗಳ ಧಾರಣೆ ಕುಸಿತದಿಂದ ಕಂಗೆಟ್ಟಿರುವ ಇಂದಿನ ಸಂಕಷ್ಟ ಕಾಲದಲ್ಲಿ ಕೃಷಿಕರ ಆರ್ಥಿಕತೆಯ ಮೇಲೆ ಧನಾತ್ಮಕ ಪರಿಣಾಮ ಬೀರಿದೆ. ಸಂಘ ಪ್ರಾರಂಭವಾದಾಗ ನಮ್ಮ ತಾಲೂಕಿನಲ್ಲಿ ಸುಮಾರು 500 ಹೆಕ್ಟೇರ್‌ಗಿಂತ ಕಡಿಮೆ ಇದ್ದ ರಬ್ಬರು ಕೃಷಿ ಇಂದು ಸುಮಾರು 5000 ಹೆಕ್ಟೇರ್ ದಾಟಿದೆ. ಅಂತೆಯೇ ಸುಮಾರು 5000 ಹೆಕ್ಟೇರ್‌ನಷ್ಟಿದ್ದ ಕರ್ನಾಟಕ ರಾಜ್ಯದ ರಬ್ಬರು ಕೃಷಿ 35000 ಹೆಕ್ಟೇರ್ ದಾಟಿದೆ. ಈ ಎಲ್ಲಾ ಬದಲಾವಣೆಯು ಈ ಪ್ರದೇಶದಲ್ಲಿ ಸಾಮಾಜಿ, ಆರ್ಥಿಕ ಕ್ರಾಂತಿಯನ್ನು ಸಾಧಿಸುವ ಮೂಲಕ ರೈತರ ಜೀವನ ಮಟ್ಟ ಸುಧಾರಿಸಿದ್ದು ಇದರಲ್ಲಿ ಈ ಸಂಘದ ಪಾಲು ಕೂಡಾ ಇದೆ ಈ ರೀತಿಯ ಸಾಮಾಜಿಕ ಬದಲಾವಣೆಗೆ ಕಾರಣವಾದ ಈ ಸಂಘದ ಬೆಳವಣಿಗೆಯ ಕುರಿತ ಒಂದು ಪಕ್ಷಿನೋಟ ಇಲ್ಲಿದೆ.

ಸಂಪರ್ಕ ವಿವರ: ಬೆಳ್ತಂಗಡಿ ತಾಲೂಕು ರಬ್ಬರು ಬೆಳೆಗಾರರ ಮಾರಾಟ ಮತ್ತು ಸಂಸ್ಕರಣ ಸಹಕಾರಿ ಸಂಘ (ನಿ), ಉಜಿರೆ, ಬೆಳ್ತಂಗಡಿ – 574 240, ದಕ್ಷಿಣ ಕನ್ನಡ ಜಿಲ್ಲೆ, ದೂರವಾಣಿ: 08256 232783.



## ಕೊಡಗಿನ ಸಹಕಾರ ದವಸ ಭಂಡಾರಗಳು

ಸಂಪ್ರದಾಯುಕ ಪದ್ಧತಿಯಿಂದ ಆಧುನಿಕ ಆಡಳಿತ ಪದ್ಧತಿಯನ್ನು ಅನುಸರಿಸಿ ಚೈತನ್ಯದಾಯಕವಾಗುತ್ತಿರುವ ವಿವಿಧೋದ್ದೇಶಗಳ ಸಹಕಾರ ದವಸ ಭಂಡಾರಗಳು ಕರ್ನಾಟಕದ ಕೊಡಗು ಜಿಲ್ಲೆಯ ವಿಶೇಷ. ಈ ಮಾದರಿಯ ಸಹಕಾರ ಸಂಸ್ಥೆಗಳು ದೇಶದ ಯಾವ ಭಾಗದಲ್ಲೂ ರಚನೆಗೊಂಡಿರುವುದಿಲ್ಲ. ಇವುಗಳು ಅತ್ಯಂತ ಯಶಸ್ವಿಯಾಗಿ ಕಾರ್ಯನಿರ್ವಹಿಸಿ ಹೊಸ ಆರ್ಥಿಕ ಪದ್ಧತಿಯ ಹೊಡೆತದಿಂದ ಹಾಗೂ ಸಹಕಾರ ಸಂಸ್ಥೆಗಳು ಉತ್ತಮ ಆರ್ಥಿಕ ಸಂಘಟನೆಗಳಾಗಿ ಸದಸ್ಯರ ಸರ್ವತೋಮುಖ ಅಭಿವೃದ್ಧಿಯನ್ನು ಗಮನದಲ್ಲಿಡ್ಡು ಕಾರ್ಯನಿರ್ವಹಿಸಲು ಪ್ರಾರಂಭಿಸಿರುವುದರಿಂದ ಪ್ರಸ್ತುತ ಈ ಸಹಕಾರಿ ಸಂಸ್ಥೆಗಳ ಕಾರ್ಯ ಕುಂಠಿತಗೊಂಡಿವೆ. ಈ ಬಗ್ಗೆ ಒಂದು ಕಿರು ಪರಿಚಯ ಇಲ್ಲಿದೆ.

ಭಾರತ ದೇಶದಲ್ಲಿ 1904ರ ಮಾರ್ಚ್ 25ರಂದು ಪ್ರಪ್ರಥಮ ಸಹಕಾರ ಕಾನೂನು ಜಾರಿಗೆ ಬಂತು. ಭಾರತದ ಪ್ರಪ್ರಥಮ ಕೃಷಿ ಪತ್ತಿನ ಸಹಕಾರ ಸಂಘವನ್ನು ಅಂದಿನ ಗದುಗಿನ ಕಣಗಿನಹಾಳದಲ್ಲಿ ಪ್ರಾರಂಭಿಸಲಾಯಿತು. ಕೇವಲ 14 ದಿನಗಳ ಅಂತರದಲ್ಲಿ ಕೊಡಗಿನ ಸೋಮವಾರಪೇಟೆ ತಾಲೂಕಿನ ತಳ್ತಾರೆ ಶೆಟ್ಟಳ್ಳಿ ಎಂಬಲ್ಲಿಯೂ ಒಂದು ಕೃಷಿ ಪತ್ತಿನ ಸಹಕಾರ ಸಂಘವನ್ನು ಪ್ರಾರಂಭಿಸಲಾಯಿತು. ಕರ್ನಾಟಕ ರಾಜ್ಯದಲ್ಲಿ ಕೊಡಗು ಜಿಲ್ಲೆ ಅತ್ಯಂತ ಪುಟ್ಟ ಜಿಲ್ಲೆಯಾಗಿದ್ದು ಪ್ರಕೃತಿಕವಾಗಿ ಸಂಪದ್ಭರಿತವಾದ ಹಾಗೂ ಪ್ರವಾಸಿಗರ ತಾಣವಾದ ಈ ಜಿಲ್ಲೆಯಲ್ಲಿ ಪ್ರಪ್ರಥಮವಾಗಿ 1918ರಲ್ಲಿ ಭಾಗಮಂಡಲದಲ್ಲಿ "ಭಾಗಮಂಡಲ ಸಹಕಾರ ದವಸ ಭಂಡಾರವು ಪ್ರಾರಂಭವಾಯಿತು. 1920ರಲ್ಲಿ ನಂ.90ನೇ ನಾಪೋಕ್ಲು ಸಹಕಾರ ದವಸ ಭಂಡಾರವು ಅಸ್ಥಿತ್ವಕ್ಕೆ ಬಂದಿತು. 1920ನೇ ಸಾಲಿನಿಂದ ಸುಮಾರು 1940ನೇ ಸಾಲಿನವರೆವಿಗೆ 50 ದವಸ ಭಂಡಾರಗಳು ಹಂತಹಂತವಾಗಿ ಪ್ರಾರಂಭವಾದವು. ಯಾವುದೇ ಧನಸಹಾಯವಿಲ್ಲದೆ ತಮ್ಮ ಆಹಾರ ಸಮಸ್ಯೆಗಳಿಗೆ ತಾವೇ ಸ್ವಂತವಾಗಿ ಕಟ್ಟಿಕೊಂಡು ಬಂದ "ಪೂರ್ವಜ್ವರ ಕನಸಿನ ಕೂಸುಗಳೇ" ಈ ದವಸ ಭಂಡಾರಗಳಾಗಿವೆ.

ಭಾರತ ದೇಶದಲ್ಲಿ ಕರ್ನಾಟಕ ರಾಜ್ಯದ ಕೊಡಗು ಜಿಲ್ಲೆಯಲ್ಲಿ ಸಹಕಾರ ದವಸ ಭಂಡಾರಗಳು ವಿಶೇಷವಾಗಿ ಕಾರ್ಯನಿರ್ವಹಿಸುತ್ತಿವೆ. ಈ ಸಹಕಾರ ದವಸ ಭಂಡಾರಗಳ ವಿಶೇಷ ಕಾರ್ಯ ಚಟುವಟಿಕೆಗಳು ಧಾನ್ಯ ರೂಪದಲ್ಲಿ ನಡೆದು ಬಂದಿವೆ. ಕೊಡಗಿನಲ್ಲಿ ಬೆಳೆಯುವ ಕಾಫಿ ಬೆಳೆ ಪ್ರಥಮ ಸ್ಥಾನದಲ್ಲಿದ್ದು ಭತ್ತ ಎರಡನೇ ಸ್ಥಾನದಲ್ಲಿರುತ್ತದೆ. ಆದ್ದರಿಂದ ಇಲ್ಲಿ ಭತ್ತವನ್ನೇ ದವಸ ಎಂದು ಕರೆಯಾಲಾಗುತ್ತದೆ. ಸದಸ್ಯರಿಂದ ಷೇರು ಸಂಗ್ರಹಣೆ, ಸಾಲ ನೀಡುವುದು ಮತ್ತು ಸಾಲದ ವಸೂಲಾತಿ ಮತ್ತು ಬಡ್ಡಿಯನ್ನು ಪಡೆದುಕೊಳ್ಳುವುದು. ಸಿಬ್ಬಂದಿ ವೇತನವು ಸೇರಿದಂತೆ ದವಸ ರೂಪದಲ್ಲೆಯೇ ವ್ಯವಹಾರ ಮಾಡುವುದು ವಿಶೇಷವಾಗಿದೆ.

ಹಿಂದಿನ ಕಾಲದಲ್ಲಿ ಈಗ ಇರುವಂತೆ ಕಾಫಿ, ಟೀ, ಏಲಕ್ಕಿ, ಕರಿಮೆಣಸು, ಕಿತ್ತಾಳೆ ಮುಂತಾದ ಬೆಳೆಗಳನ್ನು ಹೆಚ್ಚಾಗಿ ಬೆಳೆಯುತ್ತಿರಲಿಲ್ಲ. ಆದರೆ ಕೃಷಿ ಕೇವಲ ಮಳೆಯಾದರಿತ ಪ್ರದೇಶಗಳಲ್ಲಿ ಭತ್ತವನ್ನು ಬೆಳೆಯಲಾಗುತ್ತಿತ್ತು. ಸುಗ್ಗಿ ಮತ್ತು ಬೇಸಿಗೆ ಕಾಲದಲ್ಲಿ ಆಹಾರಕ್ಕೆ ತೊಂದರೆ ಇಲ್ಲದಿದ್ದರೂ ಮಳೆಗಾಲದಲ್ಲಿ ನೂರಾರು ರೈತ ಕುಟುಂಬಗಳು ಆಹಾರದ ಸಮಸ್ಯೆಯನ್ನು ಎದುರಿಸುತ್ತಿದ್ದವು. ಇಂತಹ ಸಂದರ್ಭಗಳಲ್ಲಿ ರೈತರು ಸಹಕಾರ ದವಸ ಭಂಡಾರಗಳನ್ನು ಅವಲಂಬಿಸಿಕೊಂಡು ಭತ್ತದ ರೂಪದಲ್ಲಿ ಸಾಲ ತೆಗೆದುಕೊಂಡು ಜೀವನ ನಡೆಸುತ್ತಿದ್ದವು, ಮತ್ತು ಸುಗ್ಗಿಯ ಸಮಯದಲ್ಲಿ ಅಸಲು ಮತ್ತು ಬಡ್ಡಿಯನ್ನು ಸಹಕಾರ ದವಸ ರೂಪದಲ್ಲೇ ಮಾಡಿಕೊಂಡು ಬರುತ್ತಿದ್ದಾರೆ.



ಸಹಕಾರ ದವಸ ಭಂಡಾರಗಳಲ್ಲಿ ಸದಸ್ಯರು ಮರಣ ಹೊಂದಿದಾಗ ಆತನ ಉತ್ತರ ಕ್ರಿಯೆಗೆ ಮರಣ ನಿಧಿಯನ್ನು ದವಸ ರೂಪದಲ್ಲೇ ನೀಡುತ್ತಿದ್ದರು. ಹಾಗೂ ದವಸ ಭಂಡಾರವನ್ನು ಪ್ರೋತ್ಸಾಹಿಸಲು ಅರ್ಥಿಕವಾಗಿ ಭತ್ತವನ್ನು ಬೆಳೆಯುತ್ತಿದ್ದ ರೈತರು ತಮ್ಮ ಜೀವನೋಪಾಯಕ್ಕಾಗಿ ಅಗತ್ಯವಾದಷ್ಟು ಭತ್ತವನ್ನು ಇಟ್ಟುಕೊಂಡು ಹೆಚ್ಚುವರಿ ಭತ್ತವನ್ನು ದವಸ ಭಂಡಾರಗಳಲ್ಲಿ ಠೇವಣಿಯಾಗಿಟ್ಟು ಬಡ್ಡಿ ವಸೂಲು ಮಾಡುತ್ತಿದ್ದರು. ಹೀಗೆ ದವಸ ಭಂಡಾರಗಳು ಒಂದು ಕಾಲದಲ್ಲಿ ರೈತರಿಗೆ ಸಂಜೀವಿನಿಯಂತೆ ಕಾರ್ಯನಿರ್ವಹಿಸಿ, ಗ್ರಾಮೀಣ ಭಾಗದ ಕಡು ಬಡವರಿಗೆ ಕಾಮದೇನು ಕಲ್ಪವೃಕ್ಷವಾಗಿ ಆಶ್ರಯ ನೀಡುತ್ತಿದ್ದವು. ಆದರೆ ಇಂದು ಭತ್ತ ಬೆಳೆಯುವ ಪ್ರಮಾಣ ಅತ್ಯಂತ ಕಡಿಮೆಯಾಗಿದ್ದು ದವಸ ಭಂಡಾರಗಳು ನಿರೀಕ್ಷಿತ ಮಟ್ಟದಲ್ಲಿ ಕಾರ್ಯನಿರ್ವಹಿಸುತ್ತಿಲ್ಲ. ದವಸ ಭಂಡಾರಗಳು ಕುಂಠಿತವಾಗಲು ಕೆಲವೊಂದು ಕಾರಣಗಳಿವೆ. ಅವುಗಳೆಂದರೆ:–

1. ಕಾಲ ಕಳೆದಂತೆ ಕೃಷಿಯಲ್ಲಿ ವೈಜ್ಞಾನಿಕತೆ ಹೆಚ್ಚಾಗಿ ಭತ್ತ ಬೆಳೆಯುತ್ತಿದ್ದ ರೈತರು ಇಂದು ಕಾಫಿ, ಏಲಕ್ಕಿ, ಶುಂಠಿ, ಅಡಿಕೆ, ಬಾಳೆ, ಕರಿಮೆಣಸು, ಮುಂತಾದ ವಾಣಿಜ್ಯ ಬೆಳೆಗಳನ್ನು ಬೆಳೆಯಲು ಪ್ರಾರಂಭಿಸಿದ ಪ್ರಯುಕ್ತ, ಭತ್ತ ಬೆಳೆಯುವ ರೈತರ ಸಂಖ್ಯೆ ಬಹಳ ಕಡಿಮೆಯಾಗಿದೆ. ಹೀಗೆಯೇ ಭತ್ತವನ್ನು ಹೆಚ್ಚಾಗಿ ಬೆಳೆಯಲು ಸಾಧ್ಯವಿಲ್ಲದ ಪ್ರಯುಕ್ತ ದವಸ ಭಂಡಾರಗಳು ಕುಂಟಿತವಾಗುತ್ತ ಬಂದಿವೆ.

2. ಜಿಲ್ಲಾ ಪಂಚಾಯತ್ ಸದಸ್ಯರಾದ ಬಲ್ಲರಂಡ ಮಣಿ ಉತ್ತಪ್ಪರವರ ಅನಿಸಿಕೆಯಂತೆ ಭತ್ತ ಬೆಳೆಯುವ ಕೆಲವೊಂದು ಕೃಷಿ ಭೂಮಿಗಳನ್ನು ಗೃಹ ನಿರ್ಮಾಣಕ್ಕಾಗಿ ಸೈಟ್‌ಗಳನ್ನಾಗಿ ಪರಿವರ್ತಿಸುತ್ತಿರುವುದು ಹಾಗೂ ರಿಯಲ್ ಎಸ್ಟೇಟ್‌ಗಳ ವ್ಯವಹಾರಗಳು ಹೆಚ್ಚಾಗುತ್ತಿರುವುದು.

3. ಭತ್ತದ ಬೆಳೆಯನ್ನು ಬೆಳೆದ ನಂತರ ಕಟಾವು ಮಾಡುವ ಸಂಧರ್ಭದಲ್ಲಿ ನೀರಾವರಿ ಭೂಮಿ(ಗದ್ದೆ)ಯಲ್ಲಿ ನಿಂತಿರುವ ನೀರನ್ನು ಇಂಗಿಸುತ್ತಿದ್ದಾರೆ. ಈ ಸಂದರ್ಭದಲ್ಲಿ ನೀರನ್ನು ಸದ್ಬಳಕೆ ಮಾಡಿಕೊಳ್ಳದೆ ಅನಗತ್ಯವಾದ ಬೇರೆ ಸ್ಥಳಕ್ಕೆ ಬೀಡುವುದರಿಂದ ಅಂತರ್‌ಜಲ ಕಡೆಮೆಯಾಗುತ್ತಿದೆ. ಅಂದರೆ ಜನಸಂಪತ್ತು ಸದ್ಬಳಕೆಯಾಗುತ್ತಿಲ್ಲ.

2011–12ರ ವರೆಗೆ ಪ್ರಸ್ತುತವಾಗಿ 101 ಸಹಕಾರ ದವಸ ಭಂಡಾರಗಳಿದ್ದು, ಅದರಲ್ಲಿ 87 ಕಾರ್ಯನಿರತವಾಗಿದ್ದು 4 ಸಹಕಾರ ದವಸ ಭಂಡಾರಗಳನ್ನು ಮುಚ್ಚಲಾಗಿದ್ದು 10 ಸಹಕಾರ ದವಸ ಭಂಡಾರಗಳು ಸಮಾಪನೆಯಾಗಿವೆ. ಇವುಗಳಲ್ಲಿ ಕಾರ್ಯನಿರತವಾಗಿರುವ 87 ಸಹಕಾರ ದವಸ ಭಂಡಾರಗಳಲ್ಲಿ ಶೇ.50ರಷ್ಟು ಮಾತ್ರ ಕಾರ್ಯನಿರ್ವಹಿಸುತ್ತಿವೆ. ಅವುಗಳಲ್ಲಿ 10 ರಿಂದ 20 ಸಹಕಾರ ದವಸ ಭಂಡಾರಗಳು ಮಾತ್ರ ಆರೋಗ್ಯಕರವಾಗಿವೆ. ಅವುಗಳಲ್ಲಿ ಮಡಿಕೇರಿ ತಾಲೂಕಿನಲ್ಲಿ 1. ಕಿಗ್ಗಾಲು ಶ್ರೀ ಚಾಮುಂಡೇಶ್ವರಿ ಸಹಕಾರ ದವಸ ಭಂಡಾರ 2. ನಾಪೋಕ್ಲು ಸಹಕಾರ ದವಸ ಭಂಡಾರ 3. ಕಬಡಗೇರಿ ಸಹಕಾರ ದವಸ ಭಂಡಾರಗಳು ಉತ್ತಮವಾಗಿ ಕೆಲಸ ನಿರ್ವಹಿಸುತ್ತಿವೆ.



2004–05ನೇ ಸಾಲಿನಿಂದ ಕೊಡಗಿನ ಜಿಲ್ಲಾ ಸಹಕಾರ ಯೂನಿಯನ್ ನಿ., ಮಡಿಕೇರಿ ಸಂಸ್ಥೆಯು ದವಸ ಭಂಡಾರಗಳ ಕಾರ್ಯವೈಖರಿಯಲ್ಲಿ ಕುಂಠಿತವಾಗುತ್ತಿರುವ ಬಗ್ಗೆ ಚಿಂತನ–ಮಂಥನ ನಡೆಸಿ ಇವುಗಳು ಆರ್ಥಿಕವಾಗಿ ಪ್ರಗತಿಯ ಪಥದಲ್ಲಿ ಸಾಗುವಂತೆ ಕ್ರಮ ಕೈಗೊಂಡಿತು. ಈ ಪರಿಣಾಮವಾಗಿ ಎಂ.ಪಿ.ಮುತ್ತಪ್ಪನವರು ಮತ್ತು ಆಡಳಿತ ಮಂಡಳಿಯವರು ಸಹಕಾರ ಇಲಾಖಾ ಅಧಿಕಾರಿಗಳ ಜೊತೆ ಸಮಲೋಚಿಸಿ 2004ರಲ್ಲಿ ಎಲ್ಲಾ ದವಸ ಭಂಡಾರಗಳ ಉಪನಿಯಮಗಳನ್ನು ಕಾಯ್ದೆ, ನಿಯಮಗಳ ಪ್ರಕಾರ ತಿದ್ದುಪಡಿಯನ್ನು ಮಾಡಿಸಿ, ಹತ್ತು–ಹಲವಾರು ಉದ್ದೇಶಗಳನ್ನು ಕಾರ್ಯನಿರ್ವಹಿಸುವಂತೆ ವಿವಿಧೋದ್ದೇಶಗಳ ಸಹಕಾರ ದವಸ ಭಂಡಾರಗಳೆಂದು ತಮ್ಮ ಹೆಸರುಗಳನ್ನು ಬದಲಾಯಿಸಿಕೊಂಡಿವೆ.

ಸಹಕಾರ ದವಸ ಭಂಡಾರಗಳು ಕೇವಲ ಧಾನ್ಯ ರೂಪದಲ್ಲಿ ವ್ಯವಹಾರ ಮಾಡುತ್ತಿದ್ದು ಸುಗ್ಗಿಯ ಕಾಲ ಬಂದರೂ, ಸದಸ್ಯರು ಸಮಯಕ್ಕೆ ಸರಿಯಾಗಿ ಭತ್ತಕ್ಕೆ ಬಡ್ಡಿಯನ್ನು ಸೇರಿಸಿ ಮರುಪಾವತಿ ಮಾಡುತ್ತಿರಲಿಲ್ಲ. ಹಾಗೂ ಅವುಗಳು ವೈಜ್ಞಾನಿಕ ಆಡಳಿತ ಕೈಗೊಳ್ಳಲು ಸಾಧ್ಯವಾಗುತ್ತಿರಲಿಲ್ಲ. ಆದ್ದರಿಂದ 2004ರ ನಂತರ ಎಲ್ಲಾ ಸಹಕಾರ ದವಸ ಭಂಡಾರಗಳ ಉಪನಿಯಮಗಳನ್ನು ತಿದ್ದುಪಡಿ ಮಾಡಿದ ನಂತರ ಹಾಗೂ ಭತ್ತ ಬೆಳೆಯುವುದರ ಪ್ರಮಾಣ ಕಡಿಮೆಯಾಗುತ್ತಿರುವುದರಿಂದ ಕೆಲವೊಂದು ದವಸ ಭಂಡಾರಗಳು ಮಾತ್ರ ಭತ್ತದ ಬದಲು ಹಣದ ರೂಪದಲ್ಲಿ ವ್ಯವಹಾರವನ್ನು ಪ್ರಾರಂಭಿಸಿವೆ.

ಈ ಎಲ್ಲ ಮಾಹಿತಿ ಹಾಗೂ ಹಿನ್ನಲೆಯ ನಂತರ ಈಗ ಎರಡು ದವಸ ಭಂಡಾರಗಳ ಬಗ್ಗೆ ಕಿರು ಮಾಹಿತಿ:

ಮೊದಲನೇಯದಾಗಿ 1940 ರಲ್ಲಿ ಪ್ರಾರಂಭವಾದ ಕಿಗ್ಗಾಲು ಶ್ರೀ ಚಾಮುಂಡೇಶ್ವರಿ ಸಹಕಾರ ದವಸ ಭಂಡಾರವು ಒಂದು ಷೇರಿನ ಬೆಲೆ 500 ಮತ್ತು ದಾಖಲಾತಿ ಫೀ 50 ಒಟ್ಟು ರೂ. 550ಗಳನ್ನು

ಸದಸ್ಯತ್ವಕ್ಕಾಗಿ ಪಡೆದುಕೊಳ್ಳಲು ನಿರ್ಧರಿಸಿದ್ದು, ಮರಣ ನಿಧಿ ರೂ.600 ಗಳನ್ನು ಪಡೆದುಕೊಳ್ಳುತ್ತಿವೆ. ಮರಣ ಹೊಂದಿದ ನಂತರ ಆತನ ಉತ್ತಾರಾಧಿಕಾರಿಗೆ ರೂ.2500ಗಳನ್ನು ಸಹಕಾರ ದವಸ ಭಂಡಾರವು ನೀಡುತ್ತಿವೆ. ಹಾಗೂ ತನ್ನ ಉದ್ದೇಶಗಳ ತಿದ್ದುಪಡಿಯನ್ನು ತಂದು ಭತ್ತದ ರೂಪದಲ್ಲಿ ಸಾಲ ನೀಡುವ ಬದಲು ಹಣದ ರೂಪದಲ್ಲಿ ಸಾಲ ನೀಡಲು ಮುಂದಾಗಿವೆ. ಸಂಘದ ಬೈಲಾದ ಪ್ರಕಾರ ರೂ.10 ಸಾವಿರ ಸಾಲ ನೀಡಲು ಅವಕಾಶವಿದ್ದು ಈ ಸಾಲಿನಲ್ಲಿ ಪ್ರತಿಯೊಬ್ಬ ಸದಸ್ಯನಿಗೆ ರೂ.5000 ಗಳಂತೆ ಸಾಲ ನೀಡಿ 29 ಜನರಿಗೆ ರೂ. ಒಂದು ಲಕ್ಷದ ನಲ್ವತ್ತೈದು ಸಾವಿರ ಸಾಲವನ್ನು ನೀಡಿದ್ದಾರೆ. ಇದಕ್ಕೆ ಬಡ್ಡಿಯನ್ನು ಶೇ.15ರಂತೆ ಪಡೆದುಕೊಳ್ಳಲಾಗುತ್ತಿದೆ.

ಕಿಗ್ಗಾಲು ಶ್ರೀ ಚಾಮುಂಡೇಶ್ವರಿ ಸದರಿ ದವಸ ಭಂಡಾರವು 1981ರಲ್ಲಿ ಒಂದು ನ್ಯಾಯ ಬೆಲೆಯ ಅಂಗಡಿಯನ್ನು ಪ್ರಾರಂಭಿಸಿತು. ನ್ಯಾಯ ಬೆಲೆಯ ಅಂಗಡಿ ಪರವಾನಗಿಯನ್ನು ಪಡೆದ ಕೊಡಗಿನ ಪ್ರಥಮ ಸಹಕಾರ ದವಸ ಭಂಡಾರ ಇದಾಗಿದೆ. ಅಂದರೆ 1981ರ ನಂತರವೇ ಉಳಿದ ಸಹಕಾರ ದವಸ ಭಂಡಾರಗಳು ನ್ಯಾಯ ಬೆಲೆ ಅಂಗಡಿಗಳನ್ನು ಹಂತ ಹಂತವಾಗಿ ಪ್ರಾರಂಭಿಸುತ್ತ ಬಂದಿದ್ದಾರೆ.

ಎರಡನೆಯದಾಗಿ, ನಾಪೋಕ್ಲು ದವಸ ಭಂಡಾರವು ದಿನಾಂಕ:20.01.1920ರಲ್ಲಿ ಶ್ರೀಯುತ ದಿವಗಂತ ಕಂಗಾಣಂಡ ಚೆಂಗಪ್ಪನವರ ಅಧ್ಯಕ್ಷತೆಯಲ್ಲಿ 20 ಜನ ಸದಸ್ಯರಿಂದ ಸುಮಾರು 8 ರಿಂದ 10 ಕ್ವಿಂಟಲ್ ಭತ್ತವನ್ನು ಷೇರು ರೂಪದಲ್ಲಿ ಸಂಗ್ರಹಿಸಿ ಪ್ರಾರಂಭಿಸಲಾಯಿತು. ಇಂದು ಸುಮಾರು 620 ಸದಸ್ಯರು 571 ಕ್ವಿಂಟಲ್ ಭತ್ತವನ್ನು ಬಂಡವಾಳವನ್ನಾಗಿ ಸಂಗ್ರಹಿಸಲಾಗಿದೆ. 5915 ಕ್ವಿಂಟಲ್ ಭತ್ತವನ್ನು ದುಡಿಯುವ ಬಂಡವಾಳದ ರೂಪದಲ್ಲಿದೆ. 2010-11ನೇ ಸಾಲಿನಲ್ಲಿ 6,50,000.00 ರೂ.ಗಳನ್ನು ಠೇವಣಿಯಾಗಿ ಸಂಗ್ರಹಿಸಲಾಗಿದೆ. 1976ರಲ್ಲಿ ಸಾಮಾಜಿಕ ಕಳಕಳಿ ಇಟ್ಟುಕೊಂಡು ಒಂದು ಕಲ್ಯಾಣ ಮಂಟಪವನ್ನು ಪ್ರಾರಂಭಿಸಲಾಗಿದೆ. ಇದರಿಂದ ಒಂದು ವರ್ಷಕ್ಕೆ ಸುಮಾರು 1 ಲಕ್ಷದ 12 ಸಾವಿರ ಬಾಡಿಗೆ ಬರುತ್ತಿರುವುದು ಸಂಘದ ಆರ್ಥಿಕ ಅಬಿವೃದ್ಧಿಗೆ ನಾಂದಿಯಾಗಿದೆ.

1954ರಲ್ಲಿ ನಾಪೋಕ್ಲು ಗ್ರಾಮದ ಪಾಡಿಯಮ್ಮಂಡ ಕುಟುಂಬದವರು ನಾಪೋಕ್ಲು, ಭಾಗಮಂಡಲ ರಸ್ತೆಯ ಬದಿಯಲ್ಲಿ 25 ಸೆಂಟು ಜಾಗವನ್ನು ದವಸ ಭಂಡಾರಕ್ಕೆ ಕಟ್ಟಡ ಕಟ್ಟಲು ಉದಾರವಾಗಿ ಕೊಟ್ಟ ಮೇರೆಗೆ ಆಗಿನ ದವಸ ಭಂಡಾರದ ಅಧ್ಯಕ್ಷರಾದ ಶ್ರೀಯುತ ದಿವಂಗತ ಅಜ್ಜೇಟ್ಟಿರ ಸೋಮಪ್ಪನವರ ಮುಂದಾಳತ್ವದಲ್ಲಿ ಸುಮಾರು 300 ಕ್ವಿಂಟಲ್ ಭತ್ತವನ್ನು ಶೇಖರಿಸುವ 2 ಉಗ್ರಾಣ ಹಾಗೂ ಒಂದು ಮೀಟಿಂಗ್ ಸಭಾಂಗಣವನ್ನು ಹೊಂದಿಕೊಂಡಂತೆಯೇ ಒಂದು ಸುಂದರಾವಾದ ಕಟ್ಟಡವನ್ನು ಕಟ್ಟಿದ್ದಾರೆ. ಹೀಗೆ ಹಂತಹಂತವಾಗಿ ಅರ್ಥಿಕ ಅಭಿವೃದ್ಧಿಯತ್ತ ಪ್ರಯಾಣ ಮಾಡುತ್ತಿರುವುದು ಭವಿಷ್ಯತ್ತಿನಲ್ಲಿ ಇನ್ನೂ ಎತ್ತರಕ್ಕೆ ಬೆಳವಣಿಗೆಯಾಗುವ ಲಕ್ಷಣಗಳು ಕಂಡು ಬರುತ್ತಿವೆ.

ಹೀಗೆ ಸಹಕಾರ ದವಸ ಭಂಡಾರಗಳು ಕೊಡಗು ಜಿಲ್ಲೆಯಲ್ಲಿ ಪ್ರಭಲವಾಗಿರುವ ಖಾಸಗಿ ವ್ಯಾಪಾರಿಗಳ ಸ್ಪರ್ಧೆಯನ್ನು ಎದುರಿಸುವ ಸಲುವಾಗಿ ಮತ್ತು ಗ್ರಾಮೀಣ ಪ್ರದೇಶದ ರೈತರಿಗೆ ಆರ್ಥಿಕ ಸಹಾಯನ್ನು ನೀಡುವ ಸಲುವಾಗಿ, ಆಮೆಯ ಓಟದಂತೆ ವ್ಯವಹಾರಗಳನ್ನು ಪ್ರಾರಂಭಿಸಿ, ಮೊಲದ ಓಟದಂತೆ ಓಡಲು ಪ್ರಯತ್ನ ಮಾಡುತ್ತಿರುವುದು ಶ್ಲಾಘನೀಯವಾಗಿದೆ. ಸಾವಿರ ನದಿಗಳು ಸೇರಿ ಸಾಗರವಾದಂತೆ ಎಲ್ಲ ಸಹಕಾರ ದವಸ ಭಂಡಾರಗಳು ಸೇರಿ ಕೊಡಗು ಜಿಲ್ಲೆಯ ಆರ್ಥಿಕ ಅಭಿವೃದ್ಧಿಗೆ ತಮ್ಮದೇ ಆದ ಕೊಡುಗೆಯನ್ನು ನೀಡುತ್ತವೆ. ಇವುಗಳ ಕೊಡುಗೆ ಸಹಕಾರ ಕ್ಷೇತ್ರಕ್ಕೆ ಸಣ್ಣ ಪ್ರಮಾಣದಲ್ಲಿ ಇರಬಹುದು, ಆದರೆ "ಉಪ್ಪಿಗಿಂತ ರುಚಿ ಬೇರೆ ಇಲ್ಲ" ಎನ್ನುವಂತೆ ಸಹಕಾರ ದವಸ ಭಂಡಾರಗಳು ಕಾರ್ಯನಿರ್ವಹಿಸುತ್ತಿರುವುದರಿಂದ ಅತ್ಯಂತ ಕಡು ಬಡವರ ಜೀವನಾಡಿಯಾಗಿ ಸೇವೆಗಳನ್ನು ಸಲ್ಲಿಸುತ್ತಿವೆ.



## ಶ್ರೀ ಜಗದ್ಗುರು ಗುರುಸಿದ್ದೇಶ್ವರ ಸಹಕಾರಿ ಆಸ್ಪತ್ರೆ ಸೊಸಾಯಿಟಿ ನಿ, ಘಟಪ್ರಭಾ ಬೆಳಗಾವಿ ಜಿಲ್ಲೆ

ಆರೋಗ್ಯ ಮನುಷ್ಯನ ಮೂಲಭೂತ ಅವಶ್ಯಕತೆಯಾಗಿ ಪರಿಣಮಿಸುತ್ತಿರುವ ಇಂದಿನ ಯುಗದಲ್ಲಿ, ಕೈಗೆಟಕುವ ದರದಲ್ಲಿ ಆರೋಗ್ಯ ರಕ್ಷಣೆಯನ್ನು ಮಾಡಿಕೊಳ್ಳಲು ಜನ ಸಾಮಾನ್ಯರು ದುಸ್ತರಪಡುತ್ತಿರುವುದು ಸಮಾಜದ ಬೆಳವಣಿಗೆಗೆ ತಡೆಯೊಡ್ಡುತ್ತಿದೆ. ಜನರಿಂದ ಜನರ ಏಳ್ಗೆಗಾಗಿ ಪರಸ್ಪರ ಹೊಂದಾಣಿಕೆಯ ಉದ್ದೇಶದೊಂದಿಗೆ ಕಾರ್ಯನಿರ್ವಹಿಸುತ್ತಿರುವ ಸಹಕಾರ ಕ್ಷೇತ್ರದಲ್ಲಿ ಅಪರೂಪಕ್ಕೆಂಬಂತೆ ಆರೋಗ್ಯ ಕ್ಷೇತ್ರವನ್ನೊಳಗೊಂಡ ಸಹಕಾರ ಸಂಸ್ಥೆಯೊಂದು ಆಸ್ಪತ್ರೆಯನ್ನು ಪ್ರಾರಂಭಿಸುವುದರ ಮೂಲಕ ಸಮಾಜ ಸೇವೆಯ ಕಾರ್ಯವನ್ನು ನಿರ್ವಹಿಸುತ್ತಿದೆ. ಜನ ಸಾಮಾನ್ಯರಿಗೆ ಕೈಗೆಟಕುವ ದರದಲ್ಲಿ ಅರೋಗ್ಯವನ್ನೊದಗಿಸುವ ಪ್ರಯತ್ನ ಮಾಡುವ ಉದ್ದೇಶದಿಂದ ಕಾರ್ಯನಿರ್ವಹಿಸುತ್ತಿರುವ ಸಹಕಾರ ಸಂಸ್ಥೆಯೆಂದರೆ ಶ್ರೀ ಜಗದ್ಗುರು ಗುರುಸಿದ್ಧೇಶ್ವರ ಸಹಕಾರಿ ಆಸ್ಪತ್ರೆ ಸೊಸಾಯಿಟಿ ನಿಯಮಿತ, ಘಟಪ್ರಭಾ. 13 ಅಕ್ಟೋಬರ್ 1951ರಲ್ಲಿ ಮುಂಬಯಿ ಸಹಕಾರ ಸಂಘ ಕಾಯ್ದೆಯಲ್ಲಿ ನೋಂದಾಯಿತವಾಗಿ 1959ರಿಂದ ವ್ಯವಸ್ಥಿತವಾಗಿ ಕಾರ್ಯನಿರ್ವಹಿಸುತ್ತಿರುವ ಸಂಸ್ಥೆ ಇದು.

ಮೂರು ಸಾವಿರ ಮಠ ಹುಬ್ಬಳ್ಳಿಯ ಶಾಖಾ ಮಠದ ಜಗದ್ಗುರು ಶ್ರೀಗುರುಸಿದ್ದ ರಾಜಯೋಗೀಂದ್ರ ಮಹಾಸ್ವಾಮಿಗಳು ಚಿಕ್ಕಪುಟ್ಟ ರೋಗಗಳಿಗೆ ಆಯುರ್ವೇದ ಔಷದವನ್ನು  ಭಕ್ತಾಧಿಗಳಿಗೆ ನಿಡುತ್ತಿದ್ದರು ಬರುವಂತಹ ಭಕ್ತಾದಿಗಳಿಗೆ ಕಡಿಮೆ ವೆಚ್ಚದಲ್ಲಿ ವೈದ್ಯಕೀಯ ಸೌಲಭ್ಯ ಸಿಗಲಿ ಹಾಗೂ ಅದನ್ನು ಭಕ್ತದಾದಿಗಳೆ ನಡಿಸಿಕೊಂಡು ಹೊಗುವಂತಹ ವ್ಯವಸ್ಥೆಯಾಗಲಿ ಎನ್ನುವ ಕಲ್ಪನೆಯು ಈ ಸಹಕಾರಿ ಆಸ್ಪತ್ರೆ ಉದಯವಾಗಲು ಕಾರಣವಾಯಿತು. ಕಳೆದ ಮೂರು ತಲೆಮಾರುಗಳಿಂದ ಆರೋಗ್ಯ ಸೇವೆಯನ್ನು ಪಡದುಕೊಳ್ಳುತ್ತಿರುವ ಸಾವಿರಾರು ಕುಟಂಬಗಳು ಹಾಗು ಸದಸ್ಯರು ಈ ಭಾಗದಲ್ಲಿ ಇದ್ದಾರೆ, ಈ ಸಹಕಾರಿ ಆಸ್ಪತ್ರೆ ಮೇಲಿನ ನಂಬಿಕೆ ವಿಶ್ವಾಸ ಕಡೆಮೆ ಆಗಿಲ್ಲ. ಬೇರೆ ಆಸ್ಪತ್ರೆಗೆ ಹೊಲಿಸಿದರೆ ಚಿಕಿತ್ಸಾ ವೇಚ್ಚದಲ್ಲಿ ಅರ್ಧದಷ್ಟು ಕಡಿಮೆಯಾಗುತ್ತದೆ. ಈ ಸಹಕಾರಿ ಆಸ್ಪತ್ರೆಯೊಂದಿಗೆ ಇದರ ನೇತೃತ್ವದಲ್ಲೇ ನಡೆಯುತ್ತಿರುವ ಅಂಗ ಸಂಸ್ಥೆಗಳಾದ ಆಯುರ್ವೇದ ಕಾಲೇಜು, ಸ್ನಾತಕೋತರ ಕೇಂದ್ರ, ನಿಸರ್ಗೋಪಚಾರ ಮತ್ತು ಯೋಗ

ಕೇಂದ್ರ, ಹಾಗೂ ನರ್ಸಿಂಗ ಕಾಲೇಜುಗಳು ಇಂದು ಅನೇಕ ಸೇವಾ ಚಟುವಟಿಕೆಗಳನ್ನು ನೀಡುವ ಮುಖಾಂತರ ಗ್ರಾಮೀಣ ಭಾಗದಲ್ಲಿ ಆರೋಗ್ಯ ಸುಧಾರಣೆಯಲ್ಲಿ ಕ್ರಾಂತಿ ಮಾಡಿದ್ದು ಗಮನಾರ್ಹವಾದದ್ದು.

ಈ ಸಂಸ್ಥೆಯ ನಿಜವಾದ ಶಕ್ತಿ ಮೂರು ಸಾವಿರ ಮಠದ ಜಗದ್ಗುರು ಶ್ರೀ ಗುರುಸಿದ್ದೇಶ್ವರ ಆಶೀರ್ವಾದದ ಜೊತೆಗೆ ಆಡಳಿತ ಮಂಡಳಿಯ ನಿಸ್ವಾರ್ಥ ಸೇವಾ ಮನೋಭಾವನೆ ಹಾಗೂ ಅವರ ಕ್ರೀಯಾಶಿಲತೆ, ಎಂಥಹ ಸಂದರ್ಭದಲ್ಲಿಯೂ ಸಹ ಧೃತಿಗೆಡದೇ ನಿಭಾಯಿಸುವಂಥಹ ಮನೋಗುಣ, ಸಂಪೂರ್ಣ ರಾಜಕೀಯ ಹೊರತು ಕಾರ್ಯಚಟುವಟಿಕೆ ನಡೆಯುತ್ತಿರುವುದು ಈ ಸಂಸ್ಥೆಗೆ ಇನ್ನಷ್ಟು ಬಲ ತಂದಿದೆ. ಜೊತೆಯಲ್ಲಿ ಮುಖ್ಯಕಾರ್ಯನಿರ್ವಹಣಾಧಿಕಾರಿಯಾದ ಡಾ/ ಬಿ ಕೆ ಎಚ್ ಪಾಟಿಲರ ಅನುಭವದ ಹಾಗೂ ಆಡಳಿತ ನಿರ್ವಹಣೆ ಆದರದ ಮೇಲೆ ಸಿಬ್ಬಂದಿವರ್ಗದ ಕ್ರಿಯಾಶೀಲತೆಗೆ ಇನ್ನಷ್ಟು ಪುಷ್ಠಿ ಕೊಟ್ಟರುವುದು ಮತ್ತು ಸುತ್ತಮುತ್ತಲಿನ ಹಾಗೂ ಸದಸ್ಯರ, ಆಸ್ಪತ್ರೆಯಿಂದ ಗುಣಮುಖರಾಗಿ ಹೊರಹೋದ ರೋಗಿಗಳ ಸಹಕಾರದಿಂದ ಸಂಸ್ಥೆಗೆ ಇನ್ನಷ್ಟು ಶಕ್ತಿ ತುಂಬಿದಂತಾಗಿದೆ.



ಗ್ರಾಮೀಣ ಬಡ ರೋಗಿಗಳಿಗೆ ಕಡಿಮೆ ದರದಲ್ಲಿ ವೈದ್ಯಕೀಯ ಉಪಚಾರ ನೀಡುವ ಉದ್ದೇಶದಿಂದ ಸ್ಥಾಪಿಸಲ್ಪಟ್ಟ ಈ ಸಹಕಾರಿ ಆಸ್ಪತ್ರೆಯಲ್ಲಿ ದಾಖಲಾಗುವ ಎಲ್ಲ ಹೆರಿಗೆ ಮತ್ತು ಕೆಲ ಬಡ ರೋಗಿಗಳಿಗೆ ಉಚಿತ ಸೌಲಭ್ಯ ಮತ್ತು ಊಟ ಉಪಚಾರ ಸೌಲಭ್ಯಗಳನ್ನು ಸಹಕಾರ ಸಂಘದಿಂದಲೇ ಒದಗಿಸುತ್ತಿರುವುದು ಉಲ್ಲೇಖಾರ್ಹವಾದದ್ದು. ಸಹಕಾರಿ ಸಂಘವು ಇಲ್ಲಿವರೆಗೆ 6.54 ಲಕ್ಷ ಶೇರು ಬಂಡವಾಳ ಹೊಂದಿದ್ದು, ಯಾವುದೆ ರೀತಿಯ ಠೇವುಗಳನ್ನು ಸ್ವಿಕರಿಸದೆ ಹಗೂ ಯಾವುದೆ ರೀತಿಯ ಸಾಲವನ್ನು ಹೊಂದದೆ 2011–12ನೇ ಸಾಲಿನವರೆಗೆ 756 ಸದಸ್ಯರುಗಳನ್ನು ಹೊಂದಿ ಕಾರ್ಯನಿರ್ವಹಿಸುತ್ತಿದೆ.

ಸುಂದರ ಪರಿಸರದ ಮಧ್ಯದ 65 ಎಕರೆ ಜಾಗದಲ್ಲಿ ಸೇವಾ ಚಟುವಟಿಕೆಗಳಿಗೆ ಪ್ರಾಧಾನ್ಯತೆ ನೀಡಿ ಕಾರ್ಯನಿರ್ವಹಿಸುತ್ತಿರುವುದು ಈ ಸಂಸ್ಥೆಯ ವಿಶೇಷತೆಗಳಲ್ಲೊಂದು. ಲಾಭ ಕೇಂದ್ರೀತವಲ್ಲದ ನಿರಂತರವಾಗಿ ಸೇವಾ ಮನೋಭಾವನೆಯಿಂದ ಕಾರ್ಯನಿರ್ವಹಿಸುತ್ತಿರುವ ಈ ಸಹಕಾರಿ ಸಂಘವು ರಾಜ್ಯದಲ್ಲಿಯೇ ಎಲ್ಲ ಸಂಘ ಸಂಸ್ಥೆಗಳಿಗೆ ಮಾದರಿಯಾಗಿ ನಿಲ್ಲುತ್ತದೆ. ಸೂಕ್ತ ಸರ್ಕಾರದ ಸೌಲಭ್ಯ ಸಹಕಾರ ಒದಗಿ ಬಂದರೆ ಆಧುನಿಕ ಆಸ್ಪತ್ರೆಗಳಿಗೆ ಸಮಾನವಾಗಿ ಬೆಳೆದು ನಿಲ್ಲುವ ಸಾಮರ್ಥ್ಯ ಈ ಸಂಸ್ಥೆಗಿದೆ. ಇಂತಹ ಸಹಕಾರಿ ಆಸ್ಪತ್ರೆಗಳು ಬಡ ಗ್ರಾಮೀಣ ಜನರಿಗೆ ತುಂಬಾ ಅನುಕೂಲ ಒದಗಿಸುವುದರ ಜೊತೆಯಲ್ಲಿಯೇ ಆರೋಗ್ಯಕರ ಗ್ರಾಮ ನಿರ್ಮಾಣದಲ್ಲಿ ಶ್ರಮಿಸಿ ದೇಶದ ಸಾಮಾಜಿಕ ಅಭಿವೃದಿಗೆ ಕೊಡುಗೆ ನೀಡುತ್ತವೆ.

ಸಂಪರ್ಕ ವಿವರ: ಶ್ರೀ ಜಗದ್ಗುರು ಗುರುಸಿದ್ದೇಶ್ವರ ಸಹಕಾರಿ ಆಸ್ಪತ್ರೆ ಸೊಸಾಯಿಟಿ ನಿ, ಘಟಪ್ರಭಾ, ತಾ:ಗೋಕಾಕ್, ಬೆಳಗಾವಿ ಜಿಲ್ಲೆ



## ಕ್ರೀಡಾ ಉತ್ತೇಜನ ಹಾಗೂ ಅಭಿವೃದ್ಧಿ ಸಹಕಾರ ನಿ., ಚಂದರಗಿ ಬೆಳಗಾವಿ ಜಿಲ್ಲೆ

ಅತಿ ಹೆಚ್ಚು ಪ್ರತಿಭೆಗಳನ್ನು ಹೊಂದಿರುವ ನಮ್ಮ ಗ್ರಾಮೀಣ ಪ್ರದೇಶವು ಸೂಕ್ತ ತರಬೇತಿ ಹಾಗೂ ಮಾರ್ಗದರ್ಶನದ ಕೊರತೆಯಿಂದ ಕ್ರೀಢಾ ಕ್ಷೇತ್ರದಲ್ಲಿ ಸಾಧನೆಗಳನ್ನು ನಿರೀಕ್ಷಿತ ಪ್ರಮಾಣದಲ್ಲಿ ತೋರಿಸಲು ವಿಫಲವಾಗುತ್ತಿದೆ. ಗ್ರಾಮೀಣ ಕ್ರೀಢೆಗಳಿಗೆ ಹಾಗೂ ಕ್ರೀಡಾಪಟುಗಳಿಗೆ ಉತ್ತೇಜನ ನೀಡುವ ಹಾಗೂ ಅಭಿವೃದ್ಧಿಯೆಡೆಗೆ ನಡೆಸುವ ಉದ್ದೇಶದಿಂದ ಬೆಳಗಾವಿಯ ಚಂದರಗಿಯಲ್ಲಿ ದಿನಾಂಕ:25.02.1983ರಲ್ಲಿ ನೋಂದಾಯಿತವಾದ ಸಹಕಾಋ ಸಂಸ್ಥೆಯೇ "ಕ್ರೀಡಾ ಉತ್ತೇಜನ ಹಾಗೂ ಅಭಿವೃದ್ಧಿ ಸಹಕಾರ ನಿಯಮಿತ". ವಿದ್ಯಾರ್ಥಿಗಳಲ್ಲಿ ಕ್ರೀಡಾ ಮನೊಭಾವನೆ ಬೆಳಸುವುದು ಹಾಗೂ ಆಸಕ್ತಿ ಹುಟ್ಟಿಸುವುದು, ಯಾವುದೇ ಜಾತಿ ಮತ ಭೇಧ ಭಾವ ನೋಡದೇ ಕ್ರೀಡೆಯಲ್ಲಿ ಆಸಕ್ತಿಯುಳ್ಳ ಕ್ರೀಡಾಳುಗಳಿಗೆ ಸ್ಪೂರ್ತಿ ತುಂಬುತ್ತಾ ಹೆಚ್ಚಿನ ಅವಕಾಶ ಒದಗಿಸುವುದು ಮತ್ತು ಕ್ರೀಡಾ ಉತ್ತೇಜನ ಮಾಡುವುದು ಸಹಕಾರಿಯ ಪ್ರಾಥಮಿಕ ಉದ್ದೇಶವಾಗಿದೆ.



ಸಹಕಾರಿಯು ನೂರು ಎಕರೆಯ ಸುಂದರ ಪರಿಸರದಲ್ಲಿ ಕ್ರೀಡಾ ಕ್ಯಾಂಪಸ, ವಸತಿ ನಿಲಯುಗಳು, ಸುಸಜ್ಜಿತವಾದ ಊಟದ ಪ್ರಾಂಗಣ, ಈಜುಕೊಳ ಹೊಂದುವುದರ ಮುಖಾಂತರ ಈ ಭಾಗದಲ್ಲಿ ಉತ್ತಮ ಕ್ರೀಡಾ ಶಿಕ್ಷಣ ನೀಡುವ ಸಂಸ್ಥೆಯಾಗಿ ಹೊರಹೊಮ್ಮಿದೆ. ಹಲವಾರು ರಾಷ್ಟ್ರೀಯ ಅಂತರಾಷ್ಟ್ರೀಯ ಕ್ರೀಡಾಪಟುಗಳನ್ನು ತಯಾರು ಮಾಡುವ ಮಹತ್ತರವಾದ ಕಾರ್ಯದಲ್ಲಿ ತೊಡಗಿರುವುದು ಹೆಮ್ಮೆಯ ಸಂಗತಿಯಾಗಿದೆ. ಉತ್ತಮ ಶಿಕ್ಷಣ ನೀಡುವಂತಹ ಶಿಕ್ಷಣ ಸಂಸ್ಥೆಗಳು ಮಾಡುವ ಕಾರ್ಯ ಚಟುವಟಿಕೆಯಂತೆ ಈ ಸಹಕಾರಿ ಸಂಘವು ಸಹ ಶೈಕ್ಷಣಿಕ


ಕಾರ್ಯಚಟುವಟಿಕೆಯನ್ನೂ ಕೂಡ ನಿರ್ವಹಿಸುತ್ತಿದೆ. ಕನ್ನಡ ಮತ್ತು ಇಂಗ್ಲೀಷ್ ಮಾಧ್ಯಮದಲ್ಲಿ 5ನೇ ತರಗತಿಯಿಂದ 10ನೇ ತರಗತಿವರೆಗೆ ಹಾಗೂ ಪಿ.ಯು.ಸಿ ವಿಜ್ಞಾನ ವಿಭಾಗ ಸೇರಿ 900 ವಿದ್ಯಾರ್ಥಿಗಳು ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ಕಳೆದ 5 ವರ್ಷದಿಂದ ಸತತವಾಗಿ 10ನೇ ತರಗತಿ ಕನ್ನಡ ವಿಭಾಗದಲ್ಲಿ 100% ಫಲಿತಾಂಶ ಹೊಂದುತ್ತಿರುವುದು ಸಹಕಾರ ಸಂಘದ ಹಿರಿಮೆಯಾಗಿದೆ. ಸಹಕಾರಿಯ ಎಲ್ಲ ಕಾರ್ಯಚಟುವಟಿಕೆಗಳು ವಿಧ್ಯಾರ್ಥಿಗಳಿಂದ ಶುಲ್ಕದ ರೂಪದಲ್ಲಿ ಪಡೆದ ಹಣದಿಂದಲೇ ನಡೆಯುತ್ತಿರುವುದು ವಿಶೇಷ.

ಸಹಕಾರಿ ಸಂಘವು ಇಲ್ಲವರೆಗೆ 77.54 ಲಕ್ಷ ಶೇರು ಬಂಡವಾಳ ಹೊಂದಿದ್ದು ಯಾವುದೆ ರೀತಿಯ ಠೇವುಗಳನ್ನು ಸ್ವೀಕರಿಸದೆ ಹಾಗೂ ಯಾವುದೆ ರೀತಿಯ ಸಾಲವನ್ನು ಹೊಂದದೆ 2011–12ನೇ ಸಾಲಿನವರೆಗೆ 3849 ಸದಸ್ಯರುಗಳನ್ನು ಹೊಂದಿ ಕಾರ್ಯನಿರ್ವಹಿಸುತ್ತಿದೆ. ನೌಕರರಿಗೆ ವೇತನ ಜೊತೆಗೆ ಬೋನಸ್, ಭವಿಷ್ಯ ನಿಧಿ, ನೌಕರರಿಗೆ ಇರಲು ಮನೆಗಳ ವ್ಯವಸ್ಥೆ, ಗ್ರೂಪ ಗ್ರಚುಯಿಟಿ, ಸಾಮೂಹಿಕ ವಿಮೆ, ಆಸ್ಪತ್ರೆ ಖರ್ಚುಗಳು, ಪೆನಶೆನ್ ಹಾಗೂ ಎಲ್ಲ ತರಹದ ಭತ್ಯೆಗಳು, ನೌಕರರ ಮಕ್ಕಳಿಗೆ ಪಿ.ಯು.ಸಿ ವರೆಗೆ ಉಚಿತ ಶಿಕ್ಷಣ ಮುಂತಾದ ಸವಲತ್ತುಗಳನ್ನು ಒದಗಿಸುತ್ತಿದೆ.



ಈಗಾಗಲೇ ಸಹಕಾರ ಸಂಘವು ಹಲವು ಯೋಜನೆಗಳನ್ನು ರೂಪಿಸಿದ್ದು ಪ್ರಸ್ತುತ ಕೇವಲ ಬಾಲಕರ ಮಧ್ಯದಲ್ಲಿ ಕಾರ್ಯನಿರ್ವಹಿಸುತ್ತಿದ್ದು ಬಾಲಕಿಯರಲ್ಲಿ ಸಹ ಕ್ರೀಡಾ ಮನೋಬಾವನೆ ಬೆಳೆಸುವ ಸಲುವಾಗಿ ಬೆಳಗಾವಿ ಹತ್ತಿರ 11 ಎಕ್ಕರೆ ಜಮಿನಿನಲ್ಲಿ ಕಾರ್ಯ ಚಟುವಟಿಕೆ ನಡೆಸಲು ಭೂಮಿಯನ್ನು ಖರಿದಿಮಾಡಿದ್ದು ಚಂದರಗಿಯ ಕ್ಯಾಂಪಸ್‌ನಂತೆ ಅಭಿವೃದ್ಧಿ ಪಡಿಸಲು ನಿರ್ಧರಿಸಲಾಗಿದೆ. ಸಹಕಾರಿಯ ಸಂಸ್ಥಾಪಕರಾದ ನಿವೃತ್ತ ಸಹಕಾರ ಸಂಘಗಳ ಸಂಯುಕ್ತ ನಿಬಂಧಕರು ಶ್ರೀ ಎಸ್.ಎಮ್.ಕಲೂತಿಯವರ ಇವರ ಮಾರ್ಗದರ್ಶನದಲ್ಲಿ ಅನುಭವಿ ಆಡಳಿತ ಮಂಡಳಿಯ ಕ್ರಿಯಾಶೀಲ ಭಾಗವಹಿಸುವಿಕೆ ಜೊತೆಯಲ್ಲಿ, ನುರಿತ ಸಿಬ್ಬಂದಿ ವರ್ಗ ಅವರ ಸೇವಾ ಮನೋಭಾವನೆಗಳಿಂದಾಗಿ ಸಹಕಾರಿಯ ಬೆಳವಣಿಗೆ ಸಾಧ್ಯವಾಗಿದೆ. ಸಹಕಾರಿಯ ಅಭಿವೃದ್ಧಿ ಗಮನಿಸಿದರೆ ಸರಕಾರದ ಸಾಹಾಯಕ್ಕಿಂತ ವಿದ್ಯಾರ್ಥಿಗಳ ಹಾಗೂ ಪೋಷಕರ ಕೋಡುಗೆ ಅಪಾರವಿದ್ದು, ಸರಕಾರದ ಹಾಗೂ ಜನಪ್ರತಿನಿಧಿಗಳ ಸಹಕಾರವಿದ್ದರೆ ಮತ್ತಷ್ಟು ಅಭಿವೃದ್ಧಿ ಹೊಂದಲು ಸಾಧ್ಯವಾಗುತ್ತದೆ.

ಸಂಪರ್ಕ ವಿವರ: ಕ್ರೀಡಾ ಉತ್ತೇಜನ ಹಾಗೂ ಅಭಿವೃದ್ಧಿ ಸಹಕಾರ ನಿ., ಚಂದರಗಿ, ತಾ:ರಾಮದುರ್ಗ, ಬೆಳಗಾವಿ ಜಿಲ್ಲೆ.



## ಹುಕ್ಕೇರಿ ಗ್ರಾಮೀಣ ವಿದ್ಯುತ್ ಸಹಕಾರಿ ಸಂಘ ನಿ., ಹುಕ್ಕೇರಿ

ಹುಕ್ಕೇರಿ ಗ್ರಾಮೀಣ ವಿದ್ಯುತ್ ಸಹಕಾರಿ ಸಂಘವು ಭಾರತ ದೇಶದಲ್ಲಿ ಪ್ರಥಮ ಮತ್ತು ಕರ್ನಾಟಕ ರಾಜ್ಯದಲ್ಲಿ ಏಕೈಕ ವಿದ್ಯುತ್ ಸಹಕಾರಿ ಸಂಘವಾಗಿರುತ್ತದೆ. ಈ ಸಂಘವು ಕರ್ನಾಟಕ ಸಹಕಾರಿ ಸಂಘಗಳ ಕಾಯ್ದೆ 1959ರಡಿ ದಿನಾಂಕ:21.07.1969ರಂದು ಗ್ರಾಮೀಣ ವಿದ್ಯುತ್ ಮಹಾಮಂಡಳ ಹೊಸದಿಲ್ಲಿ ಇವರಿಂದ ಸ್ಥಾಪಿಸಲ್ಪಟ್ಟ 5 ಪ್ರಾಯೋಗಿಕ ಸಹಕಾರಿ ವಿದ್ಯುತ್ ಸಂಘಗಳಲ್ಲಿ ಒಂದು. ಭಾರತ ಸರಕಾರದ ನಿರ್ಧಾರದ ಮೇಲೆ ಯುನೈಟೆಡ ಸ್ಟೇಟ್ಸ್ ಏಜನ್ಸಿ ಫಾರಂ ಇಂಟರನ್ಯಾಶನಲ್ ಡೆವಲಪಮೆಂಟ (USAID) ಇದರ ಪ್ರಾಯೋಜತ್ವದಿಂದ ನ್ಯಾಶನಲ್ ರೂರಲ್ ಇಲೆಕ್ಟ್ರಿಕ್ ಕೊ-ಆಫ್ ಅಸೋಷಿಯೇಶನ್ ಅಮೇರಿಕಾ (NRCEA) ಇದರ ಸಂಯೋಗದಿಂದ ಸ್ಥಾಪಿಸಲ್ಪಟ್ಟಿದೆ. ಸಂಘದ ಕಾರ್ಯಕ್ರೇತ್ರದವ್ಯಾಪ್ತಿಯು ಹುಕ್ಕೇರಿ ತಾಲೂಕು ಮತ್ತು ಬೆಳಗಾವಿ ತಾಲೂಕಿನ ಸುತ್ತಗಟ್ಟ ಗ್ರಾಮಗಳಿಗೆ ಕೂಡಿಕೊಂಡು ಸೀಮಿತವಾಗಿರುತ್ತದೆ. ಈ ಸಂಘವು ವಿದ್ಯುತ್ ವಿತರಣೆಗೆಗಾಗಿ 40 ವರ್ಷಗಳ ಲೈಸೆನ್ಸ್ ಪಡೆದಿದ್ದು ಕರ್ನಾಟಕ ವಿದ್ಯುತ್ ಸುಧಾರಣೆ ಕಾಯ್ದೆ 1999ರ ಮೇರೆಗೆ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದಿಂದ ಅಕ್ಟೋಬರ್ 2001ರಲ್ಲಿ ಪಡೆದ 5 ವರ್ಷಗಳ ಲೈಸನ್ಸ್ ಅವಧಿ ಪೂರ್ಣಗೊಂಡ ಬಳಿಕ ಆಯೋಗವು ಅಕ್ಟೋಬರ್ 2006 ರಿಂದ 25 ವರ್ಷಗಳ ಲೈಸನ್ಸ್‌ನ್ನು ಸಂಘಕ್ಕೆ ನೀಡಿದೆ.

ಗ್ರಾಮೀಣ ಭಾಗದಲ್ಲಿ ಜನರಿಗೆ ಸಹಕಾರಿ ತತ್ವಗಳ ಅಡಿ ಸಹಕಾರಿ ಸಂಸ್ಥೆಗಳಿಂದ ಕಡಿಮೆ ದರಗಳಲ್ಲಿ ವಿದ್ಯುತ್ ಸರಬರಾಜು ವ್ಯವಸ್ಥೆಯನ್ನು ಉತ್ತಮವಾಗಿ ಅಳವಡಿಸಲು ಭಾರತ ಸರಕಾರ ಹೊಂದಿದ ಧ್ಯೇಯದ ಅನ್ವಯ ಈ ಸಂಘವು ಸದರಿ ಧ್ಯೆಯವನ್ನು ಸಫಲಗೊಳಿಸಲು ಅನೇಕ ಉದ್ದೇಶಗಳನ್ನು ಹೊಂದಿ ಕಾರ್ಯನಿರ್ವಹಿಸುತ್ತಿದೆ. ಸಂಘವು ತನ್ನ ಕಾರ್ಯಕ್ಷೇತ್ರದಲ್ಲಿ ವಾಸಿಸುವ ಎಲ್ಲ ನಾಗರಿಕರಿಗೆ, ಉದ್ಯಮಿಗಳಿಗೆ, ವ್ಯಾಪಾರ ಸಂಸ್ಥೆಗಳಿಗೆ, ಸಂಘಸಂಸ್ಥೆಗಳಿಗೆ ಯೋಗ್ಯ ದರದಲ್ಲಿ ನಿಯಮಿತವಾಗಿ ವಿದ್ಯುತ ಪೂರೈಸುವುದು ಈ ಉದ್ದೇಶವನ್ನು ಸಾಧಿಸಲು ಕರ್ನಾಟಕ ವಿದ್ಯುತ ಶಕ್ತಿ ಮಂಡಳದಿಂದ ವಿದ್ಯುತನ್ನು ಯೋಗ್ಯ ದರದಲ್ಲಿ ಪಡೆಯುವುದು, ಸಂಘದ ಕಾರ್ಯಕ್ಷೇತ್ರದಲ್ಲಿ ವಿದ್ಯತ್ ಶಕ್ತಿಯನ್ನು ಒದಗಿಸಲು



ಕೇಬಲ, ವೈರ ಲೈನಗಳು, ಜೊಡಿಸುವ, ಇರಿಸುವ ವ್ಯವಸ್ಥೆಯನ್ನು ಕನಿಷ್ಟ ವೆಚ್ಚದಲ್ಲಿ ಅಳವಡಿಸುವುದು, ರೈತರಿಗೆ ಒಕ್ಕಲುತನ ಹುಟ್ಟುವಳಿಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಪಡೆಯಲು ನೀರಾವರಿ ಪಂಪಸೇಟಗಳನ್ನು ಕೂಡಿಸಲು, ರೈತರು ಹೊಂದಿದ ನೀರಿನ ಬಾವಿಗಳಿಂದ ನೀರು ಎತ್ತಲು, ನದಿಯ ಪಕ್ಕದಲ್ಲಿ ನಿರ್ಮಿಸಿದ ದೊಡ್ಡ ದೊಡ್ಡ ನೀರಿನ ಟ್ಯಾಂಕುಗಳಿಂದ ರೈತರ ಜಮೀನುಗಳಿಗೆ ನೀರು ಪೂರೈಸಲು ವಿದ್ಯುತ ಸರಬರಾಜು ಮಾಡುವುದರೊಂದಿಗೆ ಇತರ ಎಲ್ಲ ವ್ಯವಸ್ಥೆಗಳನ್ನು ಮಾಡಿಕೊಳ್ಳುವುದು, ತಾಲೂಕಿನಲ್ಲಿ ಉದ್ಯೋಗ, ವಾಣಿಜ್ಯ ಕೇಂದ್ರ ಹಾಗೂ ಉದ್ಯಮೆಗಳನ್ನು ಸ್ಥಾಪಿಸಲು, ಬೆಳೆಸಲು ಔದ್ಯಮಿಕ ಚಟುವಟಿಕೆಗಳನ್ನು ಉತ್ತೇಜಿಸಲು ಹೆಚ್ಚಿನ ಶಕ್ತಿಯ ವಿದ್ಯುತ್ ಪೂರೈಕೆ, ಸದಸ್ಯರಿಗೆ ವಿದ್ಯುತ ಪೂರೈಸಲು ಬೇಕಾಗುವ ಸಲಕರಣೆಗಳಾದ ವಿದ್ಯುತ ಕಂಬ, ಟ್ರಾನ್ಸಫಾರ್ಮರ್ ಹಾಗೂ ಇತರ ಉಪಕರಣಗಳನ್ನು ಕಡಿಮೆ ವೆಚ್ಚದಲ್ಲಿ ತಯಾರಿಸಿ ಸದಸ್ಯರಿಗೆ ಅವರ ಅವಶ್ಯಕತೆ ಅನುಸಾರ ಪೂರೈಸುವುದು, ಸದಸ್ಯರಲ್ಲಿ ಸ್ವಯಂ ಸಹಾಯ, ಸಾಮೂಹಿಕ ರೀತಿಯಲ್ಲಿ ಸಹಾಯ ಪದ್ಧತಿಯನ್ನು ಅಳವಡಿಸಿ ಅದನ್ನು ಉತ್ತೇಜಿಸುವುದು, ಹಾಗೂ ವಿದ್ಯುತ ಶಕ್ತಿಯ ಬಳಕೆಯ ಬೇರೆ ವಿಧಾನಗಳ ಬಗ್ಗೆ ವಿವರಗಳನ್ನು ಸದಸ್ಯರಿಗೆ ಒದಗಿಸುವುದು ಸೇರಿದಂತೆ ಅನೇಕ ಉದ್ದೇಶವನ್ನು ಹೊಂದಿದೆ.


ಸಂಘದ ಕಾರ್ಯಕ್ಷೇತ್ರದಲ್ಲಿ ವಾಸಿಸುವ ಹಾಗೂ ವಿದ್ಯುತ್ ಬಳಕೆಯ ಅವಶ್ಯಕತೆ ಇರುವ ವ್ಯಕ್ತಿಯು ಭಾರತಿಯ ಕರಾರೂ ಒಪ್ಪಂದ ಕಾಯ್ದೆ 1872 (Indian Contract act 1872) ರ ಕೆಳಗೆ ಆರ್ಹತೆಯುಳ್ಳ ವ್ಯಕ್ತಿಯು ಸಂಘಕ್ಕೆ ಉಪನಿಯಮಗಳ ಪ್ರಕಾರ ಪ್ರಾರಂಭಿಕ ಶೇರುಗಳನ್ನು ಪಡೆದು ಅರ್ಜಿ ಸಲ್ಲಿಸುವದರೊಂದಿದೆ ಸದಸ್ಯನಾಗಲು ಅವಕಾಶವಿದೆ. ಆರ್ಹ ವ್ಯಕ್ತಿಗಳು ಪಾಲುದಾರ ಸಂಸ್ಥೆಗಳು, ಸಂಘಗಳ ನೊಂದಣಿ ಕಾಯ್ದೆ ಕೆಳಗೆ ನೊಂದಣಿಗೊಂಡ ಸಂಸ್ಥೆಗಳು, ಸಹಕಾರ ಸಂಘಗಳು, ಇತರ ಸಂಘ ಸಂಸ್ಥೆಗಳು ಟ್ರಸ್ತ್ರಗಳು, ಶಾಲಾ–ಕಾಲೇಜುಗಳು, ನಗರ ಪಾಲಿಕೆಗಳು, ಪಂಚಾಯಿತಗಳು, ಸ್ಥಾನಿಕ ಸಂಸ್ಥೆಗಳು, ಕೇಂದ್ರ ಹಾಗೂ ರಾಜ್ಯ ಸರಕಾರಗಳು ಸದಸ್ಯತ್ವ ಪಡೆಯಲು ಅವಕಾಶ ಇದೆ. ಸಂಘವು 31–03–2011ಕ್ಕೆ ರೂ. 367.42ಲಕ್ಷಗಳಷ್ಟು ಶೇರು ಬಂಡವಾಳ ಹೊಂದಿದ್ದು ಅದರಲ್ಲಿ ಸರಕಾರದ ಶೇರು ಬಂಡವಾಳು ರೂ. 41.70 ಹಾಗೂ ಸದಸ್ಯರ ಶೇರು ರೂ. 325.72 ಲಕ್ಷಗಳು ಇರುತ್ತದೆ. ಗ್ರಾಮೀಣ ವಿದ್ಯುದ್ದೀಕರಣ ನಿಗಮ ಹೊಸದಿಲ್ಲಿ ಇವರಿಂದ ಪಡದ ಯೋಜನಾ ಸಾಲ, ಸರಕಾರದ ಶೇರ ಹಣ, ಹಾಗೂ ಗ್ರಾಹಕರ ಠೇವುಗಳು ಇವೆಲ್ಲ ಸಂಘದ ಹಣಕಾಸಿನ ಮೂಲಗಳಾಗಿವೆ. ಗ್ರಾಮೀಣ ವಿದ್ಯುದ್ದೀಕರಣ ನಿಗಮವು ಸಂಘಕ್ಕೆ ರೂ.283.40 ಲಕ್ಷಗಳ ಯೋಜನಾ ಸಾಲವನ್ನು ನೀಡಿರುತ್ತದೆ. ಸಂಘವು ಆರ್.ಇ.ಸಿ ಯಿಂದ ಪಡೆದ ಯೋಜನಾ ಸಾಲದಿಂದ ಹುಕ್ಕೇರಿ ತಾಲೂಕಿನಲ್ಲಿ ಇದ್ದ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿ (ಕೆ.ಇ.ಬಿ)ಯವರ ಆಸ್ತಿಯನ್ನು ರೂ.40 ಲಕ್ಷಕ್ಕೆ ಖರೀದಿಸಿತ್ತು. ಈಗ ಸಂಘವು ರೂ.33 ಕೋಟಿಗಳಷ್ಟು ಆಸ್ತಿಯನ್ನು ಹೊಂದಿರುತ್ತದೆ.

ಸಂಘವು ಸಹಕಾರ ಕ್ಷೇತ್ರದಲ್ಲಿ ಯೋಗ್ಯ ದರಗಳಲ್ಲಿ ವಿದ್ಯುತ್ ಶಕ್ತಿ ಸರಬರಾಜು ಮಾಡುವ ಸಹಕಾರಿ ಸಂಸ್ಥೆಯಾಗಿದ್ದು ಲಾಭ ಮಾಡುವುದು ಅದರ ಧ್ಯೇಯವಾಗಿರುವುದಿಲ್ಲ ಸಂಘವು ಕರ್ನಾಟಕ ವಿದ್ಯುತ್ ರೆಗ್ಯುಲೇಟರಿ ಕಮೀಷನ್ ಬೆಂಗಳೂರು ಇವರು ನಿಗದಿ ಪಡಿಸಿದ ಪ್ರಕಾರ ವಿದ್ಯುತ್ ಶಕ್ತಿಯನ್ನು ಕೆ.ಪಿ.ಟಿ.ಸಿ.ಎಲ್/ಹೆಸ್ಕಂದಿಂದ ಖರೀದಿಸುತ್ತಿದ್ದು ಹಾಗೂ ಕರ್ನಾಟಕ ವಿದ್ಯುತ್ ರೆಗ್ಯುಲೇಟರಿ ಕಮೀಷನ್ ಬೆಂಗಳೂರು ಇವರು ಗ್ರಾಹಕರಿಗೆ ಮಾರಾಟ ಮಾಡಲು ನಿಗದಿಪಡಿಸಿದ ವಿದ್ಯುತ್ ಶಕ್ತಿ ದರಗಳ ಪ್ರಕಾರ ವಿದ್ಯುತ್ ಶಕ್ತಿಯನ್ನು ಮಾರಾಟ ಮಾಡುತ್ತಿರುತ್ತದೆ. ಸರ್ಕಾರವು ಮೇಲಿಂದ ಮೇಲೆ ಹೊರಡಿಸಿದ ಆದೇಶದ ಪ್ರಕಾರ ರೈತರಿಗೆ ಪಂಪಸೆಟಗಳಿಗೆ ಉಚಿತವಾಗಿ ವಿದ್ಯುತ್ ಶಕ್ತಿಯನ್ನು ಸಂಘವು ಪೂರೈಸಿದೆ. ಉತ್ತಮ, ನಿಯಮಿತ ಹಾಗೂ ತ್ವರಿತ ಸೇವೆ ಒದಗಿಸುವುದು ಹಾಗೂ ಯೋಗ್ಯ ದರದಲ್ಲಿ ವಿದ್ಯುತ್ ಶಕ್ತಿಯನ್ನು ಮಾರಾಟ ಮಾಡುವುದು ಸಂಘದ ಧ್ಯೇಯವಾಗಿರುತ್ತದೆ.

ಸಂಘವು ತಾನು ವಹಿಸಿಕೊಂಡ ವಿದ್ಯುತ್ ಸರಬರಾಜು ಕೆಲಸವನ್ನು ಕೈಕೊಳ್ಳಲು ತನ್ನ ಕಾರ್ಯಕ್ಷೇತ್ರವನ್ನು ಐದು ಭಾಗಗಳಲ್ಲಿ ವಿಂಗಡಿಸಿದೆ. ಹುಕ್ಕೇರಿ ಪೂರ್ವ, ಹುಕ್ಕೇರಿ ಪಶ್ಚಿಮ, ಸಂಕೇಶ್ವರ, ಯಮಕನಮರಡಿ, ಹಿಡಕಲ ಡ್ಯಾಮ್ ವಿಭಾಗಗಳಿದ್ದು ಪ್ರತಿಯೊಂದು ವಿಭಾಗಕ್ಕೆ ಒಬ್ಬ ಇಂಜಿನಿಯರ್ ಹಾಗೂ ಅವಶ್ಯಕತೆ ಇದ್ದಷ್ಟು ಲೈನಮ್ಯಾನ ಹಾಗೂ ಇತರೆ ಸಿಬ್ಬಂದಿಗಳನ್ನು ಒದಗಿಸಲಾಗಿದೆ. ಸಂಘವು ಹೊಂದಿದ ಒಟ್ಟಾರೆ ವಿದ್ಯುತ್ ಜೋಡಣೆಗಳ ಆಧಾರದ ಮೇಲೆ ಸದ್ಯದ ಕನೆಕ್ಟೆಡ್ ಲೋಡ 132 ಎಂವಿಎ ಗಳಿಷ್ಟಿದೆ. ಈ ಬೇಡಿಕೆಯನ್ನು ಪೂರೈಸಲು ವಿದ್ಯುತ್ ವಿತರಣಾ ಕೇಂದ್ರಗಳನ್ನು ಹೊಂದಲಾಗಿದೆ. ಸಂಘವು 107 ಗ್ರಾಮಗಳು, 15 ಉಪಗ್ರಾಮಗಳು ಮತ್ತು 14 ಪುನವರ್ತಿಕೇಂದ್ರಗಳಿಗೆ ವಿದ್ಯುತ್ ಪೂರೈಕೆ ಮಾಡುತ್ತಿದೆ.

ಸಂಘವು ಸನ್ 1995 ರಿಂದ ಸಂಘದಲ್ಲಿ ಸ್ವಂತವಾಗಿ ಒಳ್ಳೆಯ ಗುಣಮಟ್ಟದ 100 ಕೆವಿಎ ಹಾಗೂ 63 ಕೆವಿಎ ಟ್ರಾನ್ಸಫಾರ್ಮರಗಳನ್ನು ಕನಿಷ್ಠ ವೆಚ್ಚದಲ್ಲಿ ತಯಾರಿಸುತ್ತಿದೆ. ಸದ್ಯಕ್ಕೆ ಸಂಘವು ತಿಂಗಳಿಗೆ ಸುಮಾರು 100 ಟ್ರಾನ್ಸಫಾರ್ಮರಗಳನ್ನು ರಿಪೇರಿ ಮಾಡಿಕೊಡುವ ಸಾಮರ್ಥ್ಯವನ್ನು ಹೊಂದಿದೆ. ಸನ್ 2008–09ರಲ್ಲಿ ಹೆಸ್ಕಾಂದ ಸುಮಾರ 500 ಟ್ರಾನ್ಸಫಾರ್ಮರಗಳನ್ನು ಸಂಘದಿಂದ ರಿಪೇರಿ ಮಾಡಿಕೊಡಲಾಗಿದೆ. ಇದಲ್ಲದೆ ಸನ್ 1996ರಲ್ಲಿ ಸಂಘದಲ್ಲಿ ಶ್ರೀ ಅಪ್ಪಣಗೌಡ ಪಾಟೀಲ್ ಸಿಮೆಂಟ ಕಂಬ ತಯಾರಿಕಾ ಘಟಕವನ್ನು ಸ್ಥಾಪಿಸಲಾಗಿದೆ. ಇದರಲ್ಲಿ ಒಂದೇ ಬಾರಿಗೆ 32 ಕಂಬಗಳನ್ನು ತಯಾರಿಸಲಾಗುತ್ತಿದ್ದು ಸಂಘವು 2008ರಲ್ಲಿ ಕಂಬ ತಯಾರಿಕಾ ಘಟಕವನ್ನು ವಿಸ್ತರಿಸಿ 8 ಮೀಟರ್, 9 ಮೀಟರ್ ಆರ್.ಸಿ.ಸಿ, 8 ಮೀಟರ್ ಪಿ.ಸಿ.ಸಿ/ಪಿ.ಎಸ್.ಸಿ ಕಂಬಗಳನ್ನು ತಯಾರಿಸುತ್ತಿದ್ದು ಪ್ರತಿ ದಿವಸ ಸುಮಾರು 96 ಸಿಮೆಂಟ ಕಂಬಗಳನ್ನು ತಯಾರಿಸುವ ಸಾಮರ್ಥ್ಯ ಹೊಂದಿದೆ.

ರಾಜೀವ ಗಾಂಧಿ ಗ್ರಾಮೀಣ ವಿದ್ಯುದ್ಧೀಕರಣ ಯೋಜನೆಯನ್ನು ಸಂಘಕ್ಕೆ ಮಂಜೂರಾಗಿದ್ದು ಈ ಯೋಜನೆಯು ಈಗ ಅನುಷ್ಠಾನದಲ್ಲಿರುತ್ತದೆ. ಇದು ಬಡತನ ರೇಖೆಗಿಂತ ಕೆಳಗಿರುವ ಫಲಾನುಭವಿಗಳಿಗೆ ಉಚಿತ ವಿದ್ಯುತ್ ಸಂಪರ್ಕ ಕಲ್ಪಿಸುವ ಯೋಜನೆಯಾಗಿದೆ. ಈ ಯೋಜನೆಯಡಿಯಲ್ಲಿ ಸಂಘದ ಕಾರ್ಯಕ್ಷೇತ್ರದಲ್ಲಿ ಬಡತನ ರೇಖೇಗಿಂತ



ಕೆಳಗಿರುವ 14074 ಫಲಾನುಭವಿಗಳಿಗೆ ಉಚಿತ ವಿದ್ಯುತ್ ಸಂಪರ್ಕ ಒದಗಲಿದೆ. ಸದರಿ ಯೋಜನೆಯನ್ನು ಸಂಘವು 12 ತಿಂಗಳಲ್ಲಿ ಪೂರ್ತಿಗೊಳಿಸುವ ಕಾರ್ಯಯೋಜನೆ ಹಾಕಿಕೊಂಡಿರುತ್ತದೆ. ಇದಲ್ಲದೆ, ಸರಕಾರವು ಗ್ರಾಮೀಣ ಭಾಗದ ಜನರಿಗೆ ಅವರ ಅನುಕೂಲಕ್ಕಾಗಿ ನಿರಂತರ ಜ್ಯೋತಿ ವಿದ್ಯುತ್ ಯೋಜನೆಯನ್ನು ಜಾರಿಮಾಡಿದನ್ನು ಸಂಘವು ತನ್ನ ಕಾರ್ಯದಲ್ಲಿ ಅಳವಡಿಸಿಕೊಂಡಿದೆ. ನಿರಂತರ ವಿದ್ಯುತ್ ಯೋಜನೆಯಡಿಯಲ್ಲಿ ಗ್ರಾಮೀಣ ಭಾಗಗಳಿಗೆ ಪಂಪಸೆಟ್ಟ ವಿದ್ಯುತ್ ಜೋಡಣೆ ಹೊರತು ಪಡಿಸಿ ಇನ್ನೂಳಿದ ವಿದ್ಯುತ್ ಜೋಡಣೆಗಳಿಗೆ ವಿದ್ಯುತ್ ಸರಬುರಾಜು ಮಾಡುವದರಿಂದ ಗ್ರಾಮೀಣ ಭಾಗದ ಗ್ರಾಹಕರಿಗೆ ಒಳ್ಳೆಯ ಗುಣಮಟ್ಟದ ವಿದ್ಯುತ್ತನ್ನು ಒದಗಿಸಲು ಅನುಕೂಲವಾಗುತ್ತದೆ. ಇದರಿಂದ ಗ್ರಾಮೀಣ ವಿದ್ಯಾರ್ಥಿಗಳ ವಿದ್ಯಾಭ್ಯಾಸ, ಗ್ರಾಮೀಣ ಕೈಗಾರಿಕೆ, ಕುಡಿಯುವ ನೀರು ಸರಬರಾಜು ಯೋಜನೆಗಳಿಗೆ 24 ಗಂಟೆಗಳ ನಿರಂತರ ವಿದ್ಯುತ ಪೂರೈಕೆ ಹಾಗೂ ನೀರಾವರಿ ಪಂಪಸೆಟ್ಟ ಜೋಡಣೆಗಳ ವಿದ್ಯುತ್ ನಿಯಂತ್ರಣಗೊಳಿಸಲು ಸಾಧ್ಯವಾಗುತ್ತದೆ.

31–03–2011ಕ್ಕೆ ಸಂಘದ ಬಿಲ್ಲ ವಸೂಲಿಯ ಪ್ರಮಾಣವು ವಿದ್ಯುತ್ ಶಕ್ತಿ ಪೂರೈಸಿದ ಒಟ್ಟು ಬಿಲ್ಲ್ ರಕ್ಕಮಿಗೆ ಶೇ.81ರಷ್ಟಿರುತ್ತದೆ. ನಿರ್ದೇಶಕ ಮಂಡಳಿಯ ಸಲಹೆ ಸೂಚನೆಗಳಂತೆ ಮ್ಯಾನೇಜಿಂಗ್ ಡೈರೆಕ್ಟರು, ರೆಸಿಡೆಂಟ್ ಇಂಜಿನಿಯರು ಹಾಗೂ ಇತರ ಅಧಿಕಾರಗಳಿಂದ ಅವಿರತ, ಪ್ರಮಾಣಿಕ ಸೇವೆಯ ಫಲದಿಂದಾಗಿ ಹಾಗೂ ಎಲ್ಲಾ ನೌಕರರ ದಕ್ಷ ಮತ್ತು ಸೇವಾ ಮನೋಭವನೆಯಿಂದಾಗಿ ಸಂಘವು ಗ್ರಾಮೀಣ ಮಟ್ಟದಲ್ಲಿ ವಿದ್ಯುತ್ ಪೂರೈಕೆಯ ಮಹತ್ವದ ಕಾರ್ಯವನ್ನು ಉತ್ತಮವಾಗಿ ಜರುಗಿಸುತ್ತಿದ್ದು ಗ್ರಾಹಕರಿಗೆ ಸಮಧಾನಕರ ಸೇವೆಯನ್ನು ಸಲ್ಲಿಸುತ್ತಿದೆ. ದೊಡ್ಡ ಗ್ರಾಹಕರ ಗಾತ್ರದ ಸಂಘವು ಪ್ರತಿಯೊಬ್ಬ ಗ್ರಾಹಕರಿಗೂ ಅವರ ಆಶೋತ್ತರಗಳ ಪ್ರಕಾರ ಉತ್ತಮ ಸೇವೆಯನ್ನು ಹಾಗೂ ವಿದ್ಯುತ ಶಕ್ತಿ ಪೂರೈಕೆಯನ್ನು ನಿರಂತರವಾಗಿ ಮಾಡುವುದು ಸಹಕಾರಿ ಕ್ಷೇತ್ರದಲ್ಲಿಯ ಸಂಸ್ಥೆಗೆ ಶ್ರಮದಾಯಕ ಹಾಗೂ ಕಠಿಣಕರವಾದ ಕೆಲಸವಾಗಿದ್ದರೂ ಸದರೀ ಕೆಲಸವನ್ನು ಈ ಸಂಘವು ಅದೊಂದು ಸವಾಲು ಎಂದು ಸ್ವೀಕರಿಸಿ ಕಾರ್ಯನಿರ್ವಹಿಸುತ್ತಿರುವುದು ಅಚ್ಚರಿಯಾಗಿದೆ ಹಾಗೂ ಬಹಳ ಸಂತಸದ ಮತ್ತು ಹೆಮ್ಮೆಯ ವಿಷಯವಾಗಿದೆ.

ಸಂಪರ್ಕ ವಿವರ: ಹುಕ್ಕೇರಿ ಗ್ರಾಮೀಣ ವಿದ್ಯುತ್ ಸಹಕಾರಿ ಸಂಘ ನಿ., ಹುಕ್ಕೇರಿ, ಬೆಳಗಾವಿ ಜಿಲ್ಲೆ.



## ಶ್ರೀ ಗಾಡಗೆಬಾಬಾ(ವಾ) ಕೊ-ಆಪ್ ಕ್ರೇಡಿಟ್ ಸೊಸಾಯಿಟಿ ಅ, ಬೆಳಗಾವಿ.

ಗಾಡಗೆಬಾಬಾ ವಾಷರ್‌ಮನ್ ಕ್ರೆಡಿಟ್ ಕೋ-ಆಪರೇಟೀವ್ ಸೊಸೈಟಿಯು ದಿನಾಂಕ: 20.03.2006ರಂದು ಕರ್ನಾಟಕ ಸಹಕಾರ ಸಂಘಗಳ ಕಾನೂನು 1959ರ ಅಡಿ ನೋಂದಣಿ ಹೊಂದಿ 25.04.2006 ರಂದು ತನ್ನ ಕಾರ್ಯವನ್ನು ಪ್ರಾರಂಭಿಸಿರುತ್ತದೆ. ಅಗಸರ(ಡೊಭಿ) ಸಮಾಜವು ಆರ್ಥಿಕವಾಗಿ, ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಹಿಂದುಳಿದ ಸಮಾಜವಾಗಿದ್ದು ಅದು ಬಹಳಷ್ಟು ಶೋಷಣೆಗೆ ಒಳಪಟ್ಟಿರುತ್ತದೆ. ಈ ಸಮಾಜದ ಹಾಗೂ ಇತರರ ಆರ್ಥಿಕ ಉನ್ನತಿಗಾಗಿ ಸದರಿ ಸಮಾಜದ ಜನರು ಒಟ್ಟುಗೂಡಿ ಈ ಸಂಘವನ್ನು ಪ್ರಾರಂಭಿಸಿರುತ್ತಾರೆ.

ಸಂಘದ ಸದಸ್ಯರುಗಳಲ್ಲಿ ಆರ್ಥಿಕ ಹಿತಾಶಕ್ತಿಗಳನ್ನು ವೃದ್ಧಿಸುವದು, ಮತ್ತು ಮಿತವ್ಯಯ, ಉಳಿತಾಯ ಹಾಗೂ ಪರಸ್ಪರ ಸಹಾಯಕ್ಕೆ ಉತ್ತೇಜನ ನೀಡುವದು, ಸದಸ್ಯರ ಆರ್ಥಿಕ ಉನ್ನತಿಗಾಗಿ ಹಣಕಾಸು ಪೂರೈಕೆಯ ಯೋಜನೆಯನ್ವಯ ಹಾಗೂ ಉಪನಿಯಮಗಳಲ್ಲಿ ತಿಳಿಸಿದ ಪ್ರಕಾರ ನಿಧಿಯನ್ನು ಸಂಗ್ರಹಿಸುವುದು, ಸಂಘದ ಸದಸ್ಯರಿಗೆ ಸಾಲಗಳನ್ನು ಪೂರೈಸುವ ವ್ಯವಹಾರವನ್ನು ಮಾಡುವದು, ಸದಸ್ಯರಿಗೆ ಆರ್ಥಿಕ ಕೃಷಿ ಆಧಾರಿತ ಉದ್ದಿಮೆಗೆ ಮತ್ತು ಇಂತಹ ವ್ಯವಹಾರವನ್ನು ಮಾಡಲು ಹಣಕಾಸನ್ನು ಪೂರೈಸುವದು, ಸಮಾಜದಲ್ಲಿ ದುರ್ಬಲವಾಗಿರುವ ಜನಾಂಗದವರನ್ನು ಅಭಿವೃದ್ಧಿಪಡಿಸುವ ಯೋಜನೆಗಳನ್ನು ರೂಪಿಸುವದು, ಸ್ವ ಉದ್ಯೋಗಸ್ಥರಿಗೆ ಸ್ವಂತ ಉದ್ದಿಮೆ ಸ್ಥಾಪಿಸಿಕೊಳ್ಳಲು ಹಣಕಾಸಿನ ಮತ್ತು ತಾಂತ್ರಿಕ ಸಹಾಯವನ್ನು ಮಾಡುವದು ಮುಂತಾದವುಗಳು ಈ ಸಂಘದ ಉದ್ದೇಶವಾಗಿರುತ್ತದೆ.

ಸಂಘವು ಒಟ್ಟು 869 ಸದಸ್ಯರನ್ನು ಹೊಂದಿದೆ. ಸಂಘದಲ್ಲಿಯ ಆಡಳಿತ ಮಂಡಳಿಯಲ್ಲಿ 9 ಜನ ನಿರ್ದೇಶಕರು ಇದ್ದು ಸಂಘಕ್ಕೆ ಶ್ರೀ ವಿಜಯ ಎಂ. ಬಾಂಡೇಕರ್ ಇವರು ಅಧ್ಯಕ್ಷರಾಗಿ ಹಾಗೂ ಶ್ರೀ ಜ್ಯೋತಿಬಾ ಬಿ. ಉಪ್ಪರಡೇಕರ್ ಇವರು ಉಪಾಧ್ಯಕ್ಷರಾಗಿ ಆಯ್ಕೆಯಾಗಿ ಸದರಿ ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಸಂಘದಲ್ಲಿ 5 ಜನ ನೌಕರರು ಕೆಲಸ ಮಾಡುತ್ತಿದ್ದು ಬ್ಯಾಂಕಿನಲ್ಲಿ ಸೇವೆ ಮಾಡಿ ಅನುಭವ ಪಡೆದ ಶ್ರೀ ಪಿ.ಎಸ್.ಪರಮಾಜ ಎಂಬುವರು ಮ್ಯಾನೇಜರಾಗಿ ಉತ್ತಮವಾಗಿ

ಕಾರ್ಯನಿರ್ವಹಿಸುತ್ತಿದ್ದಾರೆ. 31-03-2011ರವರೆಗೆ ಸರಕಾರ ಲೆಕ್ಕ ತಪಾಸಣೆಯು ಮುಗಿದ್ದು ಸಂಘಕ್ಕೆ "ಬ" ಆಡಿಟ ವರ್ಗ ಲಭಿಸಿದೆ. ಸಂಘವು ಪ್ರತಿವರ್ಷ ಬಡ ಹಾಗೂ ಬುದ್ದಿವಂತ ಮಕ್ಕಳಿಗೆ ಶಾಲಾ ನೋಟ ಬುಕ್ಕನ್ನು ವಿತರಿಸುತ್ತಿದೆ. ಸಂಘವು ಅನೇಕ ವಿಧದ ಠೇವುಗಳನ್ನು ಸಂಗ್ರಹಿಸುತ್ತಿದ್ದು ಗರಿಷ್ಠ 11 ಪ್ರತಿಶತದವರೆಗೆ ಬಡ್ಡಿಯನ್ನು ಠೇವುದಾರರಿಗೆ ನೀಡುತ್ತಿದೆ. ಸಂಘವು ಹೆಚ್ಚಿನ ಪ್ರಮಾಣದ ಢೇವು ಸಂಗ್ರಹಣೆಗಾಗಿ "ಗೋಲ್ಡ್ ಧಮಾಕಾ" ಉಳಿತಾಯ ಯೋಜನೆಯನ್ನು ಪ್ರಾರಂಭಿಸಿದ್ದು ಸದರಿ ಯೋಜನೆಯಲ್ಲಿ ಹೆಚ್ಚು ಠೇವುಗಳನ್ನು ಸಂಘಕ್ಕೆ ನೀಡಿದ ಠೇವುದಾರರಿಗೆ ಬಂಗಾರದ ವಸ್ತುಗಳನ್ನು ಕೊಡಲಾಗಿದೆ. ಸಂಘವು ವ್ಯಾಪಾರಸ್ಥರಿಗೆ, ಕುಲಿಕಾರರಿಗೆ, ಚಿಕ್ಕ ಉದ್ದಿಮೆಗಳಿಗೆ ಸಾಲ ಸೌಲಭ್ಯಗಳನ್ನು ಒದಗಿಸುತ್ತಿದೆ ಮಕ್ಕಳ ಶಿಕ್ಷಣ, ಗೃಹ ರಿಪೇರಿ, ವಾಹನಗಳ ಖರೀದಿ, ಬಳಕೆ ಉದ್ದೇಶಕ್ಕಾಗಿ, ವ್ಯಾಪಾರ ಉದ್ದಿಮೆಗಳಿಗ ಬೇರೆ ಬೇರೆ ತರಹದ ಸಾಲಗಳನ್ನು ಮಂಜೂರು ಮಾಡಿದೆ.



ಸಂಘವು ಉತ್ತಮ ಜನ ಸಾಮಾನ್ಯರ ನೇತೃತ್ವದ ಆಡಳಿತ ಹೊಂದಿದ್ದು ಸಹಕಾರಿ ಕ್ಷೇತ್ರದಲ್ಲಿ ಅನುಭವಿಕ ವ್ಯಕ್ತಿಯ ವ್ಯವಸ್ಥಾಪಕರು ಸಂಘದ ಸೇವೆಯಲ್ಲಿ ಕಾರ್ಯನಿರುತರಾಗಿದ್ದಾರೆ. ನೌಕರರು ಸೌಜನ್ಯಶೀಲರಾಗಿದ್ದು ಉತ್ತಮವಾಗಿ ಕಾರ್ಯನಿವಹಿಸುತ್ತಿದ್ದಾರೆ. ಸಂಸ್ಥೆಯ ಠೇವಿದಾರರು ಸಹ ಸಂಸ್ಥೆಯ ಬೆಳವಣಿಗೆ ಸಹಾಯಕರಾಗಿದ್ದಾರೆ. ಸಂಘವು ಅಲ್ಪ ಸಂಖ್ಯಾತರ ಸಮಾಜದಲ್ಲಿ ಹುಟ್ಟಿ ಬೆಳೆಯುತ್ತಿದ್ದು ಸಮುದಾಯದ ನೇತೃತ್ವದಲ್ಲಿ ಕಾರ್ಯನಿರ್ವಹಿಸುತ್ತಿದೆ. ಸಂಘದ ನೌಕರರಿಗೆ ತರಬೇತಿ ಹಾಗೂ ಶಿಕ್ಷಣವನ್ನು ನೀಡುವುದರ ಮೂಲಕ ಹಾಗೂ ಸಂಘಕ್ಕೆ ಹೆಚ್ಚಿನ ಪ್ರಚಾರ ಹಾಗೂ ಜಾಹೀರಾತನ್ನು ಒದಗಿಸುವುದರ ಮೂಲಕ ಅಭಿವೃದ್ಧಿಯೆಡೆಗೆ ಗಮನಹರಿಸುವ ಅಗತ್ಯವಿದೆ. ಆಧುನಿಕ ಕ್ಷೇತ್ರದ ಸವಾಲುಗಳನ್ನು ಅರಿತು ಅನೇಕ ವಿಭಿನ್ನ ತರಹದ ಚಟುವಟಿಕೆಗಳನ್ನು ನಡೆಸುವದರ ಮೂಲಕ ಸಂಘವನ್ನು ಆಧುನಿಕತೆಯೆಡೆಗೆ ತೆರೆದುಕೊಂಡರೆ ಈ ವಿಶಿಷ್ಠ ಸಂಘ ಮಾದರಿಯಾಗುವುದರಲ್ಲಿ ಸಂಶಯವಿಲ್ಲ.

ಸಂಪರ್ಕ ವಿವರ: ಶ್ರೀ ಗಾಡಗೆಬಾಬಾ(ವಾ) ಕೊ-ಆಪ್ ಕ್ರೇಡಿಟ್ ಸೊಸಾಯಿಟಿ ಲಿ, ಷಹಾಪುರ, ಬೆಳಗಾವಿ.



## ದಿ. ಗರೀಭಿ ಹಠಾವೋ ಸಹಕಾರಿ ಸಂಘ ನಿಯ'ತ, ರಬಕ'.,

ದಿನಾಂಕ: 06–12–1982ರಲ್ಲಿ ನೋಂದಾಯಿತವಾಗಿ ಕಳೆದ 29ವರ್ಷಗಳಿಂದ ನಿರಂತರ ಉತ್ತಮ ಸೇವೆಯನ್ನು ಸಲ್ಲಿಸುತ್ತಿರುವ, ರಬಕವಿ, ಬನಹಟ್ಟಿ, ರಾಮಪೂರ್, ಹೋಸುರ ಮತ್ತು ಮದನಮಟ್ಟಿಯನ್ನು ಕಾರ್ಯ ಕ್ಷೇತ್ರವಾಗಿ ಹೊಂದಿ ಕಾರ್ಯನಿರ್ವಹಿಸುತ್ತಿರುವ ವಿಶಿಷ್ಠ ಕಾರ್ಯಚಟುವಟಿಕೆಯನ್ನು ಹೊಂದಿರುವ ಸಹಕಾರ ಸಂಸ್ಥೆ "ದಿ. ಗರೀಭಿ ಹಠಾವೋ ಸಹಕಾರಿ ಸಂಘ ನಿಯಮಿತ, ರಬಕವಿ."

ನ್ಯಾಯಬೆಲೆ ಅಂಗಡಿಯನ್ನು ನಡೆಸುತ್ತಿರುವ ಸಹಕಾರ ಸಂಸ್ಥೆ ಇದಾಗಿದೆ. ಸದಸ್ಯರುಗಳಿಗೆ ಹಾಗೂ ಇತರರಿಗೆ ಜೀವನಾವಶ್ಯಕ ವಸ್ತುಗಳನ್ನು ಅಂದರೆ ಸಕ್ಕರೆ, ಅಕ್ಕಿ, ಗೋದಿ, ಎಣ್ಣೆ, ಬಟ್ಟೆ, ಕಾಳು ಕಡಿಗಳನ್ನು ಹಾಗೂ ಇತರೆ ಗ್ರಾಹಕರ ವಸ್ತುಗಳನ್ನು ನ್ಯಾಯಬೆಲೆ ಅಂಗಡಿ ಮುಖಾಂತರ ವಿತರಿಸುವುದು ಈ ಸಂಘದ ಪ್ರಮುಖ ಉದ್ದೇಶವಾಗಿದೆ. ಸಹಕಾರಿ ಸಂಘದ ಮುಖ್ಯ ಚಟುವಟಿಕೆಯೆಂದರೆ ಪಡಿತರ ಚೀಟಿಗಳನ್ನು ಹೊಂದಿದವರಿಗೆ ಆಹಾರ ದಾನ್ಯಗಳನ್ನು ಹಾಗೂ ಇತರೆ ಸೇವೆಗಳನ್ನು ನೀಡುವುದಾಗಿದೆ. ಈ ಸಂಘದ ಪ್ರಾರಂಭದಲ್ಲಿ ಕೇವಲ 45 ಜನ ಸದಸ್ಯರು ಇದ್ದರು. ಕಳೆದ 2009–10 ರಲ್ಲಿ 400 ಜನ ಸದಸ್ಯರನ್ನು ಮಾಡಿಕೊಂಡಿದೆ. ಈ 400 ಜನ ಸದಸ್ಯರು ಹಿಂದುಳಿದ ಜಾತಿ ಮತ್ತು ಪಂಗಡಕ್ಕೆ ಸೇರಿದವರಾಗಿದ್ದಾರೆ. ಈ ಮೂಲಕ ಹಿಂದುಳಿದ ವರ್ಗಗಳ ಬೆಳವಣಿಗೆಯಲ್ಲಿ ಕಾರ್ಯೋನ್ಮುಖವಾಗಿರುವ ಸಂಸ್ಥೆ ಇದು.

ಈ ಸಹಕಾರ ಸಂಸ್ಥೆಯು ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯಿಂದ ಅನುಮತಿಯನ್ನು ಹೊಂದುವುದರ ಮೂಲಕ ನ್ಯಾಯ ಬೇಲೆ ಅಂಗಡಿ ಮುಖಾಂತರ ಆಹಾರ ಪದಾರ್ಥಗಳನ್ನು ಹಂಚುವ ಸೇವೆಯನ್ನು ಮಾತ್ರ ಸಲ್ಲಿಸುತ್ತಿದೆ. ಇದನ್ನು ಬಿಟ್ಟು ಬೇರೆ ಯಾವುದೇ ವ್ಯವಹಾರವನ್ನು ಮಾಡಲು ಅನುಮತಿ ಇರುವದಿಲ್ಲ. ಇದರಿಂದಾಗಿ ಸದರಿ ಗರೀಭಿ ಹಠಾವೋ ಸಹಕಾರಿ ಸಂಘಗಳಿಗೆ ಬೇರೆ ಯಾವುದೆ ಸೇವೆಯನ್ನು ಸಾರ್ವಜಿಕರಿಗೆ ನೀಡಲು ಸಾಧ್ಯವಾಗುತ್ತಿಲ್ಲ. ಈ ರೀತಿಯಾದ ಕಟ್ಟು–ನಿಟ್ಟಾದ ನಿಯಮಗಳನ್ನು ಸದರಿ ಗರೀಭಿ ಹಠಾವೋ ಸಹಕಾರಿ ಸಂಘಗಳ ಮೇಲೆ ಹೇರಿರುವದರಿಂದ ಸದರಿ ಸಹಕಾರಿ ಸಂಘಗಳು ಯಾವುದೇ ಹಣಕಾಸಿನ ವ್ಯವಹಾರಗಳನ್ನು ಮಾಡಲು ಸಾಧ್ಯವಾಗದೆ ಹಾಗೂ ಸದಸ್ಯರಿಗೆ ನ್ಯಯಬೆಲೆ ಅಂಗಡಿಯ ಕಾರ್ಯಗಳನ್ನು ಹೊರತುಪಡಿಸಿದ ಇತರೆ ಸೇವೆಗಳನ್ನೊದಗಿಸಲು ಸಾಧ್ಯವಾಗದೆ ಏಕಮುಖ ಕಾರ್ಯದಲ್ಲಿ ಕೇಂದ್ರೀಕೃತವಾಗಿ ಕಾರ್ಯನಿರ್ವಹಿಸುವಂತಾಗಿದೆ.

ಸಂಪರ್ಕ ವಿವರ: ದಿ. ಗರೀಭಿ ಹಠಾವೋ ಸಹಕಾರಿ ಸಂಘ ನಿಯಮಿತ, ರಬಕವಿ., ತಾ. ಜಮಖಂಡಿ, ಬಾಗಲಕೋಟ ಜಿಲ್ಲೆ.



## ದಿ ತೋಟಗಾರ್ಸ್ ಕೋಪರೇಟಿವ್ ಸೇಲ್ಸ್ ಸೋಸ್ಯಾಟಿ ಲಿ., ಶಿರಸಿ

ಸಾಮಾನ್ಯವಾಗಿ ಟಿಎಸ್ಎಸ್ ಎಂದೇ ಸ್ಥಳೀಯವಾಗಿ ಪ್ರಸಿದ್ದಿ. 1913ರಲ್ಲಿ ಸ್ಥಳೀಯ ರೈತರ ಅವಶ್ಯಕತೆಗಳನ್ನು ಪೂರೈಸಲು ಶಿರಸಿ ತೋಟಗಾರ್ಸ್ ಮಾರಾಟ, ವಿತರಣೆ ಮತ್ತು ಪತ್ತಿನ ಸಹಕಾರಿ ಆರಂಭವಾಯಿತು. ಆದರೆ ಇದು ಮುಂದಿನ ಹತ್ತು ವರ್ಷಗಳಲ್ಲಿ ತನ್ನ ಗುರಿ ತಲುಪಲು ವಿಫಲವಾದ ಹಿನ್ನೆಲೆಯಲ್ಲಿ 1922ರಲ್ಲಿ ಈ ಸಹಕಾರಿಯನ್ನು ಪತ್ತಿನ ಮತ್ತು ಮಾರಾಟ ಎಂದು ವಿಭಜಿಸಲು ನಿರ್ಣಯಿಸಲಾಯಿತು. ಅದರಂತೆ 1923 ರಲ್ಲಿ ದಿ ತೋಟಗಾರ್ಸ್ ಕೋಪರೇಟಿವ್ ಸೇಲ್ಸ್ ಸೋಸ್ಯಾಟಿ ಲಿ., ಶಿರಸಿ ಆರಂಭವಾಯಿತು. (21.09.1923)

**ಮುಖ್ಯ ಉದ್ದೇಶಗಳು :**

- ಸದಸ್ಯ ರೈತರಿಗೆ ಮಾರುಕಟ್ಟೆ ಒದಗಿಸುವುದು.
- ಸದಸ್ಯರಿಗೆ ಆರ್ಥಿಕ ಸಹಕಾರ ನೀಡುವುದು.
- ಸದಸ್ಯರಿಗೆ ಅವರ ಇನ್ನಿತರ ದೈನಂದಿನ ಅಗತ್ಯತೆಗಳನ್ನು ಪೂರೈಸುವುದು.
- ಬೆಳೆಗಳಿಗೆ ಶೀತಲೀಕರಣ ಘಟಕದ ವ್ಯವಸ್ಥೆ ಮಾಡುವುದು.
- ಬೆಳೆಗಳ ಸಂಸ್ಕರಣ ಮಾಡುವುದು.
- ಸದಸ್ಯರಿಗೆ ಸಾಲ ಮತ್ತು ಠೇವಣಿ ಸೌಲಭ್ಯ ಒದಗಿಸುವುದು. ಇತ್ಯಾದಿ

**ಸದಸ್ಯರಿಗೆ ಸೌಲಭ್ಯಗಳು**

ಉತ್ತಮ ಗುಣಮಟ್ಟದ ಮಾರುಕಟ್ಟೆ ಸೌಲಭ್ಯ

ಆರ್ಥಿಕ ಸಹಕಾರ

ಕಡಿಮೆ ದರದಲ್ಲಿ ಸಾಗಾಣಿಕೆ ಸೌಲಭ್ಯ

ಉಗ್ರಾಣ ಸೌಲಭ್ಯ

24 * 7 ಎಟಿಎಂ ಸೌಲಭ್ಯ.

ಕಡಿಮೆ ದರದಲ್ಲಿ ವಸತಿಗೃಹ ಸೌಲಭ್ಯ

ಶೀತಲೀಕರಣ ಸೌಲಭ್ಯ

**ಪ್ರಶಸ್ತಿಗಳು**

– ಐಎಸ್‌ಓ ಪ್ರಮಾಣ ಪತ್ರ ಪಡೆದಿದೆ.

– ಸಾರ್ವಜನಕ ಸೇವಾ ಪ್ರಶಸ್ತಿ, ಉತ್ತಮ ಸಹಕಾರ ಸಂಘ, ಉತ್ತಮ ಮಾರಾಟ ಸಹಕಾರಿ, ಇಫ್ಕೋ ಕ್ಯಾಶ್ ಅವಾರ್ಡ್ ಇತ್ಯಾದಿ ಪ್ರಶ್ತಿಗಳು ಸಂದಿವೆ.

ಒಟ್ಟು ಎರಡು ಶಾಖೆಗಳು ಇದ್ದು, ಒಂದು ಸಿದ್ದಾಪುರ ಮತ್ತು ಒಂದು ಯಲ್ಲಾಪುರಗಳಲ್ಲಿ ಇವೆ. ಸಂಘದ ಕಾರ್ಯವ್ಯಾಪ್ತಿಯು ಉತ್ತರ ಕನ್ನಡ ಜಿಲ್ಲೆಯ ಶಿರಸಿ, ಸಿದ್ದಾಪುರ, ಯಲ್ಲಾಪುರ ತಾಲೂಕುಗಳು, ಅಂಕೋಲಾ ತಾಲೂಕಿನ ಅಂಕೋಲಾ ಮತ್ತು ಬೆಳಲೆ ಕಂದಾಯ ವಲಯಗಳು, ಮುಂಡಗೋಡ ತಾಲೂಕಿನ ಪಾಳ ಕಂದಾಯ ವಲಯ ಮತ್ತು ಜೋಯೊಡಾ ತಾಲೂಕಿನ ಕುಂಬರವಾಡ ಕಂದಾಯ ವಲಯಗಳಿಗೆ ಇರುತ್ತದೆ.

ಸಹಕಾರಿಯು ಸದಸ್ಯರಿಗೆ ಮಾರುಕಟ್ಟೆ ಸೌಲಭ್ಯ ಒದಗಿಸುತ್ತಿದೆ. ಇಲ್ಲಿ ದಲ್ಲಾಳಿಗಳು ಹರಾಜಿನಲ್ಲಿ ಭಾಗವಹಿಸಿ ಬೆಳೆಯನ್ನು ಖರೀದಿಸಬಹುದು. ಸಂಘವು ಕೂಡಾ ಹರಾಜಿನಲ್ಲಿ ಭಾಗವಹಿಸುತ್ತದೆ. ಬೆಳೆ ಮಾರಾಟವಾದ ತಕ್ಷಣ ಸದಸ್ಯರಿಗೆ ಸಂಘವು ಹಣ ಪಾವತಿಸುತ್ತದೆ. ದಲ್ಲಾಳಿಗಳು ಖರೀದಿಸಿದಲ್ಲಿ 45 ದಿನಗಳೊಳಗೆ ಸಂಘಕ್ಕೆ ಹಣ ಪಾವತಿಸಿ, ಸಂಘದ ಆವರಣದಿಂದ ಮಾಲನ್ನು ತೆಗೆದುಕೊಂಡು ಹೋಗಬೇಕು. ಈ ಮೂಲಕ ಸದಸ್ಯರಿಗೆ ಹಣ ಪಾವತಿಯಲ್ಲಿನ ವಿಳಂಬವನ್ನು ತಪ್ಪಿಸಿದೆ.

ಕಾರ್ಯವ್ಯಾಪ್ತಿಯಲ್ಲಿನ ಕೃಷಿ ಪತ್ತಿನ ಸಹಕಾರ ಸಂಘಗಳಿಗೆ 'ಅ' ವರ್ಗದ ಸದಸ್ಯತ್ವ ನೀಡಲಾಗುತ್ತಿದ್ದು, ಪ್ರಸ್ತುತ 67 ಸದಸ್ಯರು ಇದ್ದಾರೆ. ಕೃಷಿ ಭೂಮಿ ಹೊಂದಿರುವವರಿಗೆ 'ಬ' ವರ್ಗದ ಸದಸ್ಯತ್ವ ನೀಡಲಾಗುತ್ತಿದ್ದು ಪ್ರಸ್ತುತ 2906 ಸದಸ್ಯರು ಇದ್ದಾರೆ. ಸತತ ಮೂರು ವರ್ಷ ಸಂಘದ ಜೊತೆ ವ್ಯವಹಾರ ನಡೆಸಿದ ವ್ಯಕ್ತಿಗಳಿಗೆ ಮಾತ್ರ ಹೊಸದಾಗಿ ಸದಸ್ಯತ್ವ ನೀಡಲಾಗುತ್ತದೆ.

ಸಂಘವು ರೂ. 18.11 ಲಕ್ಷ ಪಾಲು ಬಂಡವಾಳ ಮತ್ತು ರೂ. 5599.83 ಲಕ್ಷ ನಿಧಿಗಳನ್ನು ಹೊಂದಿ ಸದೃಢವಾಗಿದೆ. ಅಲ್ಲದೇ ಸದಸ್ಯರಿಂದ 5653.07 ಲಕ್ಷ ಠೇವಣಿ ಸ್ವೀಕರಿಸಿದೆ. ಮತ್ತು ಸದಸ್ಯರಿಗೆ ರೂ. 9471.09 ಲಕ್ಷ ವನ್ನು ಸಾಲವಾಗಿ ನೀಡಲಾಗಿದೆ. ಮತ್ತು ರೂ.185.31 ಲಕ್ಷ ಲಾಭ ಗಳಿಸಿದೆ.

ಸಂಘವು ಸದಸ್ಯರ ಅನುಕೂಲಕ್ಕಾಗಿ ಕಿರಾಣಿ ವಿಭಾಗ, ಅಕ್ಕಿ ಗಿರಣಿ, ಸಾಮ್ರಾಟ್ ವಸತಿಗೃಹ, ಆಸ್ಪತ್ರೆ, ಪಶು ಆಹಾರ ತಯಾರಿಕಾ ಘಟಕ, ಗೋದಾಮು, ಶೈತ್ಯಾಗಾರ, ವಾಹನ ವ್ಯವಸ್ಥೆ, ಎಟಿಎಂ ವ್ಯವಸ್ಥೆ, ಶಿಕ್ಷಣ ಸಾಲ, ಕೃಷಿ ಗ್ರಂಥಾಲಯ, ಸುಪರ್ ಮಾರ್ಕೆಟ್ ಇತ್ಯದಿ ಅನೇಕ ಸೌಲಭ್ಯಗಳನ್ನು ನೀಡುತಿದೆ. ಅಲ್ಲದೇ ಸದಸ್ಯರಿಗೆ ಮಾರುಕಟ್ಟೆ ಧಾರಣೆಯನ್ನು ಎಸ್‌ಎಂಎಸ್ ಮೂಲಕ ತಿಳಿಸಲಾಗುತ್ತಿದೆ.

ಸ್ಥಳೀಯ ಮಾರುಕಟ್ಟೆಯಲ್ಲಿ ಟಿಎಸ್‌ಎಸ್ ಪಾಲು ಸುಮಾರು 55 ಶೇ. ಇದೆ.

ಅಡಿಕೆಗೆ ಮೌಲ್ಯವರ್ಧನೆ ಮಾಡುವ ದೃಷ್ಟಿಯಿಂದ 2009–10ರಿಂದ ಸಿಹಿ ಅಡಿಕೆ ತಯಾರಿಕೆಯನ್ನು ಆರಂಭಿಸಿದ್ದು, ಇದಕ್ಕೆ ಮಾರುಕಟ್ಟೆಯಲ್ಲಿ ಉತ್ತಮ ಬೇಡಿಕೆ ಇದೆ. ಪ್ರಸ್ತುತ ಹನ್ನೊಂದು ರಾಜ್ಯಗಳಲ್ಲಿ ಸಿಹಿ ಅಡಿಕೆ ಪುಡಿಯನ್ನು ಮಾರಾಟ ಮಾಡಲಾಗುತ್ತಿದೆ. ಸ್ಥಳೀಯ ಬೇಡಿಕೆಗಳಿಗನುಗುಣವಾಗಿ ಐದು ವಿವಿಧ ಬ್ರಾಂಡ್‌ಗಳಲ್ಲಿ ಇದನ್ನು ಪ್ಯಾಕಿಂಗ್ ಮಾಡಲಾಗುತ್ತದೆ.

ಸಂಸ್ಥೆಯ ಬೆಳವಣಿಗೆಯಲ್ಲಿ ಶ್ರೀ ಶ್ರೀಪಾದ ಹೆಗಡೆ ಕಡವೆ ಇವರ ಕೊಡುಗೆ ಅನನ್ಯ. ಶ್ರೀಯುತರು ಸುಮಾರು 25 ವರ್ಷಗಳ ಕಾಲ ಸಂಸ್ಥೆಯ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದು, ಅವರ ಅವಿರತ ಪರಿಶ್ರಮದಿಂದ ಸಂಸ್ಥೆಯು ರಾಜ್ಯದ ಪ್ರತಿಷ್ಠಿತ ಸಹಕಾರಿಗಳ ಪಟ್ಟಿಯಲ್ಲಿ ಸ್ಥಾನ ಪಡೆದಿದೆ.

ಸಂಪರ್ಕ ವಿವರ: ದಿ ತೋಟಗಾರ್ಸ್ ಕೋಪರೇಟಿವ್ ಸೇಲ್ಸ್ ಸೋಸ್ಯಾಟಿ ಲಿ., ಶಿರಸಿ, ನ್ಯೂ ಮಾರ್ಕೆಟ್ ಯಾರ್ಡ್, ಶಿರಸಿ–581402, ದೂರವಾಣಿ: 08384–236371, 236007 ಫ್ಯಾಕ್ಸ್: 08384–236579, ಇಮೇಲ್: tss@tssindia.in, ವೆಬ್ ಸೈಟ್: www.tssindia.in.



## ದಿ ನಾಗರಬೈಲ್ ಉಪ್ಪಿನ ಮಾಲೀಕರ ಸಹಕಾರಿ ಸಂಘ ನಿ., ಸಾಣಿಕಟ್ಟಾ

– **ನಾರಾಯಣ ಹೆಗಡೆ,** ಕರಾಸೌಸಂಸನಿ., ಬೆಂಗಳೂರು

ಇದು ರಾಜ್ಯದಲ್ಲಿಯೇ ಇಂಥ ಪ್ರಥಮ ಸಂಸ್ಥೆಯಾಗಿದೆ.

ಉತ್ತರ ಕನ್ನಡ ಜಿಲ್ಲೆಯ ಸಾಣಿಕಟ್ಟೆಯಲ್ಲಿ 1720 ರಷ್ಟು ಹಿಂದಿನಿಂದಲೇ ಉಪ್ಪು ತಯಾರಿಕೆ ಆರಂಭವಾಗಿತ್ತು. ಅಂದು ಸುಮಾರು 50 ಏಕರೆ ಪ್ರದೇಶದಲ್ಲಿ ಉಪ್ಪಿನ ಉದ್ಯಮ ನಡೆಯುತ್ತಿತ್ತು. 1775ರಲ್ಲಿ ಸಾನು ನಾಯ್ಕ ಎಂಬುವವರ ನೇತೃತ್ವದಲ್ಲಿ ಕೊಲ್ಲಿಗೆ ಒಡ್ಡು ನಿರ್ಮಾಣ ಮಾಡಿ ಉಪ್ಪು ಪ್ರದೇಶವನ್ನು 400 ಏಕರೆಗೆ ಹೆಚ್ಚಿಸಲಾಯಿತು. ಆದ್ದರಿಂದಲೇ ಈ ಪ್ರದೇಶಕ್ಕೆ ಸಾಣಿಕಟ್ಟಾ ಎಂಬ ಹೆಸರು ಬಂದಿತು.

ಉಪ್ಪು ಮಾಲೀಕರು ತಮ್ಮ ಸ್ಥಳೀಯ ಅಗತ್ಯತೆಗಳಿಗಾಗಿ, ಎಲ್ಲರ ಸಮಾನ ಅವಶ್ಯಕತೆಗಳನ್ನು ಪೂರೈಸಲು ಉಪ್ಪು ಮಾಲೀಕರ ಜಂಟಿ ಪ್ರಯತ್ನ ಅಗತ್ಯವಾಗಿದ್ದ ಕಾರಣ ನಾಗರಬೈಲ ಉಪ್ಪು ಮಾಲೀಕರ ಸಂಘವನ್ನು ಮಾಡಿಕೊಳ್ಳಲಾಯಿತು. ಮತ್ತು 1904ರಲ್ಲಿ ಒಂದು ಅಧಿಕೃತ ಒಪ್ಪಂದವನ್ನು ನೋಂದಣಿ ಮಾಡಲಾಯಿತು.

ನಂತರ 1952ರಲ್ಲಿ ನಾಗರಬೈಲ ಉಪ್ಪು ಮಾಲೀಕರ ಸಹಕಾರ ಸಂಘ ರಚಿಸಿಕೊಳ್ಳಲಾಯಿತು. ಉಪ್ಪು ಉತ್ಪಾದನೆಗೆ ಯೋಗ್ಯ ಭೂಮಿ ಹೊಂದಿದವರು ಸಂಘದ ಸದಸ್ಯರಾಗಬಹುದು. ಸದಸ್ಯರಾದವರು ತಮ್ಮ ಭೂಮಿಯನ್ನು ಸಂಘಕ್ಕೆ ನೀಡಬೇಕು. ಒಟ್ಟು ಸಂಘದಿಂದ ಉತ್ಪಾದನೆಯಾದ ಉಪ್ಪಿನ ಮಾರಾಟದಿಂದ ಬಂದ ಆದಾಯವನ್ನು ಸಂಘದ ಸಾಮಾನ್ಯ ಸಭೆಯು ನಿರ್ಣಯಿಸಿದ ದರದಲ್ಲಿ ಸದಸ್ಯರಿಗೆ ಪಾವತಿ ಮಾಡಲಾಗುವುದು. ಪ್ರಸ್ತುತ ಹೆಚ್ಚಿನ ಸದಸ್ಯರು ಬೇರೆ ಬೇರೆ ಊರುಗಳಲ್ಲಿ ಕೆಲಸ ನಿರ್ವಹಿಸುತ್ತಿದ್ದಾರೆ. ವರ್ಷಕ್ಕೆ ಒಂದು ಅಥವಾ ಎರಡು ಸಲ ಸಂಘಕ್ಕೆ ಭೇಟಿ ನೀಡುತ್ತಾರೆ. ಸಂಘವು ಸದಸ್ಯರ ಪಾಲನ್ನು ಅವರ ಖಾತೆಗಳಿಗೆ ಜಮಾ ಮಾಡುತ್ತದೆ.

ಸಂಘವು ರೂ.9 ಲಕ್ಷ ಪಾಲು ಬಂಡವಾಳವನ್ನು ಮತ್ತು ರೂ.50 ಲಕ್ಷ ನಿಧಿಗಳನ್ನು ಹೊಂದಿದೆ. ರೂ. 296 ಲಕ್ಷಗಳಷ್ಟು ಸದಸ್ಯರ ಠೇವಣಿ ಹೊಂದಿದ್ದು, ರೂ. 243 ಲಕ್ಷಗಳಷ್ಟು ಹೂಡಿಕೆಯನ್ನು ಹೊಂದಿದೆ. ಒಟ್ಟು ಹದಿನಾರು ಪೂರ್ಣಾವಧಿ ಉದ್ಯೋಗಿಗಳಿದ್ದು, 200–250 ದಿನಗೂಲಿ ಕಾರ್ಮಿಕರು ಕೆಲಸ ಮಾಡುತ್ತಿದ್ದಾರೆ. ಕಾರ್ಮಿಕರ ಸಮಸ್ಯೆ ಸಂಘದ ಬಹುದೊಡ್ಡ ಸಮಸ್ಯೆಯಾಗಿದೆ. ಸಂಘವು ಎಲ್ಲ ಅಡೆತಡೆಗಳ ನಡುವೆಯೂ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿದೆ.

ಸಂಪರ್ಕ ವಿಳಾಸ: ದಿ ನಾಗರಬೈಲ್ ಉಪ್ಪಿನ ಮಾಲೀಕರ ಸಹಕಾರಿ ಸಂಘ ನಿ., ಸಾಣಿಕಟ್ಟಾ, ಸಾಣಿಕಟ್ಟಾ, ಕುಮಟಾ ತಾಲೂಕು, ಉತ್ತರ ಕನ್ನಡ ಜಿಲ್ಲೆ–581326, ದೂರವಾಣಿ: 08386 256131, 257835

# ಸೌಹಾರ್ದ ಸಹಕಾರಿ ಸಂಸ್ಥೆಗಳಲ್ಲಿನ ಹೊಸತನ ಹಾಗೂ ವೈಶಿಷ್ಟ್ಯತೆ

ಸೌಹಾರ್ದ ಸಹಕಾರ ಕಾಯ್ದೆಯಲ್ಲಿ ನೋಂದಣಿಯಾಗಿ ಪತ್ತಿನ, ವಿವಿದೋದ್ದೇಶಗಳ ಸಹಕಾರಿಗಳು ಮಾತ್ರವಲ್ಲದೆ ನೌಕರರ, ವ್ಯವಸಾಯಾಧಾರಿತ, ಕೈಗಾರಿಕಾ, ಗ್ರಾಹಕರ, ಪ್ರವಾಸ ಆಧಾರಿತವೂ ಸೇರಿದಂತೆ ಅನೇಕ ಹೊಸ ಬಗೆಯ ಸಹಕಾರಿಗಳು ಕಾರ್ಯನಿರ್ವಹಿಸುತ್ತಿವೆ. ಅವುಗಳಲ್ಲಿ ಆಯ್ದ ಕೆಲವು ಹೊಸತನಗಳ ಹೊಂದಿದ ಸಹಕಾರಿಗಳ ಸಂಕ್ಷಿಪ್ತ ಪರಿಚಯ ಇಲ್ಲಿದೆ.



## ಸ್ಪೈಸ್ ರೂಟ್ ಸೌಹಾರ್ದ ಸಹಕಾರಿ ನಿ., ಶಿರಸಿ

– ಶ್ರೀಕಾಂತ್ ಬರುವೆ
ಬೆಂಗಳೂರು

ಭಾರತೀಯ ಸಹಕಾರ ರಂಗ ಬದುಕಿನ ಎಲ್ಲಾ ಆಯಾಮಗಳಲ್ಲಿ ಹಾಸುಹೊಕ್ಕಾಗಿದೆ. "ಆಡು ಮುಟ್ಟದ ಸೊಪ್ಪಿಲ್ಲ" ಎನ್ನುವಂತೆ ಮಾನವನ ಎಲ್ಲಾ ಕಾರ್ಯಚಟುವಟಿಕೆಗಳಲ್ಲಿ ಸಹಕಾರ ರಂಗ ತಯನ್ನ ಛಾಪನ್ನು ಮೂಡಿಸಿರುತ್ತದೆ. ಎಲ್ಲಾ ರಂಗಗಳಲ್ಲೂ ಸಹಕಾರ ಕ್ಷೇತ್ರ ತನ್ನ ಛಾಪನ್ನು ಮೂಡಿಸಿದ್ದರೂ ಸಹ ಕೆಲವೊಂದು ಕ್ಷೇತ್ರಗಳಲ್ಲಿ ಸಹಕಾರ ಕ್ಷೇತ್ರದ ಕೊಡುಗೆ, ಅಸ್ತಿತ್ವ ಪ್ರಶ್ನಾರ್ಥಕವಾಗಿದೆ. ಪ್ರವಾಸಿ ಕ್ಷೇತ್ರದಲ್ಲಿ ಸಹಕಾರಿ ಕ್ಷೇತ್ರ ಹೆಚ್ಚಾಗಿ ತೊಡಗಿಕೊಂಡಿರುವುದಿಲ್ಲ. ಉತ್ತರ ಕನ್ನಡ ಜಿಲ್ಲೆ ಕರ್ನಾಟಕ ಸಹಕಾರ ಕ್ಷೇತ್ರದಲ್ಲಿ ತನ್ನದೇ ಆದ ಮಹತ್ವವನ್ನು ಪಡೆದುಕೊಂಡಿರುವ ಜಿಲ್ಲೆಯಾಗಿದೆ. ಈ ಜಿಲ್ಲೆಯಲ್ಲಿ ವೈವಿಧ್ಯಮಯ ಚಟುವಟಿಕೆಯನ್ನು ನಡೆಸುವ ಸಹಕಾರಿಗಳೇನೂ ಕೊರತೆಯಿಲ್ಲ. ಈ ಸಾಲಿಗೆ ಹೊಸ ಸೇರ್ಪಡೆ ಸ್ಪೈಸ್ ರೂಟ್ ಸೌಹಾರ್ದ ಸಹಕಾರಿ ನಿ., ಶಿರಸಿ.

04ನೇ ಫೆಬ್ರವರಿ 2010ರಂದು ನೋಂದಣಿಗೊಂಡ ಈ ಸಹಕಾರಿಯು ಪ್ರವಾಸೋದ್ಯಮ ಕ್ಷೇತ್ರದಲ್ಲಿ ಒಂದು ಹೊಸ ಛಾಪನ್ನು ಮೂಡಿಸಿದೆ. ಸ್ವಾಭಾವಿಕ ಸಂಪನ್ಮೂಲಗಳನ್ನು ಸದುಪಯೋಗಪಡಿಸಿ ಕೊಂಡು ದೇಶದ ಯುವಜನರಿಗೆ ಕೆಲಸ ನೀಡಿ ದುಡಿಯುವ ಅವಕಾಶ ಒದಗಿಸಿ ಸಹಕಾರ ಕ್ಷೇತ್ರದ ಮೂಲಕ ದೇಶದ ಜನರಿಗೆ ಉದ್ಯೋಗ ಒದಗಿಸುವುದರ ಜೊತೆಗೆ ಅವರ ಆರ್ಥಿಕ ಹಾಗೂ ಸಾಮಾಜಿಕ ಅಭಿವೃದ್ಧಿಯ ಜೊತೆಗೆ ಪ್ರವಾಸೋದ್ಯಮವನ್ನು ಗ್ರಾಮದತ್ತ ಕೊಂಡೊಯ್ಯುವುದೇ ಸ್ಪೈಸ್ ರೂಟ್ ಸೌಹಾರ್ದ ಸಹಕಾರಿಯ ಸ್ಥಾಪನೆಗೆ ಕಾರಣ. ವರ್ಷದ ಪೂರ್ತಿ ವ್ಯವಸಾಯ ಕೆಲಸವಿಲ್ಲ, ವ್ಯವಸಾಯ ಕೆಲಸಕ್ಕಾಗಿ ಹಳ್ಳಿ ಬಿಟ್ಟು ಪಟ್ಟಣಕ್ಕೆ ಹೋಗುವಂತಿಲ್ಲ. ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿರುವ ಗ್ರಾಮದ ಯುವಕರಿಗೆ ಆಸರೆಯಾಗಿಯಾಗಿ ನಿಲ್ಲುವಂತೆ ಈ ಹೊಸ ಯೋಜನೆಯನ್ನು ಹುಟ್ಟುಹಾಕಲಾಗಿದೆ.

ಕಾರ್ಯಚಟುವಟಿಕೆ: ಸ್ಪೈಸ್ ರೂಟ್ ಸೌಹಾರ್ದ ಸಹಕಾರಿ ನಿ., ಶಿರಸಿ ಇದು ಪ್ರವಾಸಿ ಕ್ಷೇತ್ರದಲ್ಲಿ ತನ್ನ ಕಾರ್ಯಚಟುವಟಿಕೆಯನ್ನು ನಡೆಸುತ್ತಿದೆ. ಇಂಗ್ಲೆಂಡಿನವಿಲೇಜ್‌ವೇಸ್ ಪ್ರೈವೇಟ್ ಲಿ., ಮತ್ತು ಇಂಟ್ರಾಡ್ರಾವೆಲ್ ಸಂಸ್ಥೆಗಳ ಜೊತೆ ಒಡಂಬಡಿಕೆ ಮಾಡಿಕೊಂಡ ಕಾರ್ಯಾಚರಣೆ ನಡೆಸುತ್ತಿದೆ. ವಿದೇಶಗಳಿಂದ

ಬರುವ ಪ್ರವಾಸಿಗರಿಗೆ ಒಂದು ಹೃದಯಸ್ಪರ್ಶ ಪ್ರವಾಸ ಅನುಭವವನ್ನು ಸ್ಪೈಸ್ ರೂಟ್ ನೀಡುತ್ತದೆ. ವ್ಯವಸ್ಥಿತವಾಗಿ ಪ್ರವಾಸವನ್ನು ಆಯೋಜಿಸುವ ಎಷ್ಟು ಕಂಪನಿಗಳು ಭಾರತದಲ್ಲಿ ಇವೆ, ಆದರೆ ಅವುಗಳೆಲ್ಲವುಗಳೂ ಭಿನ್ನವಾಗಿ ನಿಲ್ಲುವುದು "ಸ್ಪೈಸ್ ರೂಟ್". ಏಕೆಂದರೆ ಇಲ್ಲಿಗೆ ಬರುವ ಪ್ರವಾಸಿಗಳನ್ನು ತಮ್ಮ ಮನೆಯ ಸದಸ್ಯರಂತೆ ಕಾಂಲಾಗುತ್ತದೆ. "ಅತಿಥಿ ದೇವೋಭವ" ನಿಲ್ಲುವುದು ಇಲ್ಲಿ ಸಾಭೀತವಾಗಿದೆ. "ಕಾಸಿಗೆ ತಕ್ಕ ಕಜ್ಜಾಯ" ಎನ್ನುವುದು ಗಾದೆ. ಆದರೆ, ಇಲ್ಲಿ ಕಾಸಿಗಿಂತ ಕಜ್ಜಾಯ ಜಾಸ್ತಿ. ಉತ್ತರ ಕನ್ನಡ ಜಿಲ್ಲೆಯ ಪಾರಂಪಾರಿಕಲ ಹವ್ಯಕ ಅಡುಗೆಗಳನ್ನು ಪ್ರವಾಸಿಗರಿಗೆ ಉಣಬಡಿಸಲಾಗುತ್ತದೆ. ಪಾರಂಪಾರಿಕಹವ್ಯಕ ಅಡುಗೆಗಳನ್ನು ಉಣಬಡಿಸುವುದಲ್ಲದೇ, ಅದರ ವೈಜ್ಞಾನಿಕ ಮಹತ್ವ, ಔಷಧಕಾರಕ ಗುಣಗಳ ಕುರಿತು ಸಹ ಪ್ರವಾಸಿಗರಿಗೆ ವಿವರಣೆಯನ್ನು ನೀಡಲಾಗುತ್ತದೆ. ಪ್ರವಸದ ಮಜಾ ಅನುಭವಕ್ಕೆ ಬರುವುದು ಆಯಾ ಸ್ಥಳದಲ್ಲಿ ಪಡೆಯುವ, ಅದನ್ನು ಪ್ರಾಯೋಗಿಕ ಅನುಭವವನ್ನು ಅನುಭವಿಸುವ ರೀತಿಯಲ್ಲಿ. ಇಲ್ಲಿಗೆ ಬರುವ ಪ್ರವಾಸಿಗರಿಗೆ ಜೀವನದಲ್ಲೇ ಮರೆಯಲು ಸಾಧ್ಯವಿಲ್ಲದ ಅನುಭವವಾಗುವುದು. ಹವ್ಯಕ ಪಾರಂಪಾರಿಕ ತಿಂಡಿ ತಿನಿಸುಗಳನ್ನು ಸ್ವತಃ ಅವರ ಕೈಯಿಂದಲೇ ಮಾಡಿಸಲಾಗುತ್ತದೆ.

ದೋಸೆಯನ್ನು ತವಾ ಮೇಲೆ ಹಾಕುವ ಅನುಭವ, ಹಸುವಿನ ಹಾಲನ್ನು ಕರೆಯುವ ಅನುಭವ ಪ್ರವಾಸಿಗರಿಗೆ ಒಂದು ವಿಭಿನ್ನ ಅನುಭವವನ್ನು ನೀಡುತ್ತದೆ. ಕೇವಲ ವಿಭಿನ್ನ ಚಟುವಟಿಕೆ ನಡೆಸಿ ಲಾಭ ಗಳಿಸಿ ತನ್ನ ಸದಸ್ಯರಿಗೆ ಹೆಚ್ಚು ಲಾಭಾಂಶ ಹಂಚಿದರೆ ಅದು ಸಹಕಾರಿಯ ಹೆಚ್ಚುಗಾರಿಕೆಯಾಗುವುದಿಲ್ಲ. ಲಾಭದ ಜೊತೆ ತಾನು ಅಸ್ತಿತ್ವದಲ್ಲಿರುವ ಸುತ್ತಮುತ್ತಲಿನ ಪ್ರದೇಶಕ್ಕೆ, ಜನರಿಗೆ ಉಪಕಾರಿಯಾಗಿರುವುದು ಸಹಕಾರಿಯ ಉತ್ತಮ ಸಮಾನ ನಿರ್ಮಾಣದ ಬದ್ಧತೆಯನ್ನು ಎತ್ತಿ ತೋರಿಸುತ್ತದೆ. ಸಹಕಾರಿಯು ತಾನು ಗಳಿಸುವ ಲಾಭದ ಮೊತ್ತದಲ್ಲಿ "Village Development Fund" (ಹಳ್ಳಿ ಅಭಿವೃದ್ಧಿ ನಿಧಿ)ಗೆ ಕೊಡುಗೆಯನ್ನು ನೀಡಿ, ಸದರಿ ಮೊತ್ತದಲ್ಲಿ ಹಳ್ಳಿಗೆ ಅವಶ್ಯಕವಾದ ಅಭಿವೃದ್ಧಿ ಕಾರ್ಯದಲ್ಲಿ ತನ್ನ ಸಹಭಾಗತ್ವವನ್ನು ನೀಡುತ್ತಿದೆ. ಪ್ರವಾಸಿಗರಿಗೆ ಪಾಶ್ಚಾತ್ಯ ಶೈಲಿಯ ಆತಿಥ್ಯ ನೀಡದೇ ಶುದ್ಧ ಭಾರತೀಯ ಸಾಂಪ್ರದಾಯಿಕ ಶೈಲಿಯ ಆತಿಥ್ಯವನ್ನು ನೀಡುವುದರಿಂದ ಹೆಚ್ಚಿನ ಪ್ರವಾಸಿಗರು ತೆರಳುವಾಗ ಭಾವೋದ್ವೇಗಕ್ಕೆ ಒಳಗಾಗುತ್ತಾರೆ.

ಮಲೆನಾಡಿನಲ್ಲಿ ಅರೆಕಾಲಿಕ ನಿರುದ್ಯೋಗ ಅಸ್ತಿತ್ವದಲ್ಲಿರುತ್ತದೆ. ವರ್ಷದ ಕೆಲವು ತಿಂಗಳುಗಳು ಮಾತ್ರ ಉದ್ಯೋಗವಿದ್ದು, ಉಳಿದ ತಿಂಗಳುಗಳಲ್ಲಿ ಯಾವುದೇ ಉದ್ಯೋಗವಿರುವುದಿಲ್ಲ. ಅಂತಹ ಅರೆಕಾಲಿಕ ನಿರುದ್ಯೋಗವನ್ನು ತೊಡೆದುಹಾಕಲು ಸ್ಪೈಸ್ ರೂಟ್ ಯಶಸ್ವಿಯಾಗಿದೆ. ಸ್ಥಳೀಯವಾಗಿ ಲಭ್ಯವಿರುವ ವ್ಯಕ್ತಿಗಳನ್ನು ಅಡುಗೆಯವರಾಗಿ, ಪರಿಚಾರಕರಾಗಿ, ಗೈಡ್‌ಗಳಾಗಿ ಉದ್ಯೋಗ ನೀಡಿ ಅವರಿಗೆ ಆಕರ್ಷಕ ವೇತನವನ್ನು ಸಹ ನೀಡಲಾಗುತ್ತದೆ.

ಸಹಕಾರಿಯು ಪ್ರವಾಸಿಗರಿಗೆ ಈ ಕೆಳಗಿನ ರೀತಿಯಲ್ಲಿ ಪ್ರವಾಸಿ ಸ್ಥಳಗಳನ್ನು ವೀಕ್ಷಿಸಲುಯ ಮಾರ್ಗದರ್ಶನ ಮಾಡುತ್ತದೆ.

1. ನದಿ ಮಾರ್ಗದೊಂದಿಗೆ ನಡೆ (Riverside Walk): ನದಿ ಮಾರ್ಗದೊಂದಿಗೆ ನಡಿಗೆಯಲ್ಲಿ ಸುತ್ತ ಮುತ್ತಲಿನ ಪ್ರಸಿದ್ಧ ನದಿಗಳು, ಜಲಪಾತಗಳನ್ನು ಪ್ರವಾಸಿಗರಿಗೆ ತೋರಿಸಲಾಗುತ್ತದೆ. ಪ್ರವಾಸ ಸಂದರ್ಭದಲ್ಲಿ ನದಿಗಳ ಪೌರಾಣಿಕ ಕಥೆ ಮತ್ತು ಮಹತ್ವವನ್ನು ಸಹ ಪ್ರವಾಸಿಗರಿಗೆ ತಿಳಿಸಿಕೊಡಲಾಗುತ್ತದೆ.
2. ದೇವಸ್ಥಾನ ಮಾರ್ಗದೊಂದಿಗೆ ನಡೆ (Templeside Walk): ಪ್ರವಾಸಿಗರಿಗೆ ಪುರಾತನ ಪ್ರಸಿದ್ಧವಾದ ದೇವಸ್ಥಾನಗಳ ವೀಕ್ಷಣೆಗೆ ಅವಕಾಶ ಕಲ್ಪಿಸಲಾಗಿರುತ್ತದೆ. ವೀಕ್ಷಣೆಯ ಸಂದರ್ಭದಲ್ಲಿ ದೇವಸ್ಥಾನದ



ಪೌರಾಣಿಕ ಮಹತ್ವ, ಸ್ಥಳ ಮಹಿಮೆಯನ್ನು ತಿಳಿಸಲಾಗುತ್ತದೆ.

3. ಸ್ಪೈಸ್ ಗಾರ್ಡನ್ ನಡೆ (Spice Garden Walk): ಅಡಿಕೆ, ಏಲಕ್ಕಿ, ಲವಂಗ, ಲಾವಂಚ, ಕಾಳುಮೆಣಸಿನ ಬೆಳೆಗಳನ್ನು ಬೆಳೆಯುವ ವಿಧಾನವನ್ನು ತೋರಿಸಲಾಗುತ್ತದೆ.

4. Former Co-operative Walk: ಈ ವಿಧಾನದಲ್ಲಿ ಸುತ್ತಮುತ್ತಲಿನ ಉತ್ತಮ ಸಹಕಾರಿ ಸಂಸ್ಥೆಗಳಿಗೆ ಕರೆದುಕೊಂಡು ಹೋಗಲಾಗುತ್ತದೆ. ಸದರಿ ಸಂಸ್ಥೆಗಳು ಹೇಗೆ ಯಶಸ್ವಿಯಾದವು ಎಂಬುದರ ಯಶೋಗಾಥೆಯನ್ನು ವಿವರಿಸಲಾಗುತ್ತದೆ.

ಸಂಪರ್ಕ ವಿವರ: ಸ್ಪೈಸ್‌ರೂಟ್ ಸೌಹಾರ್ದ ಸಹಕಾರಿ ನಿ., ಸೃಷ್ಟಿ, ವಿನಾಯಕ ಕಾಲೋನಿ, 1ನೇ ಅಡ್ಡ ರಸ್ತೆ, ಶಿರಸಿ, ಉತ್ತರ ಕನ್ನಡ, ದೂರವಾಣಿ: 08384–236855.



## ಸುವಿಧಾ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ., ಸಾಗರ

14ನೇ ಅಕ್ಟೋಬರ್ 2011ರಂದು ನೋಂದಣಿಗೊಂಡ ಈ ಸಹಕಾರಿಯು ಸುವಿಧಾ ಸೂಪರ್ ಮಾರ್ಕೆಟ್ ಎಂಬ ಹೆಸರಿನೊಂದಿಗೆ ಗ್ರಾಹಕರಿಗೆ ಖರೀದಿಯ ಖುಷಿಯನ್ನು ಸೃಷ್ಟಿಸುವ ವ್ಯವಸ್ಥೆಗಾಗಿ ಆರಂಭಿಸಲಾಗಿದೆ. ಜನಸಾಮಾನ್ಯರಿಗೆ ದೈನಂದಿನ ಬದುಕಿನಲ್ಲಿ ಅಗತ್ಯವಿರುವ ಎಲ್ಲ ವಸ್ತುಗಳೂ ಒಂದೇ ಸೂರಿನಡಿಯಲ್ಲಿ ಉತ್ತಮ ಗುಣಮಟ್ಟ ಮತ್ತು ಸರಿಯಾದ ತೂಕದ ಭರವಸೆಯೊಂದಿಗೆ ಉತ್ಪಾದಕರಿಂದ ನೇರವಾಗಿ ಗ್ರಾಹಕರಿಗೆ ದೊರೆಯುವಂತೆ ಮಾಡಲು ಪ್ರಾರಂಭಿಸಿದ ಸೇವಾ ಉದ್ದಿಮೆ. ಗ್ರಾಹಕ ಸ್ನೇಹಿಯಾಗಿ ಮಾರುಕಟ್ಟೆಯನ್ನು ಗ್ರಾಹಕರ ನಿರೀಕ್ಷೆಗೆ ಅಣಿಗೊಳಿಸಲಾಗಿದೆ. ಇಲ್ಲಿ ಖರೀದಿಸಿದ ವಸ್ತುಗಳಲ್ಲಿ ದೋಷ ಕಂಡುಬಂದರೆ ಹಿಂತಿರುಗಿಸಲು ಅವಕಾಶವಿದೆ ಎಂದು ನಾಮಫಲಕ ಹಾಕಲಾಗಿದೆ. ಗುಣಮಟ್ಟದ ಸಾಮಗ್ರಿ ಖಾತ್ರಿ ತೂಕದಲ್ಲಿ ಗ್ರಾಹಕರಿಗೆ ವಿತರಿಸುವ ಯೋಜನೆಯಾಗಿದೆ.

ಪ್ರಸ್ತುತ ಜನರ ನಿರೀಕ್ಷೆಗೆ ತಕ್ಕಂತಹ ಗುಣಮಟ್ಟದ ಉತ್ಪನ್ನಗಳನ್ನು ಮಾರುಕಟ್ಟೆಯಲ್ಲಿನ ಗರಿಷ್ಠ ಬೆಲೆಗಿಂತ ಕಡಿಮೆ ಬೆಲೆಯಲ್ಲಿ ಮಾರಾಟ ಮಾಡುವ ಬೃಹತ್ ಸಹಕಾರಿ ಸಂಸ್ಥೆ. ಮಹಾನಗರಗಳಲ್ಲಿ ಭಾರತೀಯ ಚಿಲ್ಲರೆ ಮಾರುಕಟ್ಟೆಯಲ್ಲಿ ದೃಷ್ಟಿಯಲ್ಲಿಟ್ಟುಕೊಂಡು ಮಲ್ಟಿನ್ಯಾಷನಲ್ ಕಂಪನಿಗಳು ದೊಡ್ಡ ಮೊತ್ತದ ಬಂಡವಾಳ ಹೂಡಿ ಸೂಪರ್ ಮಾರ್ಕೆಟ್‌ಗಳನ್ನು ತೆರೆಯುವ ಮೂಲಕ ಜನರ ಆಕರ್ಷಣೆಗಳಿಸುತ್ತಿವೆ. ಆದರೆ ಸ್ಥಳೀಯ ಸಂಪನ್ಮೂಲ ಹಾಗೂ ವ್ಯಕ್ತಿಗಳ ಸಮಯೋಚಿತ ಚಿಂತನೆಯಿಂದ ಸಹಕಾರಿ ವ್ಯವಸ್ಥೆಯಲ್ಲಿ ಸಾರ್ವಜನಿಕರ ಅಗತ್ಯ ಸೇವೆಗೆ ಉತ್ತಮ ಸಂಸ್ಥೆ ಆರಂಭಿಸಿರುವುದು ಆರೋಗ್ಯಕರ ಬೆಳವಣಿಗೆಯಾಗಿದೆ. ಮಲೆನಾಡಿನ ಜನತೆಗೆ ಪೂರಕ ಅಗತ್ಯವಿರುವ ವಸ್ತುಗಳನ್ನು ಉತ್ಪನ್ನಗಳನ್ನು ಮಾರಾಟ ಮಾಡುವ ಜೊತೆಗೆ 5 ವರ್ಷದಲ್ಲಿ ತಾಲ್ಲೂಕಿನ 50 ವಿವಿಧ ಸ್ಥಳಗಳಲ್ಲಿ ಸುವಿಧಾ ಮಳಿಗೆಗಳನ್ನು ತೆರೆಯುವ ಯೋಜನೆಯಿದೆ. ಸಹಕಾರಿ ಸಂಸ್ಥೆ ಸುವಿಧಾ ಸೂಪರ್ ಮಾರ್ಕೆಟ್ ಕೇವಲ ಆರ್ಥಿಕ ಲಾಭದ ಸಂಸ್ಥೆಯಲ್ಲ ಲಾಭಗಳಲ್ಲಿ ಸೇವೆಯೂ ಒಂದು ಲಾಭವೇ, ಗುಣಮಟ್ಟದ ಉತ್ಪನ್ನಗಳನ್ನು ಜನರಿಗೆ ವಿತರಿಸುವದಿಂದ ಮಾನಸಿಕ ತೃಪಿಯಿಂದ ಸಿಗುವ ಲಾಭವಾಗಿದೆ.

ಭಾರತೀಯ ಆರ್ಥಿಕ, ಸಾಮಾಜಿಕ ಸ್ವಾಸ್ಥ್ಯಕ್ಕೆ ಸಹಕಾರಿ ವ್ಯವಸ್ಥೆಯೇ ಪ್ರಮುಖ ಕಾರಣವಾಗಿದೆ. ಪ್ರಪಂಚದಲ್ಲಿ ಆರ್ಥಿಕ ದಿವಾಳಿತನ ಆರಂಭವಾಗಿದ್ದರೆ ಭಾರತ ಮಾತ್ರ ಆರ್ಥಿಕವಾಗಿ ಸದೃಢಗೊಳ್ಳುತ್ತಿದೆ. ಸಹಕಾರಿ ವ್ಯವಸ್ಥೆಯ ಪರಿಣಾಮಕಾರಿ ವಹಿವಾಟಿನಿಂದ ಇಂದು ಈ ವಾತಾವರಣ ನಿರ್ಮಾಣವಾಗಿದೆ. ಅಮೇರಿಕಾದಲ್ಲಿ 200ಕ್ಕೂ ಹೆಚ್ಚು ಹಣಕಾಸು ಸಂಸ್ಥೆಗಳು ಆರ್ಥಿಕ ವಹಿವಾಟಿನ ಸಂಕಷ್ಟಕ್ಕೆ ಸಿಲುಕಿ ಮುಚ್ಚಲ್ಪಟ್ಟವು. ಆದರೆ ಭಾರತದ ಕರ್ನಾಟಕ ರಾಜ್ಯ ಒಂದರಲ್ಲೇ ಅದೇ ಸಮಯದಲ್ಲಿ 200ಕ್ಕೂ ಹೆಚ್ಚು ಸಹಕಾರಿ ಸಂಸ್ಥೆಗಳು ಉದ್ಘಾಟನೆಗೊಂಡಿವೆ. ಆರ್ಥಿಕ ಕ್ಷೇತ್ರದ ದಿಗ್ಗಜರಾದ ಕೆನರಾ ಬ್ಯಾಂಕ್ ತನ್ನ 106ನೇ ವರ್ಷಾಚರಣೆಗೆ ದೇಶದಾದ್ಯಂತ 106 ನೂತನ ಶಾಖೆಗಳನ್ನು ತೆರೆಯುವ ಮೂಲಕ ಸಂಭ್ರಮವನ್ನು ಆಚರಿಸಿದೆ. ಸಾಗರದಲ್ಲಿ ಸಮಾನ ಮನಸ್ಕ ಸಹಕಾರಿಗಳು ಸೇರಿ ಯೋಜಿಸಿರುವ ಬೃಹತ್ ಯೋಜನೆಯ ಫಲವಾಗಿ 1000 ಸದಸ್ಯರುಗಳಿಂದ ಷೇರು ಹಣವಾಗಿ ಸಂಗ್ರಹಿಸಿದ 1.50 ಕೋಟಿ ರೂ.ಗಳ ಸ್ವಂತ ಬಂಡವಾಳದಲ್ಲಿ ಸೌಹಾರ್ದ ಸಹಕಾರಿ ವ್ಯವಸ್ಥೆಯಲ್ಲಿ ಆರಂಭಿಸಿರುವ ಸೂಪರ್ ಮಾರ್ಕೆಟ್ ರಾಜ್ಯದಲ್ಲಿಯೇ ಮೊದಲ ಪ್ರಯೋಗ.

ವಿಶೇಷತೆಗಳು: ವರ್ಷದ 365 ದಿನಗಳ ವ್ಯೈವಾಟು ಇರುತ್ತದೆ, ಬೆಳಿಗ್ಗೆ 7–00 ರಿಂದ ರಾತ್ರಿ 9–00 ರ ವರೆಗೆ ತಡೆರಹಿತ ವ್ಯಾಪಾರ, ತೂಕ ಗುಣಮಟ್ಟ ಗ್ಯಾರಂಟಿ ಹಾಗೂ ಕಡಿಮೆದರದಲ್ಲಿ ವಸ್ತುಗಳು ಲಭ್ಯ, ಶುಚಿ ಹಾಗೂ ಪ್ಯಾಕ ಮಾಡಿದ ವಸ್ತುಗಳು, ತೆರಿಗೆ ಸಹಿತ ಬಿಲ್ಲಿಂಗ ವ್ಯವಸ್ಥೆ. ಸಿಸಿ. ಟಿ.ವಿ. ಹಾಗೂ ಸೆಕ್ಯುರಿಟಿ, ಗಣಕೀಕೃತ ಕೌಂಟರಗಳು ಇಲ್ಲಿನ ವಿಶೇಷತೆಗಳಾಗಿವೆ.

ಸುವಿಧಾ ಸ್ವಾದ ಸುವಿಧಾ ಚಾಟ್ಸ ಹಾಗೂ ಸುವಿಧಾ ಜೂಸ ಜೋನ್ : ದಿನಾಂಕ 23.03.2012 ರಂದು ಸುವಿಧಾ ಯುಗಾದಿ ಉತ್ಸವದ ಆಚರಣೆ ದಿನದಂದು ಸುವಿಧಾ ಸ್ವಾದ ಸುವಿಧಾ ಚಾಟ್ಸ ಹಾಗೂ ಸುವಿಧಾ ಜೂಸ ಜೋನ್ ಪ್ರಾರಂಭಿಸಲಾಗಿದೆ. ನೂಡಲ್ಸ್, ಸ್ಯಾಂಡವಿಚ್, ಐಸ್ಕ್ರೀಂ ಹಾಗೂ ರುಚಿ ಶುಚಿಯಾದ ಆಹಾರಗಳು ಪಾನಿಪೂರಿ, ಗೋಬಿ ಮಂಚೂರಿ, ಕಾರ್ನ್ಸ ಮುಂತಾದ ಸವಿ ತಿಂಡಿಗಳು ಕಬ್ಬಿನ ಹಾಲು, ಎಳನೀರು, ಹಣ್ಣಿನ ರಸಗಳು, ಲಸ್ಸಿ, ವಿವಿಧ ದೇಸಿ ಪಾನೀಯಗಳು ಗ್ರಾಹಕರ ಹಾಗೂ ಸಾರ್ವಜನಿಕರ ಸೇವೆಗಾಗಿ ಲಭ್ಯವಿವೆ. ಸಹಕಾರ ಕ್ಷೇತ್ರದಲ್ಲಿ ಅದೂ ಕರ್ನಾಟಕದ ಸೌಹಾರ್ದ ಸಹಕಾರಿ ಕ್ಷೇತ್ರದಲ್ಲಿ ಇದೊಂದು ಅಪೂರ್ವ ಸಾಧನೆ, ಇತರರಿಗೆ ಮಾದರಿ ಎಂದು ಹೇಳಬಹುದು.

ಸಂಪರ್ಕ ವಿವರ: ಸುವಿಧಾ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ., ಶ್ರೀ ಆನೆಗುಡ್ಡೆ, ಜಿ ಪಿ ರಸ್ತೆ, ಸಾಗರ, ಶಿವಮೊಗ್ಗ, ದೂರವಾಣಿ: 08183–229933, ವೆಬ್: http://www.suvidha.coop/

## ಹಿರೇಕೆರೂರ ತಾಲೂಕಾ ವಿದ್ಯಾವರ್ಧಕ ಸೌಹಾರ್ಧ ಸಹಕಾರಿ ನಿಯಮಿತ ಹಿರೇಕೆರೂರ

ಸಹಕಾರಿ ತತ್ವದ ತಳಹದಿಯ ಮೇಲೆ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿ ಅದರಲ್ಲಿ ಪ್ರಗತಿ ಸಾಧಿಸುವುದು ಕಷ್ಟವೆಂದು ಹೇಳುವ ಇಂದಿನ ದಿನಗಳಲ್ಲಿ ಹಿರೇಕೆರೂರ ತಾಲೂಕಾ ವಿದ್ಯಾವರ್ಧಕ ಸೌಹಾರ್ಧ ಸಹಕಾರಿ ನಿಯಮಿತ ಹಿರೇಕೆರೂರ ಸಹಕಾರಿ ಸಂಸ್ಥೆಯು ಪ್ರಗತಿ ಪಥದಲ್ಲಿ ದಾಪುಗಾಲನ್ನಿಡುತ್ತಾ 60 ವಸಂತಗಳನ್ನು ಪೂರೈಸಿ ವಜ್ರ ಮಹೋತ್ಸವವನ್ನು ಆಚರಿಸುವ ಸಂಭ್ರಮದಲ್ಲಿದೆ. ಉತ್ತರ ಕರ್ನಾಟಕದ ಹೆಬ್ಬಾಗಿಲಾದ ಹಾವೇರಿ ಜಿಲ್ಲೆಯ ಸರ್ವಜ್ಞನ ಜನಿಸಿದ ಪುಣ್ಯ ಭೂಮಿಯಾದ ಹಿರೇಕೆರೂರ ತಾಲೂಕಿನಲ್ಲಿ ಮುಂಬೈ ಸಹಕಾರಿ ಸಂಘಗಳ ಕಾನೂನಿನ ಪ್ರಕಾರ ದಿನಾಂಕ : 28-04-1952 ರಂದು ಈ ಸಂಸ್ಥೆ ಉದಯಿಸಿತು. ಅಂದು ನೆಟ್ಟ ಈ ಪುಟ್ಟ ಸಸಿ ಗಿಡವಾಗಿ, ಹೆಮ್ಮರವಾಗಿ ಇಂದು ತನ್ನ ರೆಂಬೆಕೊಂಬೆಗಳನ್ನು ವಿಸ್ತಾರವಾಗಿ ಹರಡಿದೆ. ತಾಲೂಕಿನ ಶ್ರಮಿಕ ಹಾಗೂ ಬಡ ಮಕ್ಕಳಿಗೆ ವಿದ್ಯಾರ್ಜನೆ ನೀಡಬೇಕೆಂಬ ಧ್ಯೇಯೋದ್ಯೇಶವನ್ನು ಹೊತ್ತು ಈ ಸಂಸ್ಥೆಯನ್ನು ಸಹಕಾರಿ ಧುರೀಣರಾದ ದಿ॥ ಡಿ.ಆರ್. ತಂಬಾಕದವರು ಅಂದಿನ ತಹಶೀಲ್ದಾರ ಸಾಹೇಬರಾದ ಶ್ರೀ ಜಿ.ಐ.ಹೆಗಡೆಯವರ ಸಹಕಾರದಿಂದ ಸ್ಥಾಪಿಸಿದರು.

ಈ ಸಹಕಾರಿ ಸಂಸ್ಥೆಯು ತನ್ನ ಸ್ಥಾಪನೆಯ ಮೂಲ ಆಶಯದಂತೆ ಗ್ರಾಮಾಂತರ ಪ್ರದೇಶದ ಮಕ್ಕಳ ಶಿಕ್ಷಣದ ಅಭಿವೃದ್ಧಿಗಾಗಿ 1952 ರಲ್ಲಿ ಡಿ.ಆರ್. ತಂಬಾಕದ ಬಾಲಕರ ಪ್ರೌಢಶಾಲೆಯನ್ನು ಹಿರೇಕೆರೂರಿನಲ್ಲಿ ಪ್ರಾರಂಭಿಸಿತು. ಆರಂಭದ ಕಾಲದಲ್ಲಿ ಕೇವಲ 13 ವಿದ್ಯಾರ್ಥಿಗಳು ಪ್ರವೇಶ ಪಡೆದು ಹಂತ ಹಂತವಾಗಿ ಬೆಳೆಯುತ್ತಾ ಇಂದು ಹೆಮ್ಮರವಾಗಿ ಬೆಳೆದು ನಿಂತಿದೆ. ಈ ಸಹಕಾರಿ ಸಂಸ್ಥೆಯಲ್ಲಿ ವಿದ್ಯಾಭ್ಯಾಸ ಮಾಡುವ ವಿದ್ಯಾಥಿಗಳ ಸಂಖ್ಯೆ ದ್ವಿಗುಣಗೊಳ್ಳುತ್ತಾ ಹೊದಂತೆ ಬಾಲಕಿಯರಿಗಾಗಿ ಪ್ರತ್ಯೇಕ ಪ್ರೌಢಶಾಲೆಯನ್ನು ಹಿರೇಕೆರೂರಿನಲ್ಲಿ ಪ್ರಾರಂಭಿಸಲಾಯಿತು. ತಾಲೂಕಿನ ದೂರದ ಗ್ರಾಮಗಳಿಂದ ಕೇಂದ್ರ ಸ್ಥಾನಕ್ಕೆ ವಿದ್ಯಾಭ್ಯಾಸಕ್ಕಾಗಿ ಅರಸಿ ಬರುತ್ತಿರುವ ವಿದ್ಯಾರ್ಥಿಗಳ ತೊಂದರೆಯನ್ನರಿತು ಈ ಸಂಸ್ಥೆಯು ತಾಲೂಕಿನ 3 ಗ್ರಾಮಾಂತರ ಪ್ರದೇಶಗಳಲ್ಲಿ ಪ್ರೌಢಶಾಲೆಗಳನ್ನು ಪ್ರಾರಂಭಿಸಬೇಕೆಂದು ನಿರ್ಣಯಿಸಿ, ತಾಲೂಕಿನ ಚಿಕ್ಕಕಬಾರ, ಹೊಸಳ್ಳಿ, ಹಾಗೂ ಆಲದಗೇರಿ ಗ್ರಾಮಗಳಲ್ಲಿ ಪ್ರಾರಂಭಿಸಿ, ಆ ಪ್ರದೇಶದ ಮಕ್ಕಳಗೆ ಶಿಕ್ಷಣ ಪಡೆಯುವಂತಹ ಅವಕಾಶ ಕಲ್ಪಿಸಿಕೊಟ್ಟಿತು.

ಕೆ.ಎಚ್.ಪಾಟೀಲ ಪದವಿ ಪೂರ್ವ ಮಹಾವಿದ್ಯಾಲಯ : ತಾಲೂಕಿನ ಮಕ್ಕಳು ಪ್ರೌಢಶಿಕ್ಷಣ ಪಡೆದು ಪದವಿ ಪೂರ್ವ ಶಿಕ್ಷಣ ಪಡೆಯಲು ಅವಕಾಶಗಳಿಲ್ಲದೇ ಅದು ಅವರ ಕನಸಾಗಿಯೇ ಉಳಿಯುತ್ತಿತ್ತು. ಅಂತಹ ಸ್ಥಿತಿಯನ್ನರಿತು, ಗ್ರಾಮೀಣ ಪ್ರದೇಶದ ಮಕ್ಕಳಿಗೆ ಹೆಚ್ಚಿನ ಶಿಕ್ಷಣ ಒದಗಿಸುವ ಉದ್ದೇಶದಿಂದ, 1972 ರ ನಂತರ ಈ ಸಂಸ್ಥೆಯ ಆಡಳಿತ ಚುಕ್ಕಾಣಿ ಹಿಡಿದು ಸಂಸ್ಥೆಯನ್ನು ಉತ್ತುಂಗಕ್ಕೇರಿಸುವ ಬಯಕೆಯನ್ನು ಹೊತ್ತು, ದೂರದೃಷ್ಟಿಯಿಂದ ಕಾರ್ಯನಿರ್ವಹಿಸಿದ ಶ್ರೀ ಎಸ್.ಎಸ್. ಪಾಟೀಲವರ ಅವಿರತ ಪ್ರಯತ್ನದ ಫಲವಾಗಿ 1972 ರಲ್ಲಿ ಪದವಿ ಪೂರ್ವ ಮಹಾವಿದ್ಯಾಲಯವನ್ನು ಹಿರೇಕೆರೂರಿನಲ್ಲಿ ಪ್ರಾರಂಭಿಸಲಾಯಿತು. ಈ ಮಹಾವಿದ್ಯಾಲಯವು ಅವಿಭಾಜಿತ ಧಾರವಾಡ ಜಿಲ್ಲೆಯಲ್ಲಿಯೇ ಪ್ರತಿಷ್ಠಿತ ಪದವಿ ಪೂರ್ವ ಮಹಾವಿದ್ಯಾಲಯವಾಗಿ ಬೆಳೆದು ನಿಂತಿದೆ. ಈ ಮಹಾವಿದ್ಯಾಲಯವು ಕಲಾ, ವಾಣಿಜ್ಯ, ಮತ್ತು ವಿಜ್ಞಾನ ವಿಭಾಗಗಳನ್ನು ಹೊಂದಿದ್ದು. ಬೃಹತ ಕಟ್ಟಡ, ಗ್ರಂಥಾಲಯ, ಸುಸಜ್ಜಿತ ಪ್ರಯೋಗಾಲಯ ಹಾಗೂ ವಿಸ್ತಾರವಾದ ಕ್ರೀಡಾ ವ್ಯವಸ್ಥೆ, ಹೀಗೆ ವಿದ್ಯಾರ್ಥಿಗಳಿಗೆ ಬೇಕಾದ ಎಲ್ಲಾ ಮೂಲಭೂತ ಸೌಕರ್ಯಗಳನ್ನು ಒಳಗೊಂಡು ಪದವಿ ಪೂರ್ವ ಶಿಕ್ಷಣ ಇಲಾಖೆಯಿಂದ "ಎ" ಗ್ರೇಡ್ ಪಡೆದು ಪ್ರಸ್ತುತ ಶೈಕ್ಷಣಿಕ ವ್ಯವಸ್ಥೆಗೆ ಬೇಕಾದ ಗುಣ ಮಟ್ಟದ ಶಿಕ್ಷಣ ನೀಡುವಲ್ಲಿ ಯಶಸ್ವಿಯಾಗಿ ಸಹಸ್ರಾರು ವಿದ್ಯಾರ್ಥಿಗಳನ್ನು ತನ್ನತ್ತ ಆಕರ್ಶಿಸಿದೆ.




ವಿಷೇಶವಾಗಿ ಪದವಿ ಪೂರ್ವ ಮಹಾವಿದ್ಯಾಲಯದ ವಿಜ್ಞಾನ ವಿಭಾಗವು ಜಿಲ್ಲೆಯಲ್ಲಿಯೇ ಅತಿ ಹೆಚ್ಚು ವಿದ್ಯಾರ್ಥಿಗಳನ್ನು ಹೊಂದಿದ್ದು, ಪಲಿತಾಂಶದಲ್ಲಿಯೂ ಪ್ರಥಮ ಸ್ಥಾನದಲ್ಲಿ ತನ್ನ ಶ್ರೇಣಿಯನ್ನು ಉಳಿಸಿಕೊಂಡು ಇಂದಿಗೂ ಸಹ ಗುಣ ಮಟ್ಟದ ಶಿಕ್ಷಣವನ್ನು ನೀಡುತ್ತಾ ನೂರಾರು ವಿದ್ಯಾರ್ಥಿಗಳು ವೈದ್ಯರು, ಹಾಗೂ ಇಂಜಿನಿಯರುಗಳಾಗಿ ರಾಜ್ಯ, ರಾಷ್ಟ್ರ ಹಾಗೂ ವಿದೇಶಗಳಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಅಷ್ಟೆ ಅಲ್ಲದೇ ಐ.ಎ.ಎಸ್. ಮತ್ತು ಕೆ.ಎ.ಎಸ್. ಪರೀಕ್ಷೆಗಳಲ್ಲಿ ರ್‍ಯಾಂಕ್ ಪಡೆದು ದೇಶದ ವಿವಿಧ ಭಾಗಗಳಲ್ಲಿ ಸೇವೆ ಸಲ್ಲಿಸುವಂತಹ ಮಹನೀಯರನ್ನ ಈ ನಾಡಿಗೆ ನೀಡಿದ್ದು, ಸ್ಮರಣೀಯ ಹಾಗೂ ಈ ಸಂಸ್ಥೆಯ ವಿಷೇಶವಾಗಿದೆ.

ಸಹಕಾರಿ ಕ್ಷೇತ್ರಗಳಲ್ಲಿ ಪ್ರಾಥಮಿಕ ಶಾಲೆಗಳು ಪಟ್ಟಣದಲ್ಲಿ ಪ್ರಾರಂಭವಾಗಿದ್ದರೂ ಯಾವುದೇ ಮೂಲ ಭೂತ ಸೌಕರ್ಯಗಳಿಲ್ಲದೇ ಮಕ್ಕಳು ಗುಣಮಟ್ಟದ ಶಿಕ್ಷಣದಿಂದ ವಂಚಿತರಾಗಿರುವಂತಹದ್ದನ್ನು ಮನಗಂಡು ಈ ಸಂಸ್ಥೆಯ ಅಡಿಯಲ್ಲಿ 1983 ರಲ್ಲಿ ಶಾ.ನಾ.ಕಾ ಪ್ರಾಥಮಿಕ ಶಾಲೆಯನ್ನೂ ಸಹ ಪ್ರಾರಂಭಿಸಿ ಮೂಲ ಶಿಕ್ಷಣಕ್ಕೆ ಹೆಚ್ಚಿನ ಆಧ್ಯಾತೆಯನ್ನು ಕಲ್ಪಸಲಾಯಿತು.

ಪ್ರಥಮ ದರ್ಜೆ ಮಹಾವಿದ್ಯಾಲಯ ಸ್ಥಾಪನೆ : ತಾಲೂಕಿನ ಗ್ರಾಮೀಣ ಪ್ರದೇಶದ ಬಡ ಮಕ್ಕಳಿಗೆ ಉನ್ನತ ಶಿಕ್ಷಣ ಪಡೆಯುವುದು ಗಗನ ಕುಸುಮವಾಗಿತ್ತು ಹಾಗೂ ಶ್ರೀಮಂತರು ದೂರದ ಧಾರವಾಡ ಇನ್ನಿತರ ಪಟ್ಟಣಗಳಲ್ಲಿ ಉನ್ನತ ಶಿಕ್ಷಣ ಪಡೆಯಬೇಕಾಗಿತ್ತು. ತಾಲೂಕಿನಲ್ಲಿ ಪದವಿ ಪಡೆದವರ ಸಂಖ್ಯೆ ಕೇವಲ ಬೆರಳೆಣಿಕೆಯಾಗಿಯೇ ಉಳಿದಿತ್ತು. ಈ ಭಾಗದ ಮಕ್ಕಳಿಗೆ ಉನ್ನತ ಶಿಕ್ಷಣ ಪಡೆಯ ಬೇಕೆಂಬ

ಛಲ ಪಾಲಕರಿಗೆ ಕಲ್ಪಿಸಬೇಕೆಂಬ ಆಶೆ ಇದ್ದರೂ ಸಹ ಉನ್ನತ ಶಿಕ್ಷಣದಿಂದ ವಂಚಿತರಾಗಿದ್ದನ್ನು ಮನಗಂಡು ತಾಲೂಕಿನ ಮಕ್ಕಳ ಉನ್ನತ ಶಿಕ್ಷಣ ಜ್ಞಾನ ದಾಹ ನೀಗಿಸಲು 1992 ರಲ್ಲಿ ಬಿ.ಆರ್. ತಂಬಾಕದ ಪ್ರಥಮ ದರ್ಜೆ ಮಹಾವಿದ್ಯಾಲಯವನ್ನು ಆರಂಭದಲ್ಲಿ ಕಲಾ, ವಾಣಿಜ್ಯ ವಿಭಾಗಗಳನ್ನು ಪ್ರಾರಂಭಿಸಿ, ಮುಂದೆ ವಿಜ್ಞಾನ ವಿಭಾಗದ ಅನಿವಾರ್ಯತೆಯನ್ನರಿತು, ಅದನ್ನು ಪ್ರಾರಂಭಿಸಲಾಯಿತು. ಇದರಿಂದ ತಾಲೂಕಿನ ಮಕ್ಕಳು ಪದವಿ ಶಿಕ್ಷಣವನ್ನು ಪಡೆಯುವ ಭಾಗ್ಯ ಕಲ್ಪಿಸಿಕೊಡಲಾಯಿತು.

ಕೇವಲ 63 ವಿದ್ಯಾರ್ಥಿಗಳಿಂದ ಪ್ರಾರಂಭವಾದ ಈ ಮಹಾವಿದ್ಯಾಲಯ, ಇಂದು 1218 ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ. ಈ ಮಹಾವಿದ್ಯಾಲಯವು ಬೃಹತ್ ಕಟ್ಟಡ, ಸುಸಜ್ಜಿತ ಗ್ರಂಥಾಲಯ ಹಾಗೂ ಪ್ರಯೋಗಾಲಯಗಳನ್ನು ಹೊಂದಿ ಸರಕಾರದ, ವಿಶ್ವವಿದ್ಯಾಲಯದ ಹಾಗೂ ಕೇಂದ್ರ ಸರಕಾರದ ನ್ಯಾಕ್ ಸಮಿತಿಯ ನಿಯಮಾವಳಿಗಳನ್ನು ಪೂರ್ಣ ಪ್ರಮಾಣದಲ್ಲಿ ಪೂರೈಸಿ ರಾಜ್ಯದಲ್ಲಿಯೇ "ಬಿ++" ಗ್ರೇಡ್ ಪಡೆದ ಏಕೈಕ ಅನುದಾನ ರಹಿತ ಮಹಾವಿದ್ಯಾಲಯವಾಗಿ ಹೊರಹೊಮ್ಮಿದೆ. ಜಿಲ್ಲೆಯಲ್ಲಿಯೇ ಅತಿ ಹೆಚ್ಚು ರ್‍ಯಾಂಕ್‌ಗಳನ್ನು ಪಡೆದ ಹೆಗ್ಗಳಿಕೆಗೂ ಸಹ ಪಾತ್ರವಾಗಿ ಕ್ರೀಡಾ ಹಾಗೂ ಸಾಂಸ್ಕೃತಿಕ ವಿಭಾಗಗಳಲ್ಲಿ ರಾಜ್ಯ ಹಾಗೂ ರಾಷ್ಟ್ರ ಮಟ್ಟದಲ್ಲಿ ಭಾಗವಹಿಸಿ ಮಹಾವಿದ್ಯಾಲಯದ ಹಾಗೂ ಸಂಸ್ಥೆಯ ಕೀರ್ತಿಯನ್ನು ಹೆಚ್ಚಿಸಿದೆ.

ಡಿ.ಇಡಿ. ಹಾಗೂ ಬಿ.ಇಡಿ ಮಹಾವಿದ್ಯಾಲಯಗಳ ಸ್ಥಾಪನೆ. ಃ ಪ್ರಸ್ತುತ ಶೈಕ್ಷಣಿಕ ವ್ಯವಸ್ಥೆಗೆ ಅನುಗುಣವಾಗಿ ಬಿ.ಇಡಿ ಹಾಗೂ ಡಿ.ಇಡಿ ತರಬೇತಿ ಮಹಾವಿದ್ಯಾಲಯಗಳು ಗ್ರಾಮೀಣ ಪ್ರದೇಶದ ಈ ಭಾಗದ ಮಕ್ಕಳಿಗೆ ಅನಿವಾರ್ಯವೆನಿಸಿದಾಗ ಸರಕಾರದಿಂದ ಹಾಗೂ ವಿಶ್ವವಿದ್ಯಾಲಯಗಳಿಂದ ಕಠಿಣ ಕರಾರುಗಳಿದ್ದರೂ ಸಂಸ್ಥೆಯು ಅವೆಲ್ಲವುಗಳನ್ನು ಪೂರೈಸಿ, ಶಿಕ್ಷಣ ಮಹಾವಿದ್ಯಾಲಯಗಳನ್ನು ಪ್ರಾರಂಭಿಸಲು ಮುಂದಾಯಿತು. ನಮ್ಮ ಸಂಸ್ಥೆಯು ಮೇಲೆ ಸದಾ ಶ್ರೀರಕ್ಷೆ ಇರುವ ಶ್ರೀ ತರಳಬಾಳು ಜಗದ್ಗುರುಗಳ ಹೆಸರಿನಲ್ಲಿ ಶ್ರೀ ತರಳಬಾಳು ಜಗದ್ಗುರು ಶಿಕ್ಷಣ ಮಹಾವಿದ್ಯಾಲಯ ಹಾಗೂ ಶ್ರೀ ತರಳಬಾಳು ಜಗದ್ಗುರು ಡಿ.ಇಡಿ ವಿದ್ಯಾಲಯಗಳನ್ನು 2004 –05 ನೇ ಶೈಕ್ಷಣಿಕ ವರ್ಷದಲ್ಲಿ ಪ್ರಾರಂಭಿಸಲಾಯಿತು. ಈ ಮಹಾವಿದ್ಯಾಲಯಗಳು ಗುಣ ಮಟ್ಟದ ಶಿಕ್ಷಣ ನೀಡುತ್ತಾ ಬಂದಿದ್ದು, ಪ್ರತಿ ವರ್ಷ ನೂರಕ್ಕೆ ನೂರಷ್ಟು ಫಲಿತಾಂಶ ಪಡೆದಿರುತ್ತದೆ. ಈ ಸಂಸ್ಥೆಯಲ್ಲಿ ಓದಿದ ವಿದ್ಯಾರ್ಥಿಗಳು ವಿಶ್ವವಿದ್ಯಾಲಯದ ರ್‍ಯಾಂಕ್ ಪಡೆದದ್ದು, ಸಂಸ್ಥೆಯ ಕೀರ್ತಿಯನ್ನು ಮತ್ತಷ್ಟು ಹೆಚ್ಚಿಸಿದೆ. ಈ ಸಂಸ್ಥೆಗಳಿಂದ ಪ್ರತಿ ವರ್ಷ ನೂರಾರು ಉದಯೋನ್ಮುಖ ಶಿಕ್ಷಕರು ಹೊರ ಹೊಮ್ಮಿ ಸಾವಿರಾರು ವಿದ್ಯಾರ್ಥಿಗಳಿಗೆ ಜ್ಞಾನಾರ್ಜನೆ ನೀಡುವಲ್ಲಿ ಸಹಕಾರಿಯಾಗಿದ್ದಾರೆ.

ಇಂದಿನ ವೈಜ್ಞಾನಿಕ ಯುಗದಲ್ಲಿ ಬದುಕೆಲ್ಲ ಯಾಂತ್ರಿಕರಣವಾದಾಗ ರಾಜ್ಯಾದ್ಯಂತ ಕೈಗಾರಿಕೆಗಳು ಬೆಳೆಯುತ್ತಾ ಹೋದಂತೆ ಔದ್ಯೋಗಿಕ ಶಿಕ್ಷಣ ಪಡೆಯುವ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಾಗುವುದನ್ನು ತಿಳಿದು, ನಮ್ಮ ಸಹಕಾರಿ ಸಂಸ್ಥೆಯ ಅಧಿನದಲ್ಲಿ ತರಳಬಾಳು ಕೈಗಾರಿಕಾ ತರಬೇತಿ ಕೇಂದ್ರವನ್ನು 2012 ರಲ್ಲಿ ಪ್ರಾರಂಭಿಸಿ ಈ ಭಾಗದ ವಿದ್ಯಾರ್ಥಿಗಳ ಔದ್ಯೋಗಿಕ ಶಿಕ್ಷಣಕ್ಕೆ ಅವಕಾಶ ಕಲ್ಪಿಸಲಾಯಿತು.

ನರ್ಸರಿ ಎಲ್.ಕೆ.ಜಿ.–ಯುಕೆಜಿ – ಶಾಲೆಗಳ ಉದಯ ಃ ಪ್ರಸ್ತುತ ದಿನ ಮಾನಗಳಲ್ಲಿ ಶಿಶುವು ತಾಯಿ ಗರ್ಭದಲ್ಲಿರುವಾಗಲೇ ಮಗುವಿಗೆ ಶಿಕ್ಷಣ ನೀಡಬೇಕೆಂಬ ಹಂಬಲದಲ್ಲಿರುವ ಸಂದರ್ಭದಲ್ಲಿ ಪುಟ್ಟ ಮಕ್ಕಳಿಗಾಗಿ, ಪಾಲಕರ, ರೈತರ, ಕೂಲಿಕಾರ್ಮಿಕರ ಅಪೇಕ್ಷೆಯ ಮೇರೆಗೆ, ಈ ಪುಟ್ಟ ಮಕ್ಕಳ ಮನಸ್ಸಿನ ಇಂಗಿತವನ್ನು ಅರಿತು ಮಮತೆಯಿಂದ ಶಿಕ್ಷಣ ನೀಡುವ ಗುರುಮಾತೆಯರನ್ನು ಆಯ್ಕೆ ಮಾಡಿಕೊಳ್ಳುವುದು ಕಷ್ಟ ಸಾಧ್ಯವಾದರೂ ರಾಜ್ಯದ ನಾನಾ ಭಾಗಗಳಿಂದ ನುರಿತ ಶಿಕ್ಷಕಿಯರನ್ನು ಆಯ್ಕೆ

ಮಾಡಿಕೊಂಡು, ಈ ತಾಲೂಕಿನ ಪಾಲಕರ ಉದ್ದೇಶವನ್ನು ಈಡೇರಿಸುವಲ್ಲಿ ಯಶಸ್ವಿಯಾಗಿದೆ.

ಜಿಲ್ಲೆಯಲ್ಲಿಯೇ ಉರ್ದು ಬಾಷೆಯ ಶಿಕ್ಷಣವನ್ನು ಯಾವ ಸಂಸ್ಥೆಯು ಪ್ರಾರಂಭ ಮಾಡದೇ ಇರುವ ಸಂದರ್ಬದಲ್ಲಿ ಆ ಅಲ್ಪ ಸಂಖ್ಯಾತರ ಇಂಗಿತವನ್ನು ಅರಿತು ಸಂಸ್ಥೆಯ ಅಂಗ ಸಂಸ್ಥೆಗಳಾದ ಪ್ರೌಢಶಾಲೆ, ಪದವಿ ಪೂರ್ವ ಮಹಾವಿದ್ಯಾಲಯ ಹಾಗೂ ಪದವಿ ಮಹಾವಿದ್ಯಾಲಯಗಳಲ್ಲಿ ಉರ್ದು ವಿಷಯವನ್ನು ವಿಸ್ತರಣೆ ಮಾಡಿ ಜಿಲ್ಲೆಯ ಅಲ್ಪ ಸಂಖ್ಯಾತ ವಿದ್ಯಾರ್ಥಿಗಳು ಹಾಗೂ ನೆರೆಯ ಜಿಲ್ಲೆಯ ಅಲ್ಪ ಸಂಖ್ಯಾತ ವಿದ್ಯಾರ್ಥಿಗಳು ವ್ಯಾಸಂಗ ಮಾಡುವಂತೆ ಅವಕಾಶವನ್ನು ಕಲ್ಪಿಸಿದ್ದು ಈ ಸಂಸ್ಥೆಯ ಮತ್ತೊಂದು ವಿಶೇಷತೆಯಾಗಿದೆ.

ಸಂಸ್ಥೆ ಹೊಂದಿರುವ ಮೂಲಭೂತ ಸೌಕರ್ಯಗಳು : ಈ ಸಹಕಾರಿ ಸಂಸ್ಥೆಯು ನರ್ಸರಿಯಿಂದ ಪದವಿ ಹಂತದವರೆಗೆ ಶಿಕ್ಷಣ ನೀಡುವಲ್ಲಿ ಮುಂದಾದಾಗ ಅದಕ್ಕೆ ಪೂರಕವಾಗಿ ಮೂಲ ಭೂತ ಸೌಕರ್ಯಗಳನ್ನು ಒದಗಿಸುವ ನಿಟ್ಟಿನಲ್ಲಿ ಸಂಸ್ಥೆಯು ತಾನೂ ಹೊಂದಿರುವ ಸಾಂಪತ್ತಿಕ ಸ್ಥಿತಿಯಲ್ಲಿಯೇ ಬೃಹತ್ ಕ್ಷಟಡಗಳನ್ನು, ವಿಶಾಲವಾದ ಆಟದ ಮೈದಾನಗಳನ್ನು, ನೂರಾರು ವಿದ್ಯಾರ್ಥಿಗಳಿಗೆ ಏಕಕಾಲಕ್ಕೆ ಅಧ್ಯಯನಕ್ಕೆ ಅನುಕೂಲವಾದ ಬೃಹತ್ ಗ್ರಂಥಾಲಯ, ಕಂಪ್ಯೂಟರ್ ಲ್ಯಾಬ್‌ಗಳು, ಸುಸಜ್ಜಿತ ಪ್ರಯೋಗಾಲಯ, ಸುಂದರವಾದ ಉದ್ಯಾನವನ, ವಿಶಾಲವಾದ ಕ್ರೀಡಾಂಗಣ, ಹಾಗೂ ಕುಡಿಯುವ ನೀರಿನ ವ್ಯವಸ್ಥೆ, ಸುಸಜ್ಜಿತ ಶೌಚಾಲಯ, ಮೂತ್ರಾಲಯಗಳನ್ನು ಕಾಲಕ್ಕೆ ತಕ್ಕಂತೆ ವಿದ್ಯಾರ್ಥಿ ಹಾಗೂ ವಿದ್ಯಾರ್ಥಿನಿಯರಿಗೆ ಪ್ರತ್ಯೇಕವಾದ ವ್ಯವಸ್ಥೆಯನ್ನು ಕಲ್ಪಿಸಿಕೊಟ್ಟಿದೆ. ಇವೆಲ್ಲವುಗಳನ್ನು ಸಂಸ್ಥೆ ಪೂರೈಸಿದ್ದು, ಜಿಲ್ಲೆಯಲ್ಲಿಯೇ ಮಾದರಿ ಶಿಕ್ಷಣ ನೀಡುವ ಸಂಸ್ಥೆಯಾಗಿ ಈ ಭಾಗದ ಜ್ಞಾನ ದೇಗುಲವಾಗಿ, ಜಾತಿ ಮತ ಪಂಥಗಳನ್ನು ಮೀರಿ ಸರ್ವರಿಗೂ ಶಿಕ್ಷಣ ನೀಡುವಂತಹ ಸಹಕಾರಿ ತತ್ವದ ತಳಹದಿಯ ಮೇಲೆ ವಿದ್ಯಾರ್ಥಿಗಳಿಗೆ ಉಣಬಡಿಸುವ ಜ್ಞಾನದಾಸೋಹವೇ ಸೌಭಾಗ್ಯವೆಂದು ಭಾವಿಸಿಕೊಂಡು ನಿಸ್ಪೃಹವಾಗಿ ಈ ಸಂಸ್ಥೆ ಬೆಳೆದು ಬಂದಿದೆ.

ಸಹಕಾರಿಯ ಮುಂದಿನ ಯೋಜನೆಗಳು :ತಾಲೂಕಿನ ಗ್ರಾಮೀಣ ಭಾಗದ ವಿದ್ಯಾರ್ಥಿಗಳ ಆಶೋತ್ತರಗಳನ್ನು ಈಡೇರಿಸುವಲ್ಲಿ ನಿರಂತರ ಪ್ರಯತ್ನ ಶೀಲರಾದ ಆಡಳಿತ ಮಂಡಳಿಯವರು ಮುಂಬರುವ ದಿನಗಳಲ್ಲಿ ಡಿಪ್ಲೋಮಾ ಕಾಲೇಜ, ಇಂಜಿನಿಯರಿಂಗ್ ಕಾಲೇಜು, ಪ್ಯಾರಾಮೆಡಿಕಲ್ ಕಾಲೇಜು, ಬಿ.ಬಿ.ಎ. ಹಾಗೂ ಬಿ.ಬಿ.ಎಂ, ಬಿ.ಸಿ.ಎ, ಕಾಲೇಜುಗಳನ್ನು ಹಾಗೂ ಸ್ನಾತ್ತಕ್ಕೋತ್ತರ ಅಧ್ಯಯನ ವಿಭಾಗಗಳನ್ನ ಪ್ರಾರಂಭಿಸುವ ದೆಸೆಯಲ್ಲಿ ಕಾರ್ಯೋನ್ನಮುಖರಾಗಿದ್ದೇವೆ. ಈ ಸಂಸ್ಥೆಯು ಹೆಮ್ಮರವಾಗಿ ಬೆಳೆಯಲು ಸದಾ ಕ್ರೀಯಾ ಶೀಲರೂ ಹಾಗೂ ಶ್ರೇಷ್ಠ ಸಹಕಾರಿ ಪುರಷ್ಕೃತರಾದ ಶ್ರೀ ಎಸ್. ಎಸ್. ಪಾಟೀಲರವರು ಹಾಗೂ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಎಸ್. ಬಿ ತಿಪ್ಪಣ್ಣನವರ ನಿರಂತರ ಪರಿಶ್ರಮದ ಫಲವಾಗಿ ಈ ತಾಲೂಕಿನ ಗ್ರಾಮೀಣ ಭಾಗಗಳ ಮಕ್ಕಳಿಗೆ ಬೇಕಾದ ಶಿಕ್ಷಣವನ್ನು ನೀಡುವಲ್ಲಿ ಇವರ ಶ್ರಮ ಸ್ಮರಣಿಯವಾಗಿದೆ. ಅಷ್ಟೇ ಅಲ್ಲದೇ ಇವರೊಂದಿಗೆ ಸದಾ ಬೆನ್ನೆಲುಬಾಗಿ ನಿಂತ ತಾಲೂಕಿನ ಸಹಕಾರಿ ಧುರಿಣರು, ಹಾಗೂ ಈ ಸಂಸ್ಥೆಯ ಆಡಳಿತ ಮಂಡಳಿಯ ಅಧ್ಯಕ್ಷರಾಗಿ, ನಿರ್ದೇಶಕರಾಗಿ ಕಾರ್ಯನಿರ್ವಹಿಸಿದ ಮಹನೀಯರು, ನೌಕರ ವರ್ಗದವರು, ರೈತ ಬಂಧುಗಳು, ಶ್ರಮ ಜೀವಿಗಳು, ಈ ಸಂಸ್ಥೆಗೆ ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ತಮ್ಮ ತನು ಮನ ಧನಗಳಿಂದ ಸಹಕರಿಸಿದ್ದು ಸಂಸ್ಥೆಯ ಬೆಳವಣಿಗೆಗೆ ಕಾರಣಕರ್ತರಾಗಿದ್ದಾರೆ.

ಸಂಪರ್ಕ ವಿವರ: ಹಿರೇಕೇರೂರು ತಾಲೂಕು ವಿದ್ಯಾವರ್ಧಕ ಸೌಹಾರ್ದ ಸಹಕಾರಿ ನಿ., ವಿದ್ಯಾನಗರ, ಮುಖ್ಯರಸ್ತೆ, ಹಿರೇಕೇರೂರು, ಹಾವೇರಿ – 581 111, ದೂರವಾಣಿ: 08376 283512.



## ಕದಂಬ ಮಾರ್ಕೆಟಿಂಗ್ ಸೌಹಾರ್ದ ಸಹಕಾರಿ ನಿ., ಶಿರಸಿ

07–ಜನವರಿ–2005ರಂದು ನೋಂದಣಿಗೊಂಡ ಈ ಸಹಕಾರಿಯು ಸದಸ್ಯರ ಪರವಾಗಿ ಅವರ ತೋಟಗಾರಿಕಾ ಉತ್ಪನ್ನಗಳನ್ನು ಗ್ರಾಹಕ ಕೇಂದ್ರಗಳಲ್ಲಿ ಗ್ರಾಹಕರಿಗೆ ಅಥವಾ ಗ್ರಾಹಕರ ಸಂಘ ಸಂಸ್ಥೆಗಳಿಗೆ ಮಾರಾಟ ಮಾಡುತ್ತದೆ. ಸದಸ್ಯರಿಂದ, ಬೆಳೆಗಾರರಿಂದ ಬೆಳೆದ ವಾಣಿಜ್ಯ ಬೆಳೆಗಳನ್ನು ಮುಂಗಡ ಕೊಟ್ಟು ಮಧ್ಯವರ್ತಿಯಾಗಿ ಯೋಗ್ಯ ಬೆಲೆಗೆ ಮಾರಾಟ ಮಾಡಿಸುತ್ತದೆ.

ಸಹಕಾರಿಯ ಕಾರ್ಯವಾಪ್ತಿಯಾದ ಉತ್ತರಕನ್ನಡ ಜಿಲ್ಲೆಯ ಶಿರಸಿ, ಸಿದ್ಧಾಪುರ, ಯಲ್ಲಾಪುರ ಹಾಗೂ ಜೊಯಿಡಾ ತಾಲ್ಲೂಕುಗಳಲ್ಲಿ ವ್ಯವಸಾಯಗಾರರು ಬೆಳೆಯುವ ವ್ಯವಸಾಯೋತ್ಪನ್ನಗಳಾದ ಅಡಿಕೆ, ತೆಂಗು, ಕಾಳು ಮೆಣಸು, ವೆನಿಲಾ, ಯಾಲಕ್ಕಿ, ಶುಂಠಿ ಹಾಗೂ ಮತ್ತಿತರೆ ವಾಣಿಜ್ಯ, ಸಾಂಬಾರ ಪದಾರ್ಥ, ತೋಟಗಾರಿಕಾ ಮತ್ತು ನೆಡು ತೋಪು ಹಾಗೂ ಅರಣ್ಯ ಉತ್ಪನ್ನಗಳಾದ ಉಪ್ಪಾಗೆ, ಮುರಗಲು, ರಾಮಪತ್ರ, ದಾಲ್ಚಿನಿ, ನೆಲ್ಲಿ, ವಾಟೆ ಹಾಗೂ ಶೀಗೆಕಾಯಿ ಇತ್ಯಾದಿ ಉತ್ಪನ್ನಗಳನ್ನು ಉತ್ತಮ ಧಾರಣೆಗೆ ಮಾರಾಟ ಮಾಡುವ ಮೂಲಕ ಬೆಳೆಗಾಗರಿಗೆ ಅಗತ್ಯ ಸೇವೆ ಸಲ್ಲಿಸುವುದು ಹಾಗೂ ಅನಾನಸು, ಬಾಳೆ, ಚಿಕ್ಕು, ಮಾವು, ಕಲ್ಲಂಗಡಿ, ಹಲಸು ಹಾಗೂ ಗೇರು ಮುಂತಾದ ಹಣ್ಣುಗಳನ್ನು ಖರೀದಿಸುವುದು ಹಾಗೂ ಔಷದಿ ಸಸ್ಯಗಳ ಖರೀದಿ ಹಾಗೂ ಮಾರಾಟ ಮಾಡುವುದು ಮತ್ತು ಆರ್ಕಿಡ್ ಹಾಗೂ ಪುಷ್ಪ ಕೃಷಿಗೆ ಮಾರುಕಟ್ಟೆ ಕಲ್ಪಿಸುವುದು. ಈ ಉತ್ಪನ್ನಗಳ ನೇರ ಖರೀದಿ ಮಾಡಿ ಇದ್ದಂತೆಯೇ/ವರ್ಗೀಕರಿಸಿ/ಸಂಸ್ಕರಿಸಿ ಸಿದ್ಧ ಉತ್ಪನ್ನಗಳಾದ ಸಂಸ್ಥೆಯ ಕಾರ್ಯಕ್ಷೇತ್ರದ ಒಳಗೆ ವ್ಯವಸಾಯಗಾರರಿಗೂ ಮತ್ತು ಬಳಕೆದಾರರಿಗೂ ಇರುವ ಅಂತರವನ್ನು ಕಡಿಮೆ ಮಾಡಿ ಮಾರಾಟ ವ್ಯವಹಾರ ಕೈಗೊಳ್ಳುವುದು. ಉತ್ಪನ್ನಗಳನ್ನು ವ್ಯವಸಾಯಗಾರರಿಂದ ನೇರ ಖರೀದಿ ಮಾಡಿ ಅವನ್ನು ಸಂಸ್ಕರಿಸಿ, ವಿವಿಧ ರೀತಿಯ ಸಿದ್ಧ ಉತ್ಪನ್ನಗಳನ್ನು ತಯಾರಿಸಲು ಅಗತ್ಯವಿರುವ ಉದ್ದಿಮೆಯನ್ನು ಸ್ಥಾಪಿಸುವುದು, ಈ ಉತ್ಪನ್ನಗಳನ್ನು ಹೊರರಾಷ್ಟ್ರಗಳಿಗೆ ರಫ್ತು ಮಾಡುವುದು, ವಿಸ್ತೀರ್ಣ, ಉತ್ಪಾದನೆ, ಮಾರುಕಟ್ಟೆ ಮತ್ತು ಅವುಗಳಿಗೆ ಸಂಬಂಧಪಟ್ಟ ವಿಚಾರಗಳ ಬಗ್ಗೆ ಅಧ್ಯಯನ, ಸಮೀಕ್ಷೆಗಳನ್ನು ಸ್ವತಂತ್ರವಾಗಿ ಇಲ್ಲವೇ ಇತರೆ ಸಂಸ್ಥೆಗಳೊಡಗೂಡಿ ಅಥವಾ ಸಂಸ್ಥೆಗಳ

ನೆರವಿನಿಂದ ಕೈಗೊಂಡು ವ್ಯವಸಾಯಗಾರರಿಗೆ ಮಾಹಿತಿಯನ್ನೊದಗಿಸುವುದು, ಅಗತ್ಯವುಳ್ಳ ಶಿಕ್ಷಣ ತರಬೇತಿ ಮತ್ತು ಮಾಹಿತಿಗಳನ್ನೊದಗಿಸುವುದರ ಮೂಲಕ ಮಿಶ್ರ ಬೆಳೆಗಳನ್ನು ಬೆಳೆಸುವಂತೆ ವ್ಯವಸಾಯಗಾರರನ್ನು ಪ್ರೋತ್ಸಾಹಿಸುವುದು. ಉತ್ಪನ್ನಗಳ ಶುದ್ಧೀಕರಣ ಸಂಸ್ಕರಣೆ ಮತ್ತು ಪ್ಯಾಕಿಂಗ್ ವ್ಯವಸ್ಥೆಗಳನ್ನು ಮಾಡುವುದು. ಸಹಕಾರಿಯ ಕಾರ್ಯವ್ಯಾಪ್ತಿಯೊಳಗೆ ಬೆಳೆಗಾರಿಕಾಗಾರರಿಗೆ ಅಗತ್ಯವುಳ್ಳ ಪೂರಕ ವ್ಯವಸ್ಥೆಗಳಾದ ಉಪಕರಣಗಳು, ರಾಸಾಯನಿಕ ಮತ್ತು ಸಾವಯವ ಗೊಬ್ಬರಗಳು ಕ್ರಿಮಿನಾಶಕ ಮತ್ತು ಶಿಲೀಂದ್ರನಾಶಕಗಳು, ಬೀಜ ಮತ್ತು ತಳಿಗಳನ್ನು ಖರೀದಿಸಿ, ಚಿಲ್ಲರೆ ನೆಲೆಯಲ್ಲಿ ಸರಬರಾಜು ಮಾಡುವ ಉದ್ದೇಶಗಳನ್ನು ಹೊಂದಿದ್ದು, ಈ ನಿಟ್ಟಿನಲ್ಲಿ ಕಾರ್ಯನಿರ್ವಹಿಸುತ್ತಿದೆ.

ಸಂಪರ್ಕ ವಿವರ: ಕದಂಬ ಮಾರ್ಕೆಟಿಂಗ್ ಸೌಹಾರ್ದ ಸಹಕಾರಿ ನಿ., ಗೋಡೌನ್ ನಂ.7, ಹೊಸ ಮಾರ್ಕೆಟ್ ಯಾರ್ಡ್, ಶಿರಸಿ, ಉತ್ತರ ಕನ್ನಡ – 581 402, ದೂರವಾಣಿ: 08384 233103, ವೆಬ್: http://kadambamarketing.com



## ಶ್ರೀ ಸಿದ್ದಗಂಗಾ ವಿದ್ಯಾಸಂಸ್ಥೆ ನೌಕರರ ಪತ್ತಿನ ಸೌಹಾರ್ದ ಸಹಕಾರಿ ನಿ., ತುಮಕೂರು

05–ಫೆಬ್ರವರಿ–2003ರಂದು ನೋಂದಣಿಗೊಂಡ ಈ ಸಹಕಾರಿಯು ಆದಾಯ ತೆರಿಗೆ ಇಲಾಖೆ ಹಾಗೂ ಸರ್ಕಾರಗಳು ಪ್ರೋತ್ಸಾಹಿಸುವ ಉಳಿತಾಯ ಯೋಜನೆಗಳನ್ನು ಸದಸ್ಯರಲ್ಲಿ ಪ್ರಚುರ ಪಡಿಸುವ ಮತ್ತು ಅವುಗಳನ್ನು ಉಪಯೋಗಿಸಿಕೊಳ್ಳಲು ಅಗತ್ಯವಾದ ಸೇವೆಗಳನ್ನು ಒದಗಿಸುತ್ತಿದೆ. ಸರ್ಕಾರದ ಭದ್ರತಾ ಪತ್ರಗಳನ್ನು ಸದಸ್ಯರ ಪರವಾಗಿ ಕೊಳ್ಳುವುದು, ಮಾರಾಟ ಮಾಡುವುದು, ಸಂಗ್ರಹಿಸುವ ಕೆಲಸಗಳನ್ನು ಮಾಡುವುದು. ಸಹಕಾರಿಯ ವಹಿವಾಟಿನ ಅನುಕೂಲಕ್ಕಾಗಿ ಇತರೆ ಆರ್ಥಿಕ ನೆರವು ನೀಡುವ ಸಂಸ್ಥೆಗಳೊಂದಿಗೆ ಒಪ್ಪಂದ ಏರ್ಪಡಿಸುವುದು. ಸದಸ್ಯರ ಪರವಾಗಿ ಹಣ ಮತ್ತು ಆಧಾರ ಪತ್ರಗಳನ್ನು ಸಂಗ್ರಹಿಸುವುದು ಮತ್ತು ರವಾನಿಸುವುದು. ಕಂತು ಖರೀದಿ (Hire Purchase) ಅಥವಾ ತೋರಾಧಾರದ (Hypothication) ಆಧಾರದ ಮೇಲೆ ಮೋಟಾರು ವಾಹನಗಳ ಕಾಯ್ದೆಯಲ್ಲಿ ವಿವರಿಸಿರುವಂತೆ ಮೋಟಾರ್ ಯಂತ್ರಗಳನ್ನು ಕೊಳ್ಳಲು ಸದಸ್ಯರಿಗೆ ಸಾಲ ಒದಗಿಸುವುದು. ನಿರ್ದೇಶಕ ಮಂಡಳಿಯು ರೂಪಿಸಿ ಮತ್ತು ಸಾಮಾನ್ಯ ಸಭೆ ವಿಧಿಸುವ ಮಿತಿಗಳಲ್ಲಿ ಸದಸ್ಯರ/ಸದಸ್ಯರ ಮಕ್ಕಳ ಶಿಕ್ಷಣವನ್ನು ಪ್ರೋತ್ಸಾಹಿಸಲು ನಿಧಿಗಳನ್ನು ಸ್ಥಾಪಿಸುವುದು ಮುಂತಾದ ಉದ್ದೇಶಗಳನ್ನು ಹೊಂದಿದ್ದು, ಈ ನಿಟ್ಟಿನಲ್ಲಿ ಕಾರ್ಯನಿರ್ವಹಿಸುತ್ತಿದೆ.

ಸಂಪರ್ಕ ವಿವರ: ಶ್ರೀ ಸಿದ್ಧಗಂಗಾ ವಿದ್ಯಾ ಸಂಸ್ಥೆ ನೌಕರರ ಪತ್ತಿನ ಸೌಹಾರ್ದ ಸಹಕಾರಿ ನಿ., ಎಸ್ ಐ ಟಿ ಪ್ರಿಮೈಸಸ್, ತುಮಕೂರು – 572 103, ದೂರವಾಣಿ: 0816 2214026.



## ವಿಜ್ಞಾನೇಶ್ವರ ಸೌಹಾರ್ದ ಸಹಕಾರಿ ನಿ., ಗುಲ್ಬರ್ಗಾ

10–ಏಪ್ರಿಲ್–2002ರಂದು ನೋಂದಣಿಗೊಂಡ ಸಹಕಾರಿಯ ಕಾರ್ಯಕ್ಷೇತ್ರದ ವ್ಯಾಪ್ತಿಯು ಕರ್ನಾಟಕ ರಾಜ್ಯ ಆಗಿರುತ್ತದೆ. ಮಿತಾಕ್ಷರ ಗ್ರಂಥಕರ್ತ ವಿಜ್ಞಾನೇಶ್ವರನ ಜ್ಞಾಪಕಾರ್ಥವಾಗಿ, ವಿಜ್ಞಾನೇಶ್ವರನ ಕಾರ್ಯಕ್ಷೇತ್ರವಾಗಿದ್ದ ಗುಲ್ಬರ್ಗ ಜಿಲ್ಲೆಯ ಮರ್ತೂರಿನಲ್ಲಿ ಸ್ಮಾರಕ ಮಂದಿರ ಹಾಗೂ ಸಂಶೋಧನಾ ಭವನ ನಿರ್ಮಾಣ ಮಾಡುವುದು. ಪ್ರಾಚೀನ ಭಾರತದ ಕಾನೂನು ಇತಿಹಾಸದ ಬಗ್ಗೆ ಪುಸ್ತಕ ಭಂಡಾರವನ್ನು ಸ್ಥಾಪಿಸುವುದು, ಪ್ರಾಚೀನ ಭಾರತದ ವ್ಯವಹಾರ ಧರ್ಮ ಹಾಗೂ ರಾಜಧರ್ಮದ ಬಗ್ಗೆ ಸಂಶೋಧನೆ ಮಾಡುವುದು, ಭಾರತೀಯ ಸಂವಿಧಾನ, ಕಾನೂನು ಹಾಗೂ ನ್ಯಾಯಶಾಸ್ತ್ರಗಳ ಬಗ್ಗೆ ಪುಸ್ತಕಗಳನ್ನು ನಿಯತಕಾಲಿಕೆಗಳನ್ನು ಪ್ರಕಟಿಸುವುದು ಮತ್ತು ವಿಚಾರ ಸಂಕಿರಣಗಳನ್ನು ಮತ್ತು ಸಮ್ಮೇಳನಗಳನ್ನು ಹಾಗೂ ತರಬೇತಿ ಶಿಬಿರಗಳನ್ನು ಏರ್ಪಡಿಸುವುದು, ನ್ಯಾಯ ಶಾಸ್ತ್ರ ಮತ್ತು ಭಾರತೀಯ ಮೌಲ್ಯಗಳ ಬಗ್ಗೆ ಸಂಶೋಧನೆ ಮಾಡುವ ಸಂಶೋಧಕರಿಗೆ ವಿದ್ಯಾರ್ಥಿ ವೇತನ ಮತ್ತು ಅವಶ್ಯಕ ಸೌಲಭ್ಯಗಳನ್ನು ಒದಗಿಸುವುದು, ಮುಖ್ಯ ಉದ್ದೇಶಗಳನ್ನು ಈಡೇರಿಸುವಂತಹ ವಿದ್ಯಾಸಂಸ್ಥೆಗಳನ್ನು ಸ್ಥಾಪಿಸುವುದು ಮುಂತಾದ ಉದ್ದೇಶಗಳನ್ನೊಳಗೊಂಡು ಸಂಶೋಧನಾ ಕ್ಷೇತ್ರದಲ್ಲಿ ಕಾರ್ಯನಿರ್ವ ಹಿಸುತ್ತಿರುವ ಸಂಸ್ಥೆ ಇದಾಗಿದ್ದು ವಿಜ್ಞಾನೇಶ್ವರ ಸಂಶೋಧನಾ ಪುಸ್ತಕ ಭಂಡಾರವನ್ನು ಕೂಡ ಹೊಂದಿದೆ.

ಸಂಪರ್ಕ ವಿವರ: ವಿಜ್ಞಾನೇಶ್ವರ ಸೌಹಾರ್ದ ಸಹಕಾರಿ ನಿ., ನಂ. 3/66, ಗಿರಿಧಾಮ, ರಾಷ್ಟ್ರಕೂಟ ರಸ್ತೆ, ಓಮ್ನಾಗರ, ವಿಶ್ವವಿದ್ಯಾಲಯ ರಸ್ತೆ, ಗುಲ್ಬರ್ಗಾ – 585 105, ದೂರವಾಣಿ: 08472 445002.



## ಶ್ರೀ ಜ್ಯೋತಿ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ಏಕ್ಸಾಂಬಾ

31–ಮಾರ್ಚ್–2003ರಂದು ನೋಂದಣಿಗೊಂಡ ಈ ಸಹಕಾರಿಯು ಜನತಾ ಬಜಾರ್ ಮಾದರಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ವಿಶೇಷ ಸಹಕಾರಿಯಾಗಿದೆ. ಸದಸ್ಯರುಗಳಲ್ಲಿ ಮತ್ತು ಠೇವಣಿದಾರರಲ್ಲಿ ಆರ್ಥಿಕ ಹಿತಾಸಕ್ತಿಗಳನ್ನು ವೃದ್ಧಿಸುವುದು ಹಾಗೂ ಮಿತವ್ಯಯ ಉಳಿತಾಯ ಮತ್ತು ಪರಸ್ಪರ ಸಹಾಯಕ್ಕೆ ಉತ್ತೇಜನ ಕೊಡುವುದು ಸೇರಿದಂತೆ ಸದಸ್ಯರೊಡಗೂಡಿ ಗೃಹಬಳಕೆ ವಸ್ತಗಳು ಹಾಗೂ ಇನ್ನಿತರೆ ವಸ್ತುಗಳ ಉತ್ಪಾದನೆ ಮಾಡುವುದು, ವಿಲೇವಾರಿ ಮಾಡುವುದು, ಖರೀದಿ ಮಾಡುವುದು ಮತ್ತು ಮಾರಾಟ ಮಾಡುವುದು, ಇತರರಿಂದ ವಸ್ತುಗಳನ್ನು ಪಡೆದುಕೊಂಡು ಮಾರ್ಕೆಟಿಂಗ್ ಮಾಡುವುದು, ಡೇರಿ ವಸ್ತುಗಳ ಹಾಗೂ ಉತ್ಪನ್ನಗಳ ಉದ್ದಿಮೆ ಕಾರ್ಯಕೈಗೊಳ್ಳುವುದು ಮುಂತಾದ ಕಾರ್ಯಗಳನ್ನು ನಿರ್ವಹಿಸುತ್ತಿದೆ.

ಪ್ರಿಂಟಿಂಗ್, ಸ್ಕ್ರೀನ್ ಪ್ರಿಂಟಿಂಗ್, ಜಾಹೀರಾತು ಸೇವೆ ಹಾಗೂ ಇನ್ನಿತರೆ ಕೈಗಾರಿಕಾ ಕಾರ್ಯಕ್ರಮಗಳನ್ನು ಕೈಗೊಳ್ಳುವುದು, ಸದಸ್ಯರಿಗೆ ಸಾಲಗಳನ್ನು ಪೂರೈಸುವ ವ್ಯವಹಾರವನ್ನು ಮಾಡುವುದು, ಕೈಗಾರಿಕಾ ಉದ್ದಿಮೆಗೆ ಮತ್ತು ಇಂತಹ ಇತರ ವ್ಯವಹಾರಗಳಿಗೆ ಪ್ರಯೋಜನವಾಗುವಂತಹ ಕೆಲಸ ಕಾರ್ಯಗಳಿಗೆ ಪ್ರೋತ್ಸಾಹ ನೀಡುವುದು,

ಸ್ವಯಂ ಉದ್ಯೋಗ ಮತ್ತು ವೃತ್ತಿಪರ ಉದ್ಯೋಗಕ್ಕೆ ಅನುಕೂಲಕರವಾಗುವಂತಹ ಡಿಪ್ಲೋಮಾ ಕೋರ್ಸ್‌ಗಳನ್ನು ಜರುಗಿಸುವುದು, ಸ್ವ–ಉದ್ಯೋಗಸ್ಥರಿಗೆ ಸ್ವಂತ ಉದ್ದಿಮೆ ಸ್ಥಾಪಿಸಿಕೊಳ್ಳಲು ಹಣಕಾಸಿನ ಮತ್ತು ತಾಂತ್ರಿಕ ಸಹಾಯವನ್ನು ಮಾಡುವುದು, ಗ್ರಾಮೀಣ ಮಕ್ಕಳಿಗೆ ಮತ್ತು ಮಹಿಳೆಯರಿಗೆ ಅನುಕೂಲವಾಗುವಂತೆ ವಿವಿಧ ಹಂತಗಳಲ್ಲಿ ಶಿಕ್ಷಣ ಸಂಸ್ಥೆಗಳನ್ನು ತೆರೆಯುವುದು, ಸಾಮೂಹಿಕ ಕೈಗಾರಿಕಾ ಕಾಮಗಾರಿ ಘಟಕಗಳನ್ನು ಸ್ಥಾಪಿಸುವುದು, ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯಿಂದ ಆರ್ಥಿಕ ನೆರವನ್ನು ಪಡೆದು ಆಹಾರ ಸಂಸ್ಕರಣ ಸ್ಥಾಪಿಸಿಕೊಳ್ಳುವುದು, ರಾಷ್ಟ್ರೀಯ ತೋಟಗಾರಿಕೆ ಮಂಡಳಿಯಿಂದ ಸಾಲಸೌಲಭ್ಯಗಳನ್ನು ಪಡೆದು ತೋಟಗಾರಿಕೆ ಉತ್ಪಾದನೆಗಳ ದಾಸ್ತಾನು ಸಂಸ್ಕರಣೆ ಹಾಗೂ ಮಾರಾಟದ ವ್ಯವಸ್ಥೆ ಮಾಡುವುದು, ಟೇಲರಿಂಗ್, ಟೈಪಿಂಗ್ ಹಾಗೂ ಪ್ರಿಟಿಂಗ್ ಕ್ಲಾಸುಗಳನ್ನು ತೆರೆಯುವುದು, ಟಿ.ವಿ

ಹಾಗೂ ಟ್ರಾನ್ಸಿಸ್ಟರ್‌ಗಳ ಬಿಡಿಭಾಗಗಳನ್ನು ಹಾಗೂ ಜೋಡನೆ ಕಾರ್ಯವನ್ನು ಕೈಗೊಳ್ಳುವ ಘಟಕವನ್ನು ಸ್ಥಾಪಿಸುವುದು ಮುಂತಾದ ಉದ್ದೇಶಗಳನ್ನು ಹೊಂದಿರುತ್ತದೆ.

ರಬ್ಬರ್ ಸ್ಟ್ಯಾಂಪ್, ಕವರ್ಸ್, ಫೈಲು, ಬುಕ್ ಬೈಂಡಿಂಗ್, ಕಡು, ಪೆನ್ಸಿಲ್ ಹಾಗೂ ಸೋಪು ಪೌಡರ್‌ಗಳನ್ನು ತಯಾರಿಸುವ ಘಟಕಗಳನ್ನು ಸ್ಥಾಪಿಸುವುದು ಮತ್ತು ಉತ್ಪಾದಿಸಿದ ವಸ್ತುಗಳ ಮಾರಾಟ ವ್ಯವಸ್ಥೆ ಮಾಡುವುದು, ಸಾರ್ವಜನಿಕರ ಪಡಿತರ ಹಾಗೂ ಇತರ ಜೀವನಾವಶ್ಯಕ ವಸ್ತುಗಳನ್ನು ಖರೀದಿಸುವುದು



ಮತ್ತು ಮಾರಾಟ ಮಾಡುವುದು, ಸಂಘದ ಹಾಗೂ ಸದಸ್ಯರ ಸಾಮಾಜಿಕ ಹಿತಾಸಕ್ತಿಯನ್ನು ಪ್ರೋತ್ಸಾಹಿಸುವ ದೃಷ್ಟಿಯಿಂದ ಪಶು ಸಂಗೋಪನೆ, ಕೋಳಿಸಾಗಾಣಿಕೆ, ತೋಟಗಾರಿಕೆ ಇತ್ಯಾದಿ ಗೃಹಕೈಗಾರಿಕೆಗಳ ವೃತ್ತಿಯನ್ನು ಹಮ್ಮಿಕೊಳ್ಳುವುದು ಮತ್ತು ಸದಸ್ಯರಲ್ಲಿ ಈ ಬಗ್ಗೆ ಆಸಕ್ತಿಯನ್ನು ಬೆಳೆಸುವುದು, ಸರಕಾರದಿಂದ ಅನುದಾನ ಪಡೆಯುತ್ತಿರುವ ಸಂಸ್ಥೆಗಳಿಂದ ಮತ್ತು ಅರೆ ಸರಕಾರಿ ಸಂಸ್ಥೆಗಳಿಂದ ನಡೆಸಲ್ಪಡುತ್ತಿರವ ಹಾಸ್ಟೆಲುಗಳಿಂದ ಠೋಕ ರೀತಿಯಿಂದಾಗಲಿ ಅಥವಾ ಕಿರಕೋಳ ರೀತಿಯಿಂದಾಗಲಿ ಆಹಾರ ಧಾನ್ಯ, ಬಟ್ಟೆ ಹಾಗೂ ಇತರೆ ಜೀವನಾವಶ್ಯಕ ವಸ್ತುಗಳನ್ನು ವಿತರಿಸುವ ಕಾರ್ಯವನ್ನು ಕೈಗೊಳ್ಳುವುದು, ಸದಸ್ಯರಿಗೆ ಕೃಷಿ ಆಧಾರಿತ ಉದ್ದಿಮೆಗೆ ಹಾಗೂ ಸದಸ್ಯರ ಮಕ್ಕಳ ಉನ್ನತ ಶಿಕ್ಷಣಕ್ಕೆ ಹಣಕಾಸನ್ನು ಪೂರೈಸುವುದು ಸೇರಿದಂತೆ ಅನೇಕ ಕಾರ್ಯಯೋಜನೆಯನ್ನು ಹೊಂದಿರುವ ಸಂಸ್ಥೆ ಇದಾಗಿದೆ.

ಸಂಪರ್ಕ ವಿವರ: ಶ್ರೀ ಜ್ಯೋತಿ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ಎಕ್ಸಾಂಬಾ, ಚಿಕ್ಕೋಡಿ, ಬೆಳಗಾವಿ – 591 244, ದೂರವಾಣಿ: 08338 656523.



## ಮೈಸೂರು ಹಾಗೂ ಚಾಮರಾಜನಗರ ಜಿಲ್ಲಾ ವಾಹನ ಮಾಲೀಕರ ಸೌಹಾರ್ದ ಸಹಕಾರಿ ನಿ., ಮೈಸೂರು

05–ಸೆಪ್ಟೆಂಬರ್–2002ರಂದು ನೋಂದಣಿಗೊಂಡ ಈ ಸಹಕಾರಿಯು ಸದಸ್ಯರುಗಳಲ್ಲಿ ಸ್ವಸಹಾಯ, ಪರಸ್ಪರ ನೆರವಿನ ಆಧಾರದ ಮೇಲೆ ಸಹಕಾರ ತತ್ವಗಳ ಮಾರ್ಗದರ್ಶನದಲ್ಲಿ ಅವರ ಜೀವನ ವಿಧಾನಗಳನ್ನು ನಡೆಸಲು ಪ್ರೋತ್ಸಾಹಿಸುವುದು, ಜವಾಬ್ದಾರಿಯುತ ಸ್ಪರ್ಧಾತ್ಮಕ, ಸ್ವಾವಲಂಬಿ, ಆರ್ಥಿಕ, ಉದ್ಯಮವನ್ನಾಗಿ ಬೆಳೆಸಿ ಪ್ರೋತ್ಸಾಹಿಸುವುದು, ಸದಸ್ಯರ ಆರ್ಥಿಕಮಟ್ಟವನ್ನು ಉತ್ತಮಗೊಳಿಸಲು ಹಾಗೂ ಸ್ವಾವಲಂಬಿಗಳಾಗಿ ಸ್ವತಂತ್ರ ಉದ್ಯಮಗಳನ್ನು ನಡೆಸಲು ಅನುಕೂಲವಾಗುವಂತೆ ಸಾಲದ ರೂಪದಲ್ಲಿ ಹಣವನ್ನು ನೀಡುವುದು ಸೇರಿದಂತೆ ಸಾರಿಗೆ ವಾಹನಕ್ಕೆ ಸಂಬಂಧಪಟ್ಟಂತೆ ದಳ್ಳಾಳಿ ಹಂಚಿಕೆದಾರರಂತೆ ವರ್ತಿಸುವುದು, ಸಹಕಾರಿಯ ಸದ್ಯರಿಗೆ ಮೋಟಾರು ವಾಹನಗಳ ಬಿಡಿಭಾಗಗಳನ್ನು ಕೊಳ್ಳಲು ಮತ್ತು ಮಾರಾಟ ಮಾಡಲು ಸಹಾಯ ಮಾಡುವುದು, ಮೇಲೆ ಸೂಚಿಸಿರುವ ವಸ್ತುಗಳ ಆಯಾತ ಮತ್ತು ನಿರ್ಯಾತ ಮಾಡುವುದು, ದಳ್ಳಾಳಿಗಳಾಗಿ ಹಂಚಿಕೆದಾರರಾಗಿ ಚಿಲ್ಲರೆ ಬಿಡಿ ಮಾರಾಟಗಾರರಾಗಿ ಮೋಟಾರು ವಾಹನಗಳು, ಬಿಡಿ ಭಾಗಗಳು, ಟೈರ್ ಮತ್ತು ಟ್ಯೂಬ್‌ಗಳನ್ನು ಸೇರಿದಂತೆ ಟಾರ್‌ಪಾಲುಗಳು, ವ್ಯವಸಾಯದ ವಾಹನಗಳು, ಮೃದು ಚಾಲಕ ಎಣ್ಣೆಗಳು, ಇತರ ಬಿಡಿ ಭಾಗಗಳ ವ್ಯಾಪಾರಕ್ಕೆ ದಳ್ಳಾಳಿಗಳಾಗಿ ಹಂಚಿಕೆದಾರರಾಗಿ ವರ್ತಿಸುವುದು, ಸಹಕಾರಿಯ ಸದಸ್ಯರಿಗೆ ಸರ್ವಿಸ್ ಸ್ಟೇಷನ್, ವೇಬ್ರಿಡ್ಜ್ ಮತ್ತು ಕಾರ್ಯಾಗಾರಗಳನ್ನು ಸಂಯೋಜಿಸಲು ಬಿಡಿ ಭಾಗಗಳನ್ನು ಸರಿಪಡಿಸಲು ಸಹಾಯ ಮಾಡುವುದು, ವಾಹನಗಳ ವ್ಯಾಪಾರದಲ್ಲಿ ದಳ್ಳಾಳಿ ಸಂಸ್ಥೆಯನ್ನು ಸಹಕಾರಿಯ ಸದಸ್ಯರ ಸಹಾಯಕ್ಕಾಗಿ ತೆರೆಯುವುದು, ಸಾರಿಗೆ ಉದ್ಯಮಕ್ಕೆ ಸಂಬಂಧಪಟ್ಟಂತೆ ಆಡಳಿತ ವ್ಯಾಪ್ತಿಯಲ್ಲಿ ಬರುವ ಪ್ರದೇಶದಲ್ಲಿ ಟರ್ಮಿನಲ್ ನಿರ್ವಹಣೆ ನಿರ್ಮಾಣ ಮಾಡಲು ಹಾಗೂ ಡ್ರೈವಿಂಗ್ ಸ್ಕೂಲ್ ಮತ್ತು ಪಲ್ಯೂಷನ್ ಟೆಸ್ಟಿಂಗ್ ಸೆಂಟರ್ ವ್ಯವಸ್ಥೆ ಮಾಡುವುದು ಮತ್ತು ನಿರ್ವಹಿಸುವುದು, ಪೆಟ್ರೋಲ್ ಮತ್ತು ಡೀಸೆಲ್ ಬಂಕ್ ನಿರ್ಮಾಣ ನಿರ್ವಹಣೆ ಮಾಡುವುದು, ಪರಿಸರ ಪ್ರಜ್ಞೆ, ನೈರ್ಮಲ್ಯ, ವನಮಹೋತ್ಸವ, ಶುಭ್ರ ಪರಿಸರ, ಶುಭ್ರ ಜೀವನ, ರಕ್ತದಾನ ಕಾರ್ಯಕ್ರಮ, ನೇತ್ರದಾನ ಕಾರ್ಯಕ್ರಮ, ಆರೋಗ್ಯ ಶಿಬಿರ, ಕುಟುಂಬ ಯೋಜನಾ ಶಿಬಿರಗಳನ್ನು ವೈದ್ಯಕೀಯ ಸಲಹಾ ಕೇಂದ್ರಗಳನ್ನು ಹಾಗೂ ಉಚಿತ ಸಲಹಾ ಕೇಂದ್ರಗಳನ್ನು ಸ್ಥಾಪಿಸುವ ಹಾಗೂ ನಡೆಸುವ ವಿಶಿಷ್ಟ ಉದ್ದೇಶಗಳನ್ನು ಹೊಂದಿದ್ದು ಈ ಉದ್ದೇಶಗಳನ್ನು ಸಾಧಿಸುವ ನಿಟ್ಟಿನಲ್ಲಿ ಕಾರ್ಯನಿರ್ವಹಿಸುತ್ತಿದೆ.

ಸಂಪರ್ಕ ವಿವರ: ಮೈಸೂರು ಹಾಗೂ ಚಾಮರಾಜನಗರ ಜಿಲ್ಲಾ ವಾಹನ ಮಾಲೀಕರ ಸೌಹಾರ್ದ ಸಹಕಾರಿ ನಿ., ನಂ. 1164/1 – 2, ಮೈಸೂರು ನಗರಪಾಲಿಕೆ ಕಟ್ಟಡ, ಬಿದರಮ್ ಕೃಷ್ಣಪ್ಪ ರಸ್ತೆ, ದೇವರಾಜ ಮೊಹಲ್ಲಾ, ಮೈಸೂರು – 570 024, ದೂರವಾಣಿ: 0821 2429023.



## ಬಿಜಾಪುರ ತೋಟಗಾರಿಕಾ ಸೌಹಾರ್ದ ಸಹಕಾರಿ ನಿ., ಬಿಜಾಪುರ

19–ಜನವರಿ–2002ರಂದು ನೋಂದಣಿಗೊಂಡ ಈ ಸಹಕಾರಿಯು ಕೃಷಿ, ತೋಟಗಾರಿಕೆ ಹಾಗೂ ಅವುಗಳಿಗೆ ಸಂಬಂಧಿಸಿದ ಇತರೆ ಪೂರಕ ವಸ್ತುಗಳಿಗೆ ಅಂದರೆ ಹಣ್ಣು, ಹಣ್ಣಿನ ರಸ ಮತ್ತು ತರಕಾರಿಗಳು, ಸಂಸ್ಕರಿಸಿ ಒಣಗಿಸಿದ ಹಣ್ಣು/ತರಕಾರಿ ಹಾಗೂ ಆಹಾರ ಧಾನ್ಯ, ಬೀಜ, ಸಾಂಬಾರು ಪದಾರ್ಥ, ಔಷದೀಯ ಸಸ್ಯಗಳ ಉತ್ಪನ್ನ, ಹೈನುಗಾರಿಕೆ ಇತ್ಯಾದಿಗಳಿಗೆ ಮಾರುಕಟ್ಟೆ ವ್ಯವಸ್ಥೆ ಕಲ್ಪಿಸುವ ಮುಖ್ಯ ಉದ್ದೇಶದೊಂದಿಗೆ ಕಾರ್ಯಾರಂಭ ಮಾಡಿತು. ಮಾರುಕಟ್ಟೆಯನ್ನು ಮಧ್ಯವರ್ತಿಯಾಗಿ ಒದಗಿಸುವುದು ಮತ್ತು ಒಪ್ಪಂದ ಕೃಷಿ/ತೋಟಗಾರಿಕೆ ಪದ್ಧತಿಯ ಮೂಲಕ ಸೌಲಭ್ಯ ಕಲ್ಪಿಸುವುದು, ತೋಟಗಾರಿಕೆ ಮತ್ತು ಕೃಷಿ ಉತ್ಪನ್ನಗಳಿಗೆ ಸಂಬಂಧಿಸಿದ ವಸ್ತುಗಳ ಉತ್ಪನ್ನಗಳ ಗ್ರೆಡಿಂಗ್, ಪ್ರೊಸೆಸಿಂಗ್‌ಗಾಗಿ ವ್ಯವಸ್ಥೆ ಕಲ್ಪಿಸುವುದು, ಶೀತಲಗೃಹ, ಗ್ರೀನ್ ಹೌಸ್‌ಗಳನ್ನು ನಿರ್ಮಿಸುವುದು, ಕೃಷಿ ತೋಟಗಾರಿಕಾ ಉತ್ಪನ್ನಗಳಿಗೆ ಪ್ರಕ್ಯುಮೆಂಟ್ ಕೇಂದ್ರ, ವೇರ್ ಹೌಸ್, ಶೀತಲಮನೆ, ನರ್ಸರಿ, ಟಿಶ್ಯು ಕಲ್ಚರ್/ಹೂವುಗಳಿಗೆ ಹಸಿರು ಮನೆ, ಇತ್ಯಾದಿಗಳಿಗೆ ಗ್ರೆಡಿಂಗ್ ಪ್ಯಾಕಿಂಗ್ ಪ್ರೊಸಿಸಿಂಗ್ ಮೂಲಕ ಸಂಗ್ರಹಿಸಿ ಒಪ್ಪಂದ ಕೃಷಿಯ ಪದ್ಧತಿಯ ಮೂಲಕ ವಿತರಣ ವ್ಯವಸ್ಥೆಯನ್ನು ರಿಟೇಲ್ ಸರಕಾರಿ/ಅರೆ ಸರಕಾರಿ, ಖಾಸಗಿ ಮತ್ತು ಕಂಪನಿಗಳಿಗೆ ಮಧ್ಯವರ್ತಿಯಾಗಿ ಮಾರುಕಟ್ಟೆಯ ಸೌಲಭ್ಯವನ್ನು ಕಲ್ಪಿಸಿ ಕೊಡುವುದು ಮುಂತಾದ ಉದ್ದೇಶಗಳನ್ನು ಹೊಂದಿದ್ದು ಗ್ರಾಮೀಣ ಭಾಗದ ಕೃಷಿ ಉತ್ಪನ್ನಗಳಿಗೆ ಮಾರುಕಟ್ಟೆ ಒದಗಿಸುವ ನಿಟ್ಟಿನಲ್ಲಿ ಕಾರ್ಯನಿರ್ವಹಿಸುತ್ತಿದೆ.

ಇವುಗಳಲ್ಲದೆ, ತೋಟಗಾರಿಕ ಮತ್ತು ಕೃಷಿಗೆ ಪೋಷಕವಾದ ಪರೀಕ್ಷಣೆ, ತರಬೇತಿ, ಶಿಕ್ಷಣ, ಅಧ್ಯಯನ ಪ್ರವಾಸ, ಆರ್ಗನಿಕ್ ಫಾರಮಿಂಗ್/ಯುರೊಗ್ಯಾಪ ಪ್ರಮಾಣ ಪತ್ರ ಸರ್ಟಿಫಿಕೇಶನ್ ರಾಷ್ಟ್ರೀಯ/ಅಂತರಾಷ್ಟ್ರೀಯ ಸಾವಯವ ಒಕ್ಕೂಟಗಳ ಇತ್ಯಾದಿ ನೆರವಿನಿಂದಿಗೆ ಅಳವಡಿಸಿ ಸೌಲಭ್ಯ ಕಲ್ಪಿಸುವುದು, ಪರಿಸರ ಸ್ನೇಹಿ ಅರಣ್ಯ, ಗ್ರಾಮ ನೈರ್ಮಲ್ಯೀಕರಣ, ಜಲಸಂಗ್ರಹಣ, ಇಂಧನ, ಪವನ, ಸೋಲಾರ ಶಕ್ತಿ, ಇತ್ಯಾದಿಯ ಮೂಲಕ ಅನುಷ್ಠಾನಗೊಳಿಸುವುದು ಮತ್ತು ಅವುಗಳಿಗೆ ಅಭಿವೃದ್ಧಿಗೆ ಸರಕಾರಿ/ಅರೆ ಸರಕಾರಿಗಳ ನೆರವು ಪಡೆಯುವುದು, ಎಲ್ಲ ಕ್ಷೇತ್ರಗಳ ಅಭಿವೃದ್ಧಿಯ ಅನುಷ್ಠಾನದ ಮೂಲಕ ಇಂಡಿವ್ಯುಜಲ ಫಾರ್ಮರ್ಸ

ಸೆಲ್ಪ ಹೆಲ್ಪ ಗ್ರುಪ, ಎನ್.ಜಿ.ಓ ಇತ್ಯಾದಿಗಳ ಸಂಸ್ಥೆಗಳ ಅಡಿಯಲ್ಲಿ ಮಾನವ/ಸಸ್ಯ ಪೋಷಣೆಗೆ ವಿಮಾ ಸೌಲಭ್ಯವನ್ನು ಅನುಷ್ಟಾನಗಳಿಗೆ ಸೌಲಭ್ಯ ಒದಗಿಸುವುದು ಮತ್ತು ಆರ್ಥಿಕ ನೆರವನ್ನು ಸಹಕಾರಿ/ವಾಣಿಜ್ಯ/ಸಂಸ್ಥೆಗಳ ಮೂಲಕ ಪಡೆದು ಎಜಸ್ಸಿ ಮೂಲಕ ಕಾರ್ಯನಿರ್ವಹಿಸುವುದು ಮತ್ತು ಮರುಪಾವತಿ ಆರ್ಥಿಕ ಸಹಾಯವನ್ನು ನೀಡುವುದು, ಪೊಗ್ರೆಸಿವ್ ಫಾರ್ಮರುಗಳ ವೈನಿಯಾರ್ಡನ್ನು ಸಾವಯವ ಕೃಷಿ ಉತ್ತೇಜನ ನೀಡಿ ಬೆಳೆಸುವುದು ಮತ್ತು ದೇಶಿಯ/ವಿದೇಶಿ ಕಂಪನಿಗಳಿಗೆ ತೋಟಗಾರಿಕಾ ಉತ್ಪನ್ನಗಳನ್ನು ಮಧ್ಯವರ್ತಿಯಾಗಿ ವಹಿವಾಟು ಮಾಡುವುದು, ತೋಟಗಾರಿಕಾ ಹಾಗೂ ಕೃಷಿ ಬೆಳೆಗಳನ್ನು ನೈಸರ್ಗಿಕವಾಗಿ ಬೆಳೆಯಲು ವಿಜ್ಞಾನ, ಜೈವಿಕ ತಂತ್ರಜ್ಞಾನ, ಅಗ್ರೋಕೆಮಿಕಲ್ಸ್, ಕೆಮಿಕಲ್ಸ್, ಪೇಸ್ಟ್/ಫರ್ಟಿಗೇಶನ್/ಸಸ್ಯವರ್ಧಕ, ಬಯೋ ಪ್ರಾಡಕ್ಟ್, ಸಾವಯವ ಕೃಷಿ ಪದ್ಧತಿ ಮತ್ತು ಬಯೋಟೆಕ್ನಾಲಜಿ ಬಗ್ಗೆ ಸಂಶೋಧನೆಗೆ ನೆರವಾಗುವುದು ಮತ್ತು ಅವುಗಳ ಉತ್ಪನ್ನಗಳಿಗೆ ಮಾರುಕಟ್ಟೆ ವ್ಯವಸ್ಥೆ ಕಲ್ಪಿಸುವುದು ಮತ್ತು ಅಂತಹ ಉತ್ಪನ್ನಗಳಿಗೆ ಮಧ್ಯವರ್ತಿಯಾಗಿ ಅಥವಾ ಏಜೆನ್ಸಿ ಪಡೆಯುವುದರ ಮೂಲಕ ಮಾರುಕಟ್ಟೆ ವ್ಯವಸ್ಥೆ ಕಲ್ಪಿಸುವುದು ಮತ್ತು ಅವುಗಳ ಆಮದು ಮತ್ತು ರಫ್ತುಗಳ ಚಟುವಟಿಕೆ ಮೂಲಕ ಕೃಷಿಕರಿಗೆ/ತೋಟಗಾರಿಕೆದಾರರಿಗೆ ನೆರವಾಗುವುದು ಮುಂತಾದ ಕಾರ್ಯಯೋಜನೆಯನ್ನು ಹೊಂದಿದ್ದು ಅವುಗಳನ್ನು ಸಾಧಿಸುವ ನಿಟ್ಟಿನಲ್ಲಿ ಕಾರ್ಯನಿರ್ವಹಿಸುತ್ತಿದೆ.

ಸಂಪರ್ಕ ವಿವರ: ಬಿಜಾಪುರ ತೋಟಗಾರಿಕಾ ಸೌಹಾರ್ದ ಸಹಕಾರಿ ನಿ., ಅಫೀಸ್ ನಂ.ಎ2, ಕೆಎಚ್‌ಬಿ ಕಾಂಪ್ಲೆಕ್ಸ,, ಸೋಲಾಪುರ ಮೇನ್ ರೋಡ್, ಬಿಜಾಪುರ  586101, ದೂರವಾಣಿ: 08352 253497.